ಬರುತ್ತಾ ಇವೆ ಎನ್ನುವುದು ನನಗೆ ಗೊತ್ತಿದೆ. ನಾಳೆಯಿಂದ ಪ್ರಶ್ನೆಗಳಿಗೆ ಉತ್ತರಗಳು ಸರಿಯಾಗಿ ಬರುತ್ತವೆ ಎಂದು ನಾನು ಹೇಳುತ್ತೇನೆ.

ಶ್ರೀ ಡಿ. ಟಿ. ಸೀತಾರಾಮರಾವ್ (ಭದ್ರಾವತಿ).—ಈಗಿನ ಅಸೆಂಬ್ಲಿ ಅಧಿವೇಶನವನ್ನು ಎರಡು ದಿವಸ ಮುಂದುವರಿಸುತ್ತೀರಾ ಅಥವಾ ಇಲ್ಲವೋ ಎನ್ನುವದನ್ನು ತಿಳಿಸುತ್ತೀರಾ?

ಅಧ್ಯಕ್ಷರು.—ಈಗ ಆ ಪ್ರಶ್ನೆ ಇಲ್ಲಿ ಬರುವುದಿಲ್ಲ. ಅದಕ್ಕೆ ಉತ್ತರ ಕೊಡುವದು ಸಾಧ್ಯವಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸ್ವಾಮಿ,

....

ಅಧ್ಯಕ್ಷರು.—ಪ್ರಶ್ನೆಗಳಿಗೆ ಸರಕಾರದಿಂದ ಉತ್ತರ ಪಡೆಯುವ ಬಗ್ಗೆ ಮಾನ್ಯ ಸದಸ್ಯರುಗಳಲ್ಲಿ ಸ್ವಲ್ಪ ಕಳವಳವುಂಟಾಗಿದೆ. ಉತ್ತರ ದೊರೆಯಲು ತಡವಾಗಿವೆ ಎಂಬುದು ತಪ್ಪು. ಅದನ್ನು ನಾನು ತೋರಿಸಿಕೊಡುತ್ತೇನೆ. ಇಂದಿನ ದಿವಸದವರೆಗೆ ಅಂದರೆ ತಾರೀಖು 4ನೆಯ ಆಗಸ್ಟ್ 1959ರವರೆಗೆ ಸರಕಾರದಿಂದ 89 ಪ್ರಶ್ನೆಗಳಿಗೆ ಉತ್ತರ ಬರುವ ನಿರೀಕ್ಷೆಯಿದೆ. ಸರಕಾರದಿಂದ ಈಗಾಗಲೇ 76 ಪ್ರಶ್ನೆಗಳಿಗೆ ಉತ್ತರಗಳು ಬಂದಿವೆ. ಇದರ ವಿವರ ಹೀಗೆ ಇದೆ:—

Number of questions tabled ...	406
Number of questions admitted and sent to Government.	269
Number of replies received ...	76
Number of questions answered ...	53
Number of questions included in the Sixth List.	20
Number of replies on hand ...	3
Number of replies due as on 4th August 1959.	89

MYSORE LAND REFORMS BILL, 1958.

Motion to consider (contd.).

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸ್ವಾಮಿ, ಈಗ ನಾವು ಯಾವ ಭೂಸುಧಾರಣೆಯ ಮಸೂದೆಯನ್ನು ಚರ್ಚೆ ಮಾಡುತ್ತಿದ್ದೇವೆಯೋ ಅದರಮೇಲೆ ನಿನ್ನೆ ಮತ್ತು ಇಂದು ಸಹ ನನಗೆ ಮಾತನಾಡಲು ಅವಕಾಶ ಸಿಕ್ಕಿದೆ. ಅದಕ್ಕಾಗಿ ನನಗೆ ಆನಂದವಾಗಿದೆ. ಇಂದು ಪ್ರಶ್ನೋತ್ತರಗಳ ಬಗ್ಗೆ ನಡೆದ ಚರ್ಚೆಯಲ್ಲಿ ಚತುರರಾದ ಜತ್ತಿಯವರು ಜಾಣರಾದ ಕಡಿದಾಳ್ ಮಂಜಪ್ಪನವರು ಜಾರಿದ್ದಾರೆ, ಬುದ್ಧಿವಂತರಾದ ಕಡಿದಾಳ್ ರವರು ಕುಸಿದಿದ್ದಾರೆ. ಚತುರರಾಗಿದ್ದವರ ಕೈಯಲ್ಲಿ ಈ ಭೂಸುಧಾರಣೆಗೆ ದುರ್ಗತಿ ಯೊದಗಿದೆ. ನಾನೇನೂ ಅವರಷ್ಟು ಬುದ್ಧಿವಂತನಲ್ಲ. ನಾನೊಬ್ಬ ಸರ್ವ ಸಾಮಾನ್ಯ ಮನುಷ್ಯ. ನನ್ನ ಸಾಮರ್ಥ್ಯ ಇದ್ದಷ್ಟು ನಾನು ತಿಳಿದುಕೊಂಡಿದ್ದೇನೆ. ಈ ಭೂಸುಧಾರಣೆಯಿಂದ ದುರ್ಗತಿ ಒದಗುವುದಾದರೆ ಅವರ ಜಾಣತನ ಏನಾಯಿತು? ನಿನ್ನೆಯ ದಿವಸ ನಾನು ಮಾಡಿದ ಭಾಷಣದಲ್ಲಿ ಅನೇಕ ವಿಷಯಗಳನ್ನು ಹೇಳಿದ್ದೇನೆ. ಈ ಭೂಸುಧಾರಣೆಯ ಬಗ್ಗೆ ಸರಕಾರದ ಮನೋವೃತ್ತಿ ಏನಿದೆ ಎನ್ನುವದನ್ನು ನಿನ್ನೆ ಹೇಳಿದ್ದೇನೆ. ಈ ಮಸೂದೆಯಲ್ಲಿರುವ ದೋಷಗಳ ಕಡೆಗೆ ಸರಕಾರದವರು ಸ್ವಲ್ಪ ಗಮನ ಕೊಡಬೇಕಾಗಿದೆ.

2-30 P.M.

ಈ ಮಸೂದೆಯಲ್ಲಿ ಎಷ್ಟುಮಟ್ಟಿಗೆ ಭೂ ಹಿಡುವಳಿದಾರನಿಗೆ ಮತ್ತು ಗೇಣೀದಾರನಿಗೆ ಅವರು ನೇಮಕ ಮಾಡತಕ್ಕ ಅಧಿಕಾರಿಗಳು ಮತ್ತು ಅವರು ಹಾಕತಕ್ಕ ಸೀಲಿಂಗ್ ಅವರು ಹೇಳತಕ್ಕ ಸಹಕಾರ ವ್ಯವಸಾಯ ಪದ್ಧತಿ ಇದರಿಂದ ಕಲ್ಯಾಣವಾಗುತ್ತದೆ, ಜನತೆಯನ್ನು ಎಷ್ಟುದೂರ ಕೊಂಡೊಯ್ಯುತ್ತದೆ ಎಂಬ ಎಲ್ಲಾ ವಿಷಯಗಳನ್ನೂ ಪರಿಶೀಲನೆ ಮಾಡಿದರೆ ನಿಜವಾಗಿಯೂ ಕೂಡ ಇದನ್ನು ಇಲ್ಲಿ ವಿಮರ್ಶೆ ಮಾಡಬೇಕಾದ ಪ್ರಮೇಯವೇ ಇಲ್ಲ. ಆದರೆ ಸರ್ಕಾರದವರು ಇದರಲ್ಲಿರತಕ್ಕ ದುರುದ್ದೇಶಗಳ ನಿವಾರಣೆಗೆ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸುತ್ತೇವೆ, ಅಲ್ಲಿ ಇದನ್ನು ಪರಿಪೂರ್ಣವಾಗಿ ಅಲ್ಲದೇ ಹೋದರೂ ಎಲ್ಲರಿಗೂ ಸಮಾಧಾನ ಕರವಾದ ರೀತಿಯಲ್ಲಿ ಇದರಲ್ಲಿರತಕ್ಕ ದುರ್ಗುಣಗಳನ್ನು ಕಳೆದುಹಾಕಿ ಎಲ್ಲರೂ ಸರ್ವ ಸಾಮಾನ್ಯವಾಗಿ ಒಪ್ಪುವ ರೀತಿಯಲ್ಲಿ ಈ ಬಿಲ್ಲನ್ನು ತಂದು ಶಾಸನ ಕಡತಕ್ಕೆ ಏರಿಸುತ್ತೇವೆ ಎಂದು ಹೇಳುವುದು ಒಂದುದಾರಿ. ಆ ದಾರಿಯಲ್ಲಿ ಹೋಗುವಾಗ ಈ ಲ್ಯಾಂಡ್‌ಕಮಿಷನ್ ಎಂದು ಏನು ಹೇಳಿದ್ದಾರೆ ಇದನ್ನು ನೋಡಿ. ಅವರು ಎಷ್ಟುಮಟ್ಟಿಗೆ ಅಧಿಕಾರಕ್ಕೆ ಅಂಟಿಕೊಂಡಿರಬೇಕೆಂದಿದ್ದಾರೆ, ಎಷ್ಟುಮಟ್ಟಿಗೆ ಅಧಿಕಾರವನ್ನು ದುರ್‌ವಿನಿಯೋಗ ಮಾಡಬಹುದು ಎನ್ನುವುದಕ್ಕೆ ಇದೇ ಒಂದು ಸಣ್ಣ ಉದಾಹರಣೆಯನ್ನಾಗಿ ತೋರಿಸುತ್ತಾ ಇದ್ದೇನೆ. ಇವತ್ತು ತಾನೆ ಒಂದು ಪ್ರಶ್ನೆ ಬಂದಾಗ. ಉತ್ತರ ಹೇಳಿದರು. ಕಾಯರ್ ಬೋರ್ಡ್‌ಗೆ ಯಾವ ಆಧಾರದ ಮೇಲೆ ಮೆಂಬರುಗಳನ್ನು ಹಾಕಿದರು ಎಂಬುದು ನಮಗೆ ವಿಷಯ ಎಲ್ಲ ಖಚಿತವಾಗಿ ಗೊತ್ತಾಯಿತು. ಎಷ್ಟುಮಟ್ಟಿಗೆ ಚಾಕಚಕ್ಯತೆ ಇದೆ ಎಂಬುದನ್ನು ಈ ಸಭೆಯಲ್ಲಿ ನಾನು ಒಂದು ವರ್ಷಕಾಲದಿಂದ ತಿಳಿದುಕೊಂಡಿದ್ದೇನೆ. ಹೇಗೆ, ಎಷ್ಟುಮಟ್ಟಿಗೆ ತಮ್ಮವರೇ ಅಧಿಕಾರದಲ್ಲಿರತಕ್ಕ ಒಂದು ಗುಂಪನ್ನು in tact ಆಗಿ ಇಟ್ಟುಕೊಳ್ಳುವುದಕ್ಕೆ ತಮ್ಮ ಗುಂಪಿನವರನ್ನೇ ಕಮಿಟಿಗಳ ಚೇರ್‌ಮನ್ ಆಗಿ ಮಾಡುತ್ತಾ ಇದ್ದಾರೆ ಎಂಬುದು ಗೊತ್ತಾಗುತ್ತದೆ. ಲ್ಯಾಂಡ್ ಕಮಿಷನ್‌ನಲ್ಲಿ ಇಬ್ಬರು ನಾನ್ ಅಫೀಷಿಯಲ್ಸ್ ಇರುತ್ತಾರೆ. ಅವರಿಗೆ 1200, 1300 ರೂಪಾಯಿ ತಲಬು ಇದೆ. ಇವತ್ತಿನ ದಿನ, ಜತ್ತಿ ಅವರು ಮಹಾಚತುರರು, ಚತುರತೆಯಿಂದ, ಬುದ್ಧಿವಂತಿಕೆಯಿಂದ ವ್ಯವಹಾರ ಮಾಡುತ್ತೇವೆ ಎಂದು ಹೇಳುತ್ತಾರೆ. ಎಲ್ಲ ಜನರಿಗೂ ಸಮಾಧಾನವಾಗುವ ರೀತಿಯಲ್ಲಿ ವ್ಯವಹಾರ ಮಾಡುತ್ತೇವೆ ಎಂದು ಹೇಳುತ್ತಾರೆಯಲ್ಲಾ ಕೇರಳದಲ್ಲಿ ಕಮಿಟಿ ಸದಸ್ಯರಾಗಿದ್ದ 9,000 ಜನರ ಪೈಕಿ 8,750 ಜನಗಳವರೆಗೂ ಕಮ್ಯೂನಿಸ್ಟರೇ ಇದ್ದರು, ಮಿಕ್ಕವರು ಬಾಕಿಯವರಿದ್ದರು ಎಂದು ಹೇಳುವಾಗ ಕಾಂಗ್ರೆಸ್ ತತ್ವ ಹೇಳುವವರು, ಕಾಂಗ್ರೆಸ್ ಸರ್ಕಾರ ನಡೆಸುವವರಾದ ನೀವು ಮಾಡತಕ್ಕ ಕಮಿಟಿಯಲ್ಲಿ ಎಷ್ಟು ಪರ್ಸೆಂಟ್ ಕಾಂಗ್ರೆಸ್‌ನವರಿದ್ದಾರೆ, ಎಷ್ಟು ಪರ್ಸೆಂಟ್ ನಾನ್ ಕಾಂಗ್ರೆಸ್‌ನವರಿದ್ದಾರೆ, ಎಷ್ಟು ಪರ್ಸೆಂಟ್ ಕಾಂಗ್ರೆಸ್ ಸಿಂಪಥೈಸರ್ಸ್ ಇದ್ದಾರೆ ಎಂಬುದನ್ನು ಯೋಚನೆ ಮಾಡಿದ್ದೀ ಆದರೆ......

Sri KADIDAL MANJAPPA (Minister for Revenue).—On a point of order. Is that a matter under discussion or are the provisions of the Bill or the principles of the Bill under discussion ?

Sri C. J. MUCKANNAPPA.—

"Two persons nominated by the State Government from among persons having special knowledge or pratical experience in agricultural or land problems."

ಇದನ್ನು ಹೇಳುವಾಗ ಈ ಇಬ್ಬರನ್ನೂ ಹೇಗೆ ನೇಮಕ ಮಾಡುತ್ತೀರಿ ?

Mr. SPEAKER.—That is a matter of detail. You can say that there should be no Committee of that sort.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾರೋ ಇಬ್ಬರು ತಮ್ಮ ಕಡೆ ಮೆಂಬರುಗಳನ್ನು ನೇಮಕ ಮಾಡಬೇಕೆಂದು ಇದನ್ನು ಇಟ್ಟಿದ್ದೀರಿ.

ಶ್ರೀ ಕಡಿದಾಳ್ ಮಂಜಪ್ಪ.—ಒಂದು ವಿನಂತಿ. ಕೆಲವರಿಗೆ ಕಿವಿ ಸ್ವಲ್ಪ delicate ಆಗಿರುತ್ತದೆ. ಆದ್ದರಿಂದ ತಾವು ಸ್ವಲ್ಪ ನಿಧಾನವಾಗಿ ಮಾತನಾಡಿದರೆ ಒಳ್ಳೆಯದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸುಮಧುರವಾದ ಕೋಕಿಲವಾಣಿ ಶ್ರೀಮಾನ್ ಕಡಿದಾಳ್ ಅವರದು. ಅವರಿಗೆ ನನ್ನ ಶಬ್ದ ಕೇಳಿದರೆ ಸ್ವಲ್ಪ ಕಠೋರವಾಗಿ ಕೇಳಿಸಬಹುದು. ಅದೇ ಅವರ ಕಡೆಯಿಂದ ಬಂದರೆ ಇಂಪಾಗಿರಬಹುದು. ಆದರೂ ಕೂಡ ಅವರು ಏಕೆ ಸ್ವಲ್ಪ ಸ್ಮೈರಣೆಯಿಂದ ಇರಬಾರದು ? ಒಂದು ಲ್ಯಾಂಡ್ ಕಮೀಷನ್ ಮಾಡುವಾಗ ಅದರಲ್ಲಿ ಇಬ್ಬರು ನಾನ್ ಅಫೀಷಿಯಲ್ಸನ್ನು ಹಾಕುವುದರ ಉದ್ದೇಶವೇನೋ ಅರ್ಥವಾಗುವುದಿಲ್ಲ. ಆ ನಾನ್ ಅಫೀಷಿಯಲ್ಸ್ ಏನು ಕೆಲಸ ಮಾಡುತ್ತಾರೆ, ಅವರನ್ನು ಯಾವ ಆಧಾರದ ಮೇಲೆ ವ್ಯವಸಾಯದಲ್ಲಿ ಬಹಳ ಚತುರರು ಎಂದು ತೀರ್ಮಾನ ಮಾಡುತ್ತಾರೆ ಎಂಬುದು ಇದರಲ್ಲಿ ಇಲ್ಲ. Political ambition fulfil ಮಾಡುವುದಕ್ಕೆ Political object achieve ಮಾಡುವುದಕ್ಕೆ ತಮ್ಮವರನ್ನು ನೇಮಕ ಮಾಡಿ ಅವರಿಗೆ ಕೆಲಸ ಕೊಡುವ ಉದ್ದೇಶದಿಂದ ಇದನ್ನು ಮಾಡಿದ್ದೀರಿ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಸರ್ಕಾರ ಇದನ್ನು ಯೋಚನೆ ಮಾಡಬೇಕು. ಸರ್ಕಾರ ಈ ಕಮಿಟಿಯನ್ನು ನಿಜವಾಗಿಯೂ ಮಾಡುವಾಗ ಇಂಥಾ ನಾನ್ ಅಫೀಷಿಯಲ್ಸನ್ನು ಹಾಕಬೇಡಿ. ನಿಮ್ಮ ಜನರನ್ನೇ ಅಲ್ಲಿಗೆ ತರುತ್ತೀರಿ. ಆದ್ದರಿಂದ ಈ ಲ್ಯಾಂಡ್ ಕಮೀಷನ್ ಮಾಡತಕ್ಕ ಕೆಲಸಕ್ಕೆ ನಾನ್ ಅಫಿಷಿಯಲ್ಸ್ ಇದ್ದರೆ ಚ್ಯುತಿ ಬರುತ್ತದೆ. ನಾನ್ ಅಫಿಷಿಯಲ್ಸನ್ನು ಸ್ವಲ್ಪ ದೂರ ಇಡಬೇಕು, ಅಥವಾ ಅವರನ್ನು ದೂರ ಸರಿಸಬೇಕೆಂದು ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

Restoration of possession to tenants dispossessed in certain cricumstances. ಈ ಸರ್ಕಾರ ಏನಾದರೂ ಒಂದು ಕಾಯಿದೆ ಮಾಡುವಾಗ, ಒಂದು ಕಾಯಿದೆಯನ್ನು ಜಾರಿಗೆ ಕೊಡುವಾಗ ಒಂದಕ್ಕೊಂದಕ್ಕೆ ವ್ಯತ್ಯಾಸ ಮಾಡದೇ ಎಲ್ಲವನ್ನೂ ಕೂಡ ಒಂದೇ ತರಹದಲ್ಲಿ ನೋಡಿಕೊಳ್ಳಬೇಕು. ಕ್ಲಾಸ್ 10 ರಲ್ಲಿ ಏನು ಹೇಳಿದ್ದೀರಿ ಎಂದರೆ ಮೈಸೂರಿನಲ್ಲಿ ಫಸ್ಟ್ ಜನವರಿ 1952 ರಿಂದ, ಬಳ್ಳಾರಿಯಲ್ಲಿ 55 ರಿಂದ, ಸೌತ್ ಕೆನರಾದಲ್ಲಿ 54 ರಿಂದ, ಕೊಳ್ಳೇಗಾಲದಲ್ಲಿ 55 ರಿಂದ, ಕೊಡಗಿನಲ್ಲಿ 56 ರಿಂದ, ಹೈದರಾಬಾದಿನಲ್ಲಿ 52 ರಿಂದ, ಬೊಂಬಾಯಿನಲ್ಲಿ 52 ರಿಂದ ಎಂದು ಇದೆ. ಇದು ಏನೋ ಅರ್ಥವಾಗುವುದಿಲ್ಲ. ಏನು ಆಧಾರ ವಾಸ್ತವವಾಗಿ ಇದರಲ್ಲಿ ಅಡಕವಾಗಿದೆ ಎಂದು ಅರ್ಥವಾಗುವುದಿಲ್ಲ. ಏಕೆ ಈ ರೀತಿ ಒಂದು ಟೇಬಲ್ ಕೊಟ್ಟು variation in dates ಇಟ್ಟಿದ್ದಾರೋ ಗೊತ್ತಾಗುವುದಿಲ್ಲ. ಇದರಿಂದ ಯಾರಿಗೆ ಉಪಕಾರವಾಗುತ್ತದೆ ? ಟೆನೆಂಟ್ಸ್‌ಗೆ ಉಪಕಾರವಾಗುತ್ತದೆಯೇ ? ಇಲ್ಲದೆ ಹೋದರೆ ಜಮೀನ್ ದಾರರಿಗೆ ಉಪಕಾರವಾಗುತ್ತದೆಯೇ ? ಜಮೀನ್ ದಾರರಿಗೆ ಉಪಕಾರ ಮಾಡುವ ಸೋಗಿನಲ್ಲಿ, ಟೆನೆಂಟ್ಸ್‌ಗೆ ಉಪಕಾರ ಮಾಡುತ್ತೇವೆ ಎಂದು ಹೇಳಿ ಇವತ್ತಿನ ದಿವಸ ಲ್ಯಾಂಡ್ ರಿಫಾರಂಸ್ ಹೆಸರಿನಲ್ಲಿ ದೇಶಕ್ಕೆ ಅನ್ಯಾಯ ಮಾಡುತ್ತಾ ಇದ್ದೀರಿ. ದೇಶದ ಜನತೆಯನ್ನು ಆಂದೋಳನಕ್ಕೆ ಎಳೆಯುತ್ತಾ ಇದ್ದೀರಿ. ಜಮೀನ್‌ದಾರರಲ್ಲಿ, ರೈತರಲ್ಲಿ ಈ ರೀತಿ ಕಳವಳವನ್ನುಂಟುಮಾಡುವುದು ಸರಿಯಲ್ಲ. ಸರ್ಕಾರದವರು ಏಕೆ ಈ ಟೇಬಲ್ ಕೊಟ್ಟು ನಮ್ಮಲ್ಲಿ ಸಂಶಯಾತ್ಮಕವಾದ ಅಭಿಪ್ರಾಯ ಮೂಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ ಎಂಬುದನ್ನು ಸರ್ಕಾರದವರು ಸ್ಪಷ್ಟಪಡಿಸುತ್ತಾರೆ ಎಂದು ತಿಳಿದುಕೊಂಡಿದ್ದೇನೆ.

ಸೆಕ್ಷನ್ 18 ರಲ್ಲಿರುವಂತೆ ಇಂಥಾ ಕಾನೂನು ಬುದ್ಧಿವಂತರಿಂದ ಕೂಡಿರತಕ್ಕ ಈ ಮಂತ್ರಿ ಮಂಡಲದಿಂದ ಬರಬಾರದಾಗಿತ್ತು. 18 ರಲ್ಲಿ Termination of tenancy for personal cultivation ಎಂದು ಇದೆ. ಇದಕ್ಕಿಂತಲೂ ಕೂಡ ಭೂಸುಧಾರಣೆ ಮಾಡುವುದಕ್ಕೆ ಶಕ್ತಿ ಇಲ್ಲ ಎಂದು ಹೇಳಿದ್ದರೆ ಚೆನ್ನಾಗಿತ್ತು. ಒಂದು ಕಡೆ ಭೂಸುಧಾರಣೆ ಮಾಡುತ್ತಾ ಇದ್ದೇವೆ, ಭೂಮಿಯನ್ನು ಯಾವನು ಉಳುಮೆ ಮಾಡುತ್ತಾ ಇದ್ದಾನೋ ಯಾವನು ಭೂಮಿಯ ಮೇಲೆ ಬೆವರು ಸುರಿಸುತ್ತಾನೆಯೋ ಅವನಿಗೇ ಭೂಮಿ ಸಿಕ್ಕಬೇಕು ಎನ್ನುವುದು, ಇನ್ನೊಂದು ಕಡೆ ಸ್ವಂತ ವ್ಯವಸಾಯ ಯಾವನು ಮಾಡುತ್ತಾನೆಯೋ ಅವನಿಗೆ ಜಮೀನು ಕೊಡಬೇಕು ಎಂದು ಹೇಳಿ ರೈತನಿಂದ ಜಮೀನನ್ನು ಬಿಡಿಸುತ್ತಾ ಹೋಗುವುದು. ಆದರೆ ಒಂದು ಕಾಲು ಇಂಚು ಜಮೀನನ್ನು ತಾವು ತೆಗೆದುಕೊಳ್ಳ ಬಲ್ಲಿರಾ, ಹಂಚ ಬಲ್ಲಿರಾ ಎಂದು ಕೇಳುತ್ತೇನೆ. ಏಕೆ ಇಂಥದನ್ನು ಮಾಡುತ್ತಾ ಇದ್ದೀರಿ ? ಈ ಭೂಸುಧಾರಣೆಯ ಸೋಗಿನಲ್ಲಿ ನೀವು ಮಾಡುತ್ತಾ ಇರತಕ್ಕ ಈ ಅನ್ಯಾಯದ ಪರಮಾವಧಿಯನ್ನು ಸ್ವಲ್ಪ ಇಲ್ಲಿಗೇ ನಿಲ್ಲಿಸಿ. ಇಲ್ಲದೇ ಹೋದರೆ ಮುಂದೆ ನಿಜವಾಗಿಯೂ ಯಾರಿಗೂ ಭೂಮಿ ಸಿಕ್ಕುವುದಿಲ್ಲ. 18 ರಿಂದ 24ಕ್ಕೆ ಹೋಗುತ್ತೇನೆ. "ಯಾವನು ತನ್ನ ಪರ್ಸನಲ್ ಕಲ್ಟಿವೇಷನ್‌ಗೆ ಜಮೀನನ್ನು ಪಡೆಯುತ್ತಾನೋ ಅಂತಹವನು ಆ ಜಮೀನನ್ನು ಉಪಯೋಗಿಸದೆ ಹೋದರೆ ಒಂದು ವರ್ಷದೊಳಗೆ ನೋಟೀಸ್ ಕೊಡಬೇಕು. ಅಥವಾ ಅದಕ್ಕೆ ತಪ್ಪಿದರೆ 12 ವರ್ಷದೊಳಗೆ ಯಾವುದೇ ಸಮಯದಲ್ಲಿ ಅದನ್ನು ಉಪಯೋಗಿಸುವುದನ್ನು ನಿಲ್ಲಿಸಿದರೆ"...... ಎಂದು ಇದೆ ಇದು ಅರ್ಥವಾಗುವುದಿಲ್ಲ. ಬೆಂಗಳೂರಿನ ಚಿಕ್ಕಪೇಟೆ, ಫ್ರೇಜರ್ ಟೌನ್‌ನಲ್ಲಿ ಗ್ರಹಗತಿ ಹೇಗಿದೆ ಜತ್ತಿಯವರನ್ನು ಉರುಳಿಸಿ, ಚೀಫ್ ಮಿನಿಸ್ಟರ್ ಆಗಬಹುದೇ, ಸ್ಪೀಕರ್ ಆಗಬಹುದೇ ಎಂದು ಹೇಳಿ ಪಾಮಿಸ್ಟ್ ಹತ್ತಿರ ಪ್ರಿಡಿಕ್ಷನ್ ಕೇಳುವುದಕ್ಕೆ

ಹೋದರೆ ಆ ಪಾಮಿಸ್ಸ್ಕರ ಪ್ರಿಡಿಕ್ಷನ್ ಹೇಗೆ ಇರುತ್ತದೆಯೋ ಹಾಗೆ ಕಂದಾಯದ ಮಂತ್ರಿಗಳ ಈ ಪ್ರಿಡಿಕ್ಷನ್ ಇದೆ.

Sri KADIDAL MANJAPPA.—I have made it definitely clear very often that the Bill has been drafted on the basis of the recommendations of the Committee appointed under the Chairmanship of Sri Jatti and on the basis of the recommendations of the Planning Commission. Why should he drag in my name, I cannot understand.

Sri C. J. MUCKANNAPPA.—I am not dragging the Revenue Minister's name. But I cannot help it because it is he who is piloting the Bill.

Sri K. PUTTASWAMY (Mysore).—Is it not your responsibility also?

Sri KADIDAL MANJAPPA.—Why should he personally speak about the Revenue Minister?

Sri K. PUTTASWAMY.—The Minister need not be touchy?

Sri KADIDAL MANJAPPA.—I am sufficiently old to be touchy. I only brought it to his notice.

Mr. SPEAKER.—After all, when the members refer to the Revenue Minister there is nothing personal. Even if they refer to him as Sri Kadidal Manjappa, it should always be taken as meaning Revenue Minister and not personally.

Sri C. J. MUCKANNAPPA.—I have got the greatest respect and reverence for the Minister for Revenue. I respect him from the bottom of my heart. Why should he take it that I am criticising him? He should take it in the sense I am saying something to eradicate the evils here. I shall read clause 24:

> "*Landlord to restore possession if he fails to cultivate, etc.*—If after the landlord takes possession of the land after the termination of the tenancy under section 18, he fails to use the land for the purpose specified in the notice given under section 18 within one year from the date on which he took possession or ceases to use it at any time for any of the said purposes within twelve years from the date on which he took such possession.."

ಎಲ್ಲಿಯಾದರೂ ಉಂಟೇ? ಸ್ವಂತ ಸಾಗುವಳಿಗೆಂದು ತೆಗೆದುಕೊಂಡು ಎರಡು ವರ್ಷಕಾಲ ಜೋಳ ಅಥವಾ ಹುರುಳಿಯನ್ನು ಚೆಲ್ಲಿ ಸ್ವಂತ ಸಾಗುವಳಿ ಮಾಡಿದ್ದೇನೆಂದು ಹೇಳಿಕೊಂಡು, ಮಧ್ಯೆ ಮೂರು ವರ್ಷಗಳ ಕಾಲ ಬಿಡುತ್ತಾನೆ. ಆವೇಳೆ ಗೋಪ್ಯವಾಗಿ ಯಾರಿಗಾದರೂ ಗೇಣಿಗೆ ಕೊಡುತ್ತಾನೆ. ಹೀಗೆ ಜಮೀನ್ದಾರ ತನ್ನ ಸ್ವಂತಕ್ಕೋಸ್ಕರ ತನಗೆ ಲಾಭದಾಯಕವಾಗುವಂತೆ ಜಮೀನು ಮಾಡುವುದಾದರೆ ನೀವು ಗೇಣೀದಾರನಿಗೆ ಜಮೀನನ್ನು ಯಾವರೀತಿ ಒದಗಿಸಿಕೊಡುತ್ತೀರಿ ಎಷ್ಟರಮಟ್ಟಿಗೆ ಸಹಾಯಮಾಡಬೇಕೆಂದು ಹೊರಟಿದ್ದೀರಿ ಎಂಬುದು ನನಗೆ ಅರ್ಥವಾಗದೆ ಇರತಕ್ಕ ಪ್ರಶ್ನೆ.

> "20. Conditions restricting termination of the tenancy under section 18.—The right of a land lord to terminate the tenancy for cultivating the land personally under section 18, shall be subject to the following conditions, namely:— "

ಎಂದು ಹನುಮಂತರಾಯನ ಬಾಲವಿದ್ದ ಹಾಗೆ ಇದರಲ್ಲಿ ಕೆಲವು ನಿಬಂಧನೆಗಳನ್ನು ಹಾಕಿದ್ದೀರಿ. A most dangerous clause has been included. ಇದರಲ್ಲಿ ಯಾವುದಾದರೂ ಒಂದು ಕಂಡಿಷನ್ ಅನು satisfy ಮಾಡಿದರೂ ಕೂಡ ಜಮೀನಿನ ಸಂಬಂಧದಲ್ಲಿ ವ್ಯಾಜ್ಯ ತಪ್ಪಲಿಲ್ಲ, ಲಾಯರುಗಳಿಗೆ ಫೀಜ್ ಕೊಡುವುದು ತಪ್ಪಲಿಲ್ಲ. ಯಾವ ದೃಷ್ಟಿಯನ್ನಿಟ್ಟುಕೊಂಡು ಇಂಥ ಕ್ಲಾಜನ್ನು ಇದರಲ್ಲಿ ಸೇರಿಸಿದರು? ನಿಮಗಿಂತ ಬುದ್ಧಿವಂತನಾದ ಲಾಯರು ಎಂದು ಹೇಳಿಕೊಳ್ಳುತ್ತಾರೆ...

ಶ್ರೀ ಕಡಿದಾಳ್ ಮಂಜಪ್ಪ.—ನಿಮ್ಮಷ್ಟು brilliant ಅಲ್ಲವೆಂದು ಹೇಳಿದೆ. ಮಾನ್ಯ ಸದಸ್ಯರಿಗೆ ಜ್ಞಾಪಕ ಶಕ್ತಿ ಕಡಮೆ ಇರಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದಾನೊಂದು ಕಾಲದಲ್ಲಿ ದೇಶದ ಮುಖ್ಯ ಮಂತ್ರಿಗಳಾಗಿದ್ದಿರಿ. ಇನಾಂದಾರರ ಮತ್ತು ಜಹಗೀರುದಾರರ ಕೈಕೆಳಗೆ ಗೇಣಿದಾರರು ಪಡುತ್ತಿದ್ದ ಕಷ್ಟದಿಂದ ಅವರನ್ನು ಪಾರು ಮಾ ಲು, ಅವರಿಗೆ ರಕ್ಷಣೆಯನ್ನು ಕೊಡಲು, ಎಷ್ಟೋ ದೂರ ಹೋದಿರಿ. ಅದೇ ಈ ಮಸೂದೆಯ ವಿಷಯದಲ್ಲಿ ಬುದ್ಧಿ ಎಲ್ಲಿ ಹೋಯಿತು? Vested interests ಕಡೆ ಗಮನ ಏಕೆ ಕೊಟ್ಟಿರಿ ಎಂದು ಕೇಳುತ್ತೇನೆ.

Sri K. PUTTASWAMY.—My friend seems to have changed over night.

Sri C. J. MUCKANNAPPA.—I am not changing. I am criticising the policy of the party in power stretching their hands against landlords and not against toddy contractors and big factory owers and other people. Let not my friend Sri Puttaswamy think that I have deviated from what I said yesterday.

ಸ್ವಾಮಿ, 20ನೇ ಸೆಕ್ಷನ್ 11 ಸಬ್ ಸೆಕ್ಷನ್ನಲ್ಲಿ

> "The landlord resides within a distance of ten miles from the land, or if there is no inhabited village

(SRI C. J. MUCKANNAPPA)

within a distance of ten miles from the land the Land lord resides in the nearest inhabited village from such land."

ಹೀಗೆ ಹೇಳಿದ್ದಾರೆ. ಜಮೀನ್ದಾರನು ವಾಸಮಾಡತಕ್ಕ ಸ್ಥಳಕ್ಕೂ ಜಮೀನಿರುವ ಸ್ಥಳಕ್ಕೂ 15 ಮೈಲಿ ದೂರ ವಿದೆ ಎಂದರೆ ಏನು ಮಾಡಬೇಕು? ಒಂದುಕಡೆ ಹತ್ತು ಎಕರೆ ನರ್ವೆ ತೋಪು, ಹತ್ತು ಮೈಲಿ ದೂರದಲ್ಲಿ 25 ಎಕರೆ ಹೊಂಗೇ ತೋಪು ಮತ್ತು 15 ಮೈಲಿ ದೂರ ದಲ್ಲಿ 20 ಎಕರೆ ಹುಣಸೆ ತೋಪು ಇದೆ ಎಂದು ಇಟ್ಟು ಕೊಳ್ಳೋಣ. ಆ ಜಮೀನಿಗೆ ಯಾರೂ ನೀರು ಹಾಯಿಸು ವುದಿಲ್ಲ, ಪ್ರಕೃತಿ ಮಳೆ ಸುರಿಯುತ್ತದೆ, ಭೂಮಿಯಲ್ಲಿರ ತಕ್ಕ ಸಾರವನ್ನು ಊಟಮಾಡಿ ಆ ಗಿಡಗಳು ಬೆಳೆಯು ತ್ತವೆ. ಯಾವ ಆಧಾರದ ಮೇಲೆ ಹತ್ತು ಮೈಲಿ ದೂರ ಎಂದು ನಿಗದಿ ಮಾಡಿದ್ದಾರೆಂಬುದು ಗೊತ್ತಿಲ್ಲ. ಅದನ್ನು ಹೇಳಿದ್ದರೆ, ಈ ವಿಷಯದ ಮೇಲೆ ನಮ್ಮ ಅಭಿಪ್ರಾಯ ವನ್ನು ಕೊಡಬಹುದಾಗಿತ್ತು. ಮಂಡ್ಯದಲ್ಲಿ ವಾಸ ಮಾಡುವ ಒಬ್ಬರು ಯಾವುದೋ ಒಂದು ಕೊನೆಯ ಭಾಗದಲ್ಲಿ ವಿಶ್ವೇಶ್ವರಯ್ಯ ನಾಲೆ ಕೆಳಗೆ 20 ಮೈಲಿ ದೂರದಲ್ಲಿ ಕಬ್ಬನ್ನು ಹಾಕಿ ಪ್ರತಿವರ್ಷವೂ ತಾನೇ ವ್ಯವಸಾಯ ಮಾಡುತ್ತಾನೆ. ಆದುದರಿಂದ ಹತ್ತು ಮೈಲಿ ದೂರವೆಂಬುದನ್ನು ನಿಗದಿ ಮಾಡುವಾಗ ಯಾವ ಅಧಾರದ ಮೇಲೆ ಮಾಡಿದ್ದಾರೆಂದು ಮಾನ್ಯ ಮಂತ್ರಿಗಳು ಅವರ ಉತ್ತರದಲ್ಲಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತು ಈ ವಿಷಯವನ್ನು ಜಾಯಿಂಟ್ ಸೆಲೆಕ್ಟ್ ಸಮಿತಿಯಲ್ಲಿ ತೀವ್ರವಾಗಿ ಪರಿಶೀಲನೆ ಮಾಡಬೇಕೆಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಶ್ರೀ ಬಿ. ವಿ. ದೇಸಾಯಿ (ಗಂಗಾವತಿ).—ದೂರ ವನ್ನು ನಿಗದಿಮಾಡಬೇಕೆಂದು ಹೇಳುತ್ತೀರೋ ಬೇಡ ವೆಂದು ಹೇಳುತ್ತೀರೋ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಸೂದೆಯಲ್ಲಿ ಇದನ್ನು ಏಕೆ ನಮೂದು ಮಾಡಲಾಗಿದೆ ಎಂಬುದನ್ನು ಹೇಳಿದರೆ ನಾನು ಉತ್ತರ ಕೊಡಬಹುದು. ಇದು ಒಂದು ದೊಡ್ಡ ಪೆಡಂಭೂತವಾಗಿದೆ ಎಂದು ಹೇಳು ತ್ತೇನೆ. I can withstand any amount of cross examination. I want to know why these ten miles were prescribed. ಇನ್ನು ಸ್ವಲ್ಪ ಮುಂದಕ್ಕೆ ಹೋದರೆ ಕಾನೂನಿನ ಪರಿಮಿತಿಯೊಳಗೆ landlord ಎಂದು ವಿವರಿಸಿದ್ದಾರೆ. ಹಿಂದೆ ಐದರಿಂದ ಹತ್ತು ಇಪ್ಪತ್ತು ಎಕರೆಯವರೆಗೂ ಹೊಂದಿರುವವರು landholder ಎಂದು ಹಾಕಿಕೊಳ್ಳು ತ್ತಿದ್ದರು. 50 ಎಕರೆ, 100 ಎಕರೆ ಹೀಗೆ ಹೊಂದಿರು ವವರು landlords ಎಂದೂ ಸಾವಿರಾರು ಎಕರೆಗ ಳಿರುವವರು ದೇಸಾಯಿ, ಸರ್‌ದೇಸಾಯಿ, ದೇಶಪಾಂಡೆ ಎಂದೂ ಇಟ್ಟುಕೊಳ್ಳುತ್ತಿದ್ದರು. ಈ ಕಾನೂನಿನಲ್ಲಿ ಒಬ್ಬನು ಸತ್ತರೆ ಅವನನ್ನು ಹೂಳುವುದಕ್ಕೆ ಸಾಕಾಗು ವಷ್ಟು ಜಮೀನಿದ್ದರೂ ಕೂಡ ಒಂದು ಗುಂಟೆ ಜಮೀನಿ ದ್ದರೂ ಕೂಡ ಅವನನ್ನು landlord ಎಂದು ಮಾಡಿ ದ್ದಾರೆ.

Sri KADIDAL MANJAPPA.—That is a legal terminology.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಭೂಮಾಲೀಕನಿಗೂ ಗೇಣಿದಾರನಿಗೂ ಇರುವ ವ್ಯತ್ಯಾಸವೇನು? 25—30 ಎಕರೆ ಜಮೀನಿದ್ದರೂ ಅವನು ಗೇಣಿದಾರ, ಒಂದೆರಡು ಗುಂಟೆ ಜಮೀನಿದ್ದರೂ ಅವನು landlord ಎಂದು ಮಾಡಿದ್ದಾರೆ; ಇದು ಏನೆಂಬುದು ನನಗೆ ಅರ್ಥವಾಗ ಲಿಲ್ಲ.

Sri KADIDAL MANJAPPA.—Land-lord is a person who has leased out his land.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇನ್ನೂ ಮುಂದಕ್ಕೆ ಹೋಗಿನೋಡಿದರೆ ಇವರು ಹೇಳುವುದು ಒಂದು ಮಾಡುವುದೊಂದು ಎಂದು ಗೊತ್ತಾಗುತ್ತದೆ. ಜಮೀ ನನ್ನೆಲ್ಲ ಬಿಡಿಸಿ ಜಮೀನಿಲ್ಲದವರಿಗೆ ಕೊಡುತ್ತೇವೆಂದು ಹೇಳುತ್ತಾರೆ. ಮಾನ್ಯ ಕಂದಾಯ ಮಂತ್ರಿಗಳಾದ ಮಂಜಪ್ಪನವರು ಎಷ್ಟೇ ಸತ್ಯಸಂಧರಾದರೂ ಎಷ್ಟೇ ನಿಸ್ಪೃಹರಾದರೂ he is a prisoner in the hands of Congressmen. ಅವರುಗಳ ಮನಸ್ಸಿಗೆ ವಿರೋಧವಾಗಿ ನಡೆದುಕೊಂಡರೆ "ಮಂಜಪ್ಪನವರೇ ರಾಜೀನಾಮೆ ಕೊಡಿ ಇಲ್ಲದೆ ಹೋದರೆ ತಮಗೆ ವಿರೋಧ ವಾಗಿ ಓಟು ಮಾಡುತ್ತೇವೆ" ಎಂದು ಹೇಳುತ್ತಾರೆ.

ಕಾಂಪೆನ್‌ಸೇಷನ್ ಕೊಡುವುದರಲ್ಲಿ 20 ಎಕರೆ ಇರು ವವನಿಗೂ ಒಂದೇ, 100 ಎಕರೆ, 500 ಎಕರೆ ಇರುವ ವನಿಗೂ ಒಂದೇ ಮಾಡಿದ್ದೀರಿ. ಕಾಂಪೆನ್‌ಸೇಷನ್ ಕೊಡುವುದರಲ್ಲಿ ಸ್ವಲ್ಪ ಉದಾರ ಮನಸ್ಸು ಮಾಡ ಬೇಕು. ಜಮೀನಿರುವವರಿಂದ ಜಮೀನನ್ನು ಕಿತ್ತು ಕೊಂಡು ಅವನಿಗೆ ಸರಿಯಾದ ಪರಿಹಾರ ಕೊಡದೆ ಇದ್ದರೆ ಅವನ ಸ್ಥಿತಿ ತುಂಬ ಶೋಚನೀಯವಾಗುತ್ತದೆ. ಮನೆ ಇರುವವನು ತನ್ನ ಮನೆಯನ್ನು ಕಳೆದುಕೊಂಡರೆ ಅವನಿಗೆ ಇರಲು ನೆರಳು ಹೇಗೆ ಸಿಕ್ಕುವುದಿಲ್ಲವೋ ಹಾಗೆಯೇ ಜಮೀನಿರುವವನು ತನ್ನ ಜಮೀನನ್ನು ಸರ ಕಾರಕ್ಕೆ ಒಪ್ಪಿಸಿದ ಮೇಲೆ, ಅಥವಾ ಅವನಿಂದ ತಾವು ಜಮೀನನ್ನು ತೆಗೆದುಕೊಂಡರೆ ಅವನಿಗೆ ನಿಜವಾಗಿಯೂ ನೆರಳಿಲ್ಲದಂತಾಗುವುದು. ಸರಕಾರ ಕೊಡುವ ಪರಿಹಾರ ವನ್ನು ಸೂಕ್ತವಾಗಿ ತಿದ್ದುಪಾಟು ಮಾಡಿ ಆ ಪ್ರಕಾರ ಒದಗಿಸಿ ಕೊಡಬೇಕು. ನನ್ನ ಸ್ನೇಹಿತರಾದ ಶ್ರೀಮಾನ್ ವೀರಪ್ಪನವರು ಹೇಳಿದ ಹಾಗೆ ಐದು ಅಥವಾ ಹತ್ತು ಸಾವಿರ ರೂಪಾಯಿಗಳೆಂದು ಕಾಂಪೆನ್‌ಸೇಷನನ್ನು ಕೊಟ್ಟರೆ ಸರಿಯಾಗಿರುತ್ತದೆ. ಆ ರೀತಿಯಾಗಿ ಕೊಡ ಬೇಕೆಂದು ನಾನು ಸರಕಾರದವರಲ್ಲಿ ತಿಳಿಸುತ್ತಿದ್ದೇನೆ. ಇನ್ನು ಚಾಪ್ಟರು ಮೂರರಲ್ಲಿ Vesting of certain lands in State Government ಎಂದು ಹೇಳಿರು ವುದು ನನಗೇನೋ ಅರ್ಥವಾಗುತ್ತಿಲ್ಲ.

Chapter III (C).—

"All arrears of land revenue, cesses, water rate, or other dues remaining lawfully due on the date of vesting in respect of such lands shall after such date continue to be recoverable from the land-owner or land-lord or other person by whom they were payable and may, without prejudice to any other mode of recovery, be realised by the deduction of the amount of such arrears from the compensation payable to any person under this Chapter;"

ಸರಕಾರಕ್ಕೆ ಬರುವ ಹಣವನ್ನು ಅವರು ಹೇಗೆ ಬೇಕಾ ದರೂ ವಸೂಲು ಮಾಡಿಕೊಳ್ಳಬಹುದು. ಯಾರಾದರೂ

ಆಧಾರವೋ ಭೋಗ್ಯವೋ ಮಾಡಿದ್ದರೆ ಅಥವಾ ಕೋರ್ಟಿನಲ್ಲಿ ಡಿಕ್ರಿಆಗಿದ್ದರೆ ಅಂತಹವನಿಗೆ ಕಾನೂನಿನಲ್ಲಿ ಯಾವ ರೀತಿ ಪ್ರೊವೈಡ್ ಮಾಡುತ್ತೀರಿ? This is really an angel Government which is all above these things. ಆದ್ದರಿಂದ ಇದು ಸರಿಯಲ್ಲ. ಕೋರ್ಟಿನಲ್ಲಿ ಒಂದು ಡಿಕ್ರಿ ಪಾಸಾಗಿದ್ದರೆ ಅದಕ್ಕೆ ಏನೂ ಕಾನೂನಿನಲ್ಲಿ ಇಲ್ಲ. ಲ್ಯಾಂಡ್ ರೆವೆನ್ಯೂ ವಿನಂತೆ ಬಾಕಿಯನ್ನು ವಸೂಲು ಮಾಡಬೇಕು ಎನ್ನುವುದಕ್ಕೆ ಅಧಿಕಾರವಿದೆ. ಆದರೆ ಡಿಕ್ರಿಗೆ ಅಧಿಕಾರವಿಲ್ಲ. ನೀವು ಹೇಳಿದ ಹಾಗೆ ಯಾವದಾದರೂ ಒಂದು ಕೋ-ಆಪರೇಟೀವ್ ಸೊಸೈಟಿಯ certain portion of his land is mortgaged and there is a decree on it. Are you depriving a co-operative society of that money? Then your Co-operative movement will go to dogs. ಅದಕ್ಕೋಸ್ಕರ ತಾವು ಏನು ಹೇಳುತ್ತೀರೋ ಅದು ಅರ್ಥವಾಗುವುದಿಲ್ಲ. ಯಾವುದಕ್ಕೆ ಕಾನೂನು ಬದ್ಧವಾಗಿ ಲಾ ಕೋರ್ಟಿನಿಂದ ಒಂದು ಡಿಕ್ರಿ ಕೊಟ್ಟಿದ್ದಾರೋ ಅಂತಹವನ ಆಸ್ತಿಯ ಮೇಲೆ ವಸೂಲು ಮಾಡತಕ್ಕ ಹೊಣೆಗಾರಿಕೆ ಸರಕಾರಕ್ಕಿದೆ. ಜಮೀನು ಇಲ್ಲದಿದ್ದರೆ ಏನು ಮಾಡುತ್ತಿದ್ದಿರಿ? ಜಮೀನನ್ನೇನೋ ಡಿಕ್ರಿ ಮಾಡಿಸುತ್ತಾರೆ ಅಟ್ಯಾಚು ಮಾಡಿಸುತ್ತಾರೆ. ಆದರೆ ಸರಕಾರದವರು ಅವರಿಗೆ ಬರಬೇಕಾದ ಬಾಕಿಯನ್ನು ಕಿತ್ತುಕೊಂಡ ಮೇಲೆ ಆವನ ಹೆಂಡತಿ, ಮಕ್ಕಳನ್ನು ಬೀದಿಯಲ್ಲಿ ನಿಲ್ಲಿಸಬೇಕೇ? ಸರಕಾರದವರು ಜಮೀನನ್ನು ತೆಗೆದುಕೊಳ್ಳ ಬೇಕಾದರೆ ಮತ್ತು ನಿಜವಾಗಿ ರೈತನಿಗೆ ಹಿತವನ್ನುಂಟು ಮಾಡಬೇಕಾದರೆ ಇನ್ನೊಬ್ಬರಿಗೆ ತೊಂದರೆಯಾಗದಂತೆ ಮಾಡಬೇಕೆನ್ನುವುದನ್ನು ಸರಕಾರ ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನಿಲ್ಲಿ ತಮ್ಮನ್ನು ಪ್ರಾರ್ಥನೆ ಮಾಡುತ್ತಿದ್ದೇನೆ. ಇನ್ನೊಂದು ಏನಿದೆ ಎಂದರೆ ಇಲ್ಲಿ "(d) no such lands shall be liable to attachment in execution of any decree or other process of any court and any attachment existing on the date of vesting and any order for attachment passed before such date in respect of such lands, shall cease to be in force;" ಅದಕ್ಕೋಸ್ಕರ ಇದನ್ನು ತೀವ್ರವಾಗಿ ಯೋಚನೆ ಮಾಡಬೇಕು ಎಂದು ನಾನು ತಮ್ಮಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸ್ವಾಮೀ, ಇನ್ನು ಸೀಲಿಂಗಿನ ವಿಚಾರ. ಇದುವರೆಗೆ ನಾನು ಹೇಳಿದ ಒಂದು ವಾದವನ್ನು ಒಂದು ಕಡೆ ಇಟ್ಟರೆ ಸೀಲಿಂಗನ್ನೇ ಒಂದು ಕಡೆಗೆ ಇಟ್ಟು ಹೇಳಬೇಕಾಗಿದೆ. ಅವರು ಹೇಳುವಾಗ ಏನೇನೋ ದೊಡ್ಡ ದೊಡ ಭೂತಗಳನ್ನು ಹೇಳಿದ್ದಾರೆ. ಪ್ಲಾನಿಂಗ್ ಕಮಿಷನ್ನಿನವರು ಹೇಳಿದರು. ಕಾಂಗ್ರೆಸ್ ರೆಸಲ್ಯೂಷನ್ನು ಇತ್ತು, ಸೆಂಟ್ರಲ್ ಲ್ಯಾಂಡ್ ರಿಫಾರಂ ಕಮಿಟಿ ವರದಿಯನ್ನು ಕೂಡ ಒಪ್ಪಿಕೊಂಡಿದ್ದೀರಿ. ಇದಕ್ಕಿಂತ ಬಹಳ ದೂರ ಪ್ರಯಾಣ ಮಾಡಿದ್ದಾರೆ ಎಂದು ಹೇಳಿದರೂ ತಪ್ಪಾಗುವುದಿಲ್ಲ. ಜತ್ತಿ ಸಮಿತಿಯವರ ರಿಪೋರ್ಟಿನಲ್ಲಿ ಯಾವ ಯಾವದರ ಮೇಲೆ ಸೀಲಿಂಗನ್ನು ಇಡಬೇಕು, ಯಾವುದಕ್ಕೆ ಕೂಡದು ಎನ್ನುವುದನ್ನೆಲ್ಲ ಹೇಳಿದ್ದಾರೆ. ಜತ್ತಿ ಸಮಿತಿಯ ರಿಪೋರ್ಟಿನಲ್ಲಿ ಕಾಫಿ ಪ್ಲಾಂಟೇಷನ್ಸ್ ಅದಕೆಯ ಪ್ಲಾಂಟೇಷನ್ನು ಇವುಗಳ ಮೇಲೆ ಸೀಲಿಂಗು ಇರಬೇಕೆಂದು ಹೇಳಿಲ್ಲ. ಕೋಕನಟ್ ಗಾರ್ಡನ್ನಿನ ಮೇಲೆ ಸೀಲಿಂಗ ಇರಬೇಕು ಎಂದು ಹೇಳಲಿಲ್ಲ. ಆದರೆ ಈ ಬಿಲ್ಲಿನಲ್ಲಿ ಈ ರೀತಿ ಮಾಡಿರುವುದಕ್ಕೆ ಕಾರಣ ವೇನಿದ್ದು ಇಂಟರೆಸ್ಟು ಇದೆ ಎನ್ನುವುದು ಚೆನ್ನಾಗಿ ಗೊತ್ತಾಗುತ್ತದೆ. When the Central Government says that there should be labour participation in all industries, why not try an experiment in the Coffee plantations, rubber plantations and other plantations? ಪ್ಲಾನಿಂಗ್ ಕಮಿಷನ್ನಿನವರು ಉದಾತ್ತವಾಗಿ ಹೇಳಿದರು ಎಂದು ಹೇಳುತ್ತೀರಿ. ಈ ರೀತಿ ಸೀಲಿಂಗು ಮಾಡುವಾಗ ಅವರ ಅಡ್ವೈಸನ್ನು ಏಕೆ ಕೇಳಿ ಮಾಡಬಾರದಾಗಿತ್ತು? ದೊಡ್ಡ ದೊಡ್ಡ ಎಕ್ಸೆಂಪಷನ್ನುಗಳನ್ನು ಕೊಟ್ಟಿದ್ದೀರಿ. ತಾವು ಇಷ್ಟು ಉದಾತ್ತವಾಗಿ ಭೂಸುಧಾರಣೆಯನ್ನು ತರುವಾಗ ಈ ರೀತಿಯಾಗಿ ಕಾಫಿ ಪ್ಲಾಂಟೇಷನ್ನುಗಳಿಗೇಕೆ ವಿನಾಯಿತಿಕೊಟ್ಟಿರಿ? ಏಕೆ ಇಷ್ಟು ಪ್ರೇಮ? ಪ್ಲಾನಿಂಗು ಕಮಿಷನ್ನಿಗೆ ತಿಳಿಸಿದ್ದರೆ ಸರಿಯೋ ಅಲ್ಲವೋ ಎನ್ನುವುದನ್ನು ಅವರೇ ತಿಳಿಸುತ್ತಿದ್ದರು. ಈಗ ನಮ್ಮಲ್ಲಿರುವ ಹಿಂದೂಸ್ತಾನ್ ಮೆಷಿನ್ ಟೂಲ್ಸ್ ಮ್ಯಾನೇಜುಮೆಂಟಿನಲ್ಲಿ ಲೇಬರರುಗಳಿಗೂ ಪ್ರಾತಿನಿಧ್ಯವಿಲ್ಲವೇ? why not the labour have its share? ಇವತ್ತಿನ ದಿವಸ ಬಡವರಿಗೆ ಜಮೀನನ್ನು ಉಳಿಸಿಕೊಡುವುದಕ್ಕಾಗದೆ ತಮಗೆ ಬೇಕಾದ ಶ್ರೀಮಂತರಿಗೇ ಜಮೀನನ್ನು ಉಳಿಸಿಕೊಡಬೇಕೆನ್ನುವ ಉದ್ದೇಶ ಈ ಕಾಂಗ್ರೆಸ್ಸಿನ ಸರಕಾರಕ್ಕಿದೆ. ಈ ರೀತಿಯಾಗಿ ಇನ್ನೆಷ್ಟು ದಿನ ತಾವು ರಾಜ್ಯವಾಳಬೇಕು? ಈ ಕಾಫಿಪ್ಲಾಂಟೇಷನ್ನಿಗೆ ಇಟ್ಟಿರುವ ಸೀಲಿಂಗು ಸರಿಯಿಲ್ಲ ಮತ್ತು ಅವರಿಗೆ ಆರೀತಿ ಎಕ್ಸೆಂಪಷನ್ ಕೊಟ್ಟಿರುವುದು ಸರಿಯಲ್ಲ. ಇಲ್ಲಿ ತಾವು ಕೊಟ್ಟಿರುವ ಸೀಲಿಂಗು ಕಾಫಿಗೆ ನೂರು ಎಕರೆ ಎಂದಿದೆ ಎಂದರೆ "ಕೂಸು ಹುಟ್ಟುವುದಕ್ಕೆ ಮುಂದೇ ಕುಲಾವಿ ಹೊಲಸಿದರು" ಎಂದಂತಾಗಿದೆ. ಏಕೆ ಹೀಗಾಗಿದೆಯೋ ನನಗೆ ಗೊತ್ತಿಲ್ಲ. ಯಾವ ಆಧಾರದ ಮೇಲೆ ತಾವು ಹೀಗೆ ಇಲ್ಲಿ ಹೇಳುತ್ತಿದ್ದೀರಿ? ನೀವು ಈಗ ಹೊರಟಿರತಕ್ಕ ಮಾರ್ಗವತ್ತು ಮಾಡತಕ್ಕ ಚರ್ಚೆ ಎಲ್ಲ ನೀರಸವಾದುದು ಎನ್ನುವುದನ್ನು ತಾವು ಮನದಟ್ಟು ಮಾಡಿಕೊಳ್ಳಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಾವು ಕೋಕನಟ್ಟು ಗಾರ್ಡನ್ನು ಅರಕಾನಟ್ಟು ಗಾರ್ಡನ್ನು, ಕಾಫೀ ಪ್ಲಾಂಟೇಷನ್ನುಗಳನ್ನು ನ್ಯಾಷನಲೈಸು ಮಾಡುವುದಕ್ಕೆ ಆಗುವುದಿಲ್ಲವೇ?

The House adjourned for Lunch at Three of the Clock and re-assembled at Thirty Minutes past Three of the clock.

[Mr. Deputy Speaker in the Chair.]

3-30 P.M.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನಾನು ಸೀಲಿಂಗ್ ಮತ್ತು ಎಗ್ಜೆಮ್‌ಷನ್ಸ್ ವಿಚಾರ ಮಾತನಾಡುತ್ತಿದ್ದೆ. ಈಗ ತಾವು ಫ್ಯಾಮಿಲಿ ಹೋಲ್ಡಿಂಗ್ಸ್ 60 ಎಕರೆ ಇರಬೇಕು. ಮೂರು ಫ್ಯಾಮಿಲಿ ಹೋಲ್ಡಿಂಗ್ಸ್ 180 ಎಕರೆ ಇರಬೇಕು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಎಂದು ಹೇಳುತ್ತಿದ್ದೀರಿ. 180 ಎಕರೆ ಜಮೀನು ಇದ್ದರೆ, ಆ 180 ಎಕರೆ ಜಮೀನನ್ನು ಎಷ್ಟರಮಟ್ಟಿಗೆ ವ್ಯವಸಾಯ ಮಾಡುತ್ತಾರೆ ? ಅವರು ನಿಜವಾಗಿಯೂ ಫುಡ್‌ಪ್ರೊಡಕ್ಷನ್ ಜಾಸ್ತಿ ಮಾಡುತ್ತಾರೆಯೇ ? ಅವರು ಆಹಾರ ಪದಾರ್ಥಗಳನ್ನು ಹೆಚ್ಚು ಬೆಳಸಬೇಕು, ದೇಶದಲ್ಲಿ ಆಹಾರ ಪದಾರ್ಥಗಳ ಅಭಾವವನ್ನು ನೀಗಿಸಬೇಕು ಎಂದರೆ, ನಾನಾದರೂ ತಿಳಿದುಕೊಂಡಿದ್ದೇನೆ, ಒಬ್ಬ ಮನುಷ್ಯ ಒಂದು ಎಕರೆ ತರಿ, ಐದು ಎಕರೆ ಖುಷ್ಕಿ ಜಮೀನನ್ನು ಅತ್ಯುತ್ತಮ ರೀತಿಯಲ್ಲಿ ವ್ಯವಸಾಯ ಮಾಡಬಲ್ಲ ಎಂದು. 24 ಎಕರೆ ತರಿ ಜಮೀನು ಮತ್ತು 60 ಎಕರೆ ಖುಷ್ಕಿ ಜಮೀನು ಇರತಕ್ಕ ರೈತ ಎಷ್ಟು ಜೊತೆ ಎತ್ತುಗಳು, ಎಷ್ಟು ಜನ ಆಳುಗಳು, ಎಷ್ಟು ಜನ ಕೂಲಿಯಾಳುಗಳನ್ನು ಇಟ್ಟುಕೊಂಡು ಸರಿಯಾಗಿ ಎಫಿಷಿಯಂಟಾಗಿ ವ್ಯವಸಾಯಮಾಡಿ ನೀವು ಎಷ್ಟು ಬೆಳೆಯಬಹುದು ಎಂದು ನಿರೀಕ್ಷಣೆಮಾಡುತ್ತಿದ್ದೀರೋ ಆ ನಿರೀಕ್ಷಣೆಗೆ ಅನುಗುಣವಾಗಿ ಬೆಳೆಯುವುದಕ್ಕೆ ಸಾಧ್ಯವೇ ಎಂಬುದು ನನಗಂತೂ ಅರ್ಥವಾಗುವುದಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಹಾಗಾದರೆ ಸೀಲಿಂಗ್ ಕಡಮೆ ಮಾಡಬೇಕು ಎಂದು ಹೇಳುತ್ತೀರಾ ?

Sri C. J. MUCKANNAPPA.—I am just driving at that. ಸೀಲಿಂಗ್ ಏತಕ್ಕೆ ಕಡಮೆ ಮಾಡುತ್ತೀರಿ ? ನೀವು ಏನು ಭೂಸುಧಾರಣೆ ತಂದಿದ್ದೀರಿ ಅದರಮೇಲೆ ನಿಮ್ಮ ಪಾರ್ಟಿಯಲ್ಲಿ ಲೊಚಗುಟ್ಟಲು ಪ್ರಾರಂಭವಾಯಿತು. ಎಲ್ಲಾ ಕಡೆಗೂ ಆ ಸೀಲಿಂಗ್ ತರಬೇಕು ಎಂದು ಹೇಳಿ ನಿಮ್ಮ ಪಾರ್ಟಿಯಲ್ಲಿ ಮೊದಲೇ ಲೊಚಗುಟ್ಟಿದ್ದರೆ ಚೆನ್ನಾಗಿತ್ತು. ಈಗ ಜನರಿಗೆ ಪರಿಹಾರ ಒದಗಿಸಬಲ್ಲಿರಾ ಎಂದು ಕೇಳುತ್ತೇನೆ. ಒಂದು ಮನೆಯಲ್ಲಿ ಐದು ಜನ ಇದ್ದಾರೆ ಎಂದು ಇಟ್ಟುಕೊಳ್ಳೋಣ. ಆ ಐದು ಜನಗಳೂ ಭೂಮಿಯಮೇಲೆ ವ್ಯವಸಾಯ ಮಾಡುತ್ತಾರೆಯೇ ? ಮನೆಯಲ್ಲಿರುವ ತಂದೆ, ತಾಯಿ, ಹೆಣ್ಣು ಮಗಳು ಮತ್ತು ಗಂಡು ಮಗ ಇಷ್ಟು ಜನಗಳೂ ವ್ಯವಸಾಯ ಮಾಡಿದರೆ, ಮಕ್ಕಳಿಗೆ ವಿದ್ಯಾಭ್ಯಾಸ ಯಾವಾಗ ಮಾಡಿಸಬೇಕು ? ಐದು ಜನಗಳ ಫ್ಯಾಮಿಲಿ ಹೋಲ್ಡಿಂಗ್ ಎಂದು ಹೇಗೆ ನಿರ್ಧಾರಕ್ಕೆ ಬಂದಿದ್ದೀರಿ ? ತಂದೆ, ತಾಯಿ, ಮಗ, ಮೊಮ್ಮಗ ಅಥವಾ ಮಗಳು ಎಲ್ಲರೂ ವ್ಯವಸಾಯ ಮಾಡುತ್ತಾರೆ ಎಂದು ಯಾವ ಆಧಾರದಮೇಲೆ, ಯಾವ ನಂಬಿಕೆಯಮೇಲೆ ನೀವು ನಿರ್ಧಾರಕ್ಕೆ ಬಂದಿದ್ದೀರಿ ? ಮೂರು ಫ್ಯಾಮಿಲಿ ಹೋಲ್ಡಿಂಗಿಗೆ 1 0 ಎಕರೆ ಖುಷ್ಕಿ ಇರಬೇಕು, ಇಲ್ಲದೆ ಹೋದರೆ 3,600 ರೂಪಾಯಿಗಳ ಆದಾಯ ಬರುವಂಥಾದ್ದು ಇರಬೇಕು ಎಂದು ಹೇಳುತ್ತೀರಿ. ನಾನಾದರೂ ಹೇಳುತ್ತೇನೆ ನೀವು ನಿಜವಾಗಿಯೂ ಜನಗಳಿಗೆ ಭೂಮಿಯನ್ನು ಹಂಚಬೇಕು ಎಂದು ಹೇಳುವುದು ನಿಜ. ಆದರೆ ಬೇರೆಯವರು ತಿಂಗಳಿಗೆ ಮೂರು ಸಾವಿರ, ನಾಲು ಸಾವಿರ ಸಂಪಾದನೆಮಾಡಿಕೊಂಡು ಸುಖವಾಗಿರುವ ಕಾಲದಲ್ಲಿ ರೈತನಿಗೆ ಮಾತ್ರ ಸೀಲಿಂಗ್ ತಂದಿರುವುದು ಸರಿಯೇ ? ಈಗ ನೀವು ತಂದಿರುವ ಬಿಲ್ಲಿನ ಪ್ರಕಾರ 180 ಎಕರೆ ಜಮೀನು ಅಥವಾ 3,600 ರೂಪಾಯಿ ಳ ಆದಾಯವನ್ನು ಇಟ್ಟಿದ್ದೀರಿ ? ಹಿಂದೆ ಪಲ್ಲಕ್ಕೆ 20 ರೂಪಾಯಿ ಮಾರ್ಕೆಟ್ ರೇಟ್ ಇತ್ತು. ಈಗ ಭೂಮಿಯಲ್ಲಿ ಬರತಕ್ಕ ಆದಾಯದ 1/3 ಭಾಗದ 20 ಪಟ್ಟು ಕಾಂಪೆನ್ಸೇಷನ್ ಕೊಡಬೇಕು ಮತ್ತು ಅವರಿಗೆ 3,600 ರೂಪಾಯಿ ಆದಾಯ ಬರುವಂತೆ ಇರಬೇಕು ಎಂದು ಮಾಡಿದ್ದೀರಿ.

Sri KADIDAL MANJAPPA.—I will have to once again repeat what I said yesterday and day before. I have only mentioned these figures for illustration. They need not be taken as accurate.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದಕ್ಕೋಸ್ಕರವಾಗಿ ಅವನಿಗೆ 3,600 ರೂಪಾಯಿ ಬರತಕ್ಕಂಥ ಜಮೀನು ಯಾವುದು ಎನ್ನುವ ನಿರ್ಧಾರಕ್ಕೆ ಬಂದಹಾಗೆ ಇದೆ. ಇಲ್ಲದೇಹೋದರೆ ಸೀಲಿಂಗ್ ಹಾಕಬೇಕಾಗುತ್ತದೆ. 100 ಎಕರೆ ಜಮೀನು ಇರಬೇಕು. ಈ ವಿಷಯದ ಮೇಲೆ ತಾವು ವ್ಯಾಖ್ಯಾನಮಾಡಬಾರದು.

ಶ್ರೀ ಕಡಿದಾಳ್ ಮಂಜಪ್ಪ.—ನೂರು ಎಕರೆಗಳೂ ಡ್ರೈ ಏನು ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೂರು ಎಕರೆಗಳ ಪೈಕಿ 50 ಎಕರೆ ಡ್ರೈ ಲ್ಯಾಂಡ್.

ಶ್ರೀ ಕಡಿದಾಳ್ ಮಂಜಪ್ಪ.—ಒಂದುವೇಳೆ ಡ್ರೈ ಲ್ಯಾಂಡ್ ಆದರೆಷ್ಟು, ಬರೀ ವೆಟ್‌ಲ್ಯಾಂಡ್ ಆದರೆಷ್ಟು ಎಂದು ತಮ್ಮ ಅಭಿಪ್ರಾಯ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೊನೆಯ ಪಕ್ಷ ಬರೀ ಡ್ರೈ ಆದರೆ 100 ಎಕರೆ ಕೊಡಿ, ಬರೀ ವೆಟ್ ಆದರೆ 20 ಅಥವಾ 15 ಎಕರೆ ಬಿಡಿ. ಬಾಗಾಯಿತು ಮತ್ತು ತರಿ ಇಲ್ಲದೇಹೋದರೆ ಹತ್ತು ಎಕರೆ ತರಿ ಭೂಮಿ, ಐದು ಎಕರೆ ಬಾಗಾಯಿತು ಬಿಡಿ. ಈಗ ನೀವು ಹೇಳಿರತಕ್ಕ ರೀತಿಯಲ್ಲಿ ಮಾಡಿರತಕ್ಕ ಕಾನೂನಿನಿಂದ ಏನು ಗೊತ್ತಾಗುತ್ತದೆಂದರೆ ಪ್ರತಿಯೊಬ್ಬಬ್ಬರಿಗೂ ಒಂದು ಬೋಗುಣಿ ಪಾತ್ರೆಯಷ್ಟು ಭೂಮಿಯೂ ಸಿಕ್ಕುವ ಹಾಗಿಲ್ಲ. ನೀವು ಭೂಮಿಯನ್ನು ನಿಜವಾಗಿ ಬಡರೈತರಿಗೆ ಆಗಲಿ ಅಥವಾ ವ್ಯವಸಾಯಮಾಡುವುದಕ್ಕೆ ಶಕ್ತಿಯಿರುವವನಿಗಾಗಲಿ ಹಂಚಬೇಕಾದರೆ ಒಂದು ನಿರ್ದಿಷ್ಟವಾದ ತೀರ್ಮಾನಮಾಡಬೇಕು.

ಶ್ರೀ ಜಿ. ಎಂ. ಚಿನ್ನಸ್ವಾಮಿ (ಬಿಳಿಗೆರೆ).—ಮಾನ್ಯ ಸದಸ್ಯರು ಒಂದುಸಾರಿ ನಾಲ್ಕು ಎಕರೆ ಕೊಟ್ಟರೂ ಅವರ ಕೈಲಿ ಸರಿಯಾಗಿ ಸಾಗುಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಇನ್ನೊಂದು ಸಾರಿ ಅವರಿಗೆ 20 ಎಕರೆ ಬಿಡಿ ಎಂದು ಹೇಳುತ್ತಾರೆ. ಅದು ಹೇಗೆ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಮಂತ್ರಿಗಳು ಈಗಿನ ಕಾನೂನು ಪ್ರಕಾರ ಉತ್ತರ ಕೊಡುವಾಗ 3,600 ರೂಪಾಯಿಗಳ ಉತ್ಪನ್ನವಿರಬೇಕೆಂದು ಹೇಳಿದರು. ನನ್ನ ಸ್ನೇಹಿತರ ದೃಷ್ಟಿಯಲ್ಲಿ ನಾನು ಹೇಳಿದ ಸೀಲಿಂಗ್ ಜಾಸ್ತಿ ಎಂದು ಹೇಳುವುದಾದರೆ, ನಾನಾದರೋ ಬಹಳವಾಗಿ ಒಳ್ಳೆಯ ಮನಸ್ಸುಮಾಡಿ ಹೃದಯ ಬಿಚ್ಚಿ ಕೇವಲ ಹತ್ತು ಎಕರೆ ನೀರಾವರಿ ಬಾಗಾಯಿತು ಜಮೀನಿದ್ದರೆ ಮುಂದೆ ನಮ್ಮ ಸ್ನೇಹಿತರಂಥವರು ಯಾವ ರೀತಿಯೂ ಜೀವನ ನಡೆಸುವುದಕ್ಕೆ ತೊಂದರೆಯಾಗಬಾರದು ಎಂದು ಹೇಳುತ್ತಿದ್ದೇನೆ. ತಾವು ಹೇಳತಕ್ಕ ದಾರಿಯಲ್ಲಿ ಭೂಮಿ ಹಂಚಲಿಕ್ಕೆ ಸಾಧ್ಯವಿಲ್ಲ. ಇದರಿಂದ ವೃಥಾ ಖರ್ಚಾಗುತ್ತದೆ. ಇದರಿಂದ ಜನರಿಗೆ ಸಾಕಷ್ಟು ಜಮೀನು ಸಿಕ್ಕುವುದಿಲ್ಲವೆಂದು ನನ್ನ ಖಚಿತ ಅಭಿಪ್ರಾಯ. ಅಡಿಕೆ, ತೆಂಗು, ಕಾಫಿ ತೋಟವನ್ನು 2–3–5 ಎಕರೆಗಳಲ್ಲಿ ಬೆಳೆಯುವುದಕ್ಕೆ ಆಗುವುದಿಲ್ಲ ನಿಜ. ಅಂದ ಮೇಲೆ ತೆಂಗು, ಅಡಿಕೆ ತೋಟಗಳನ್ನು ಅರ್ಧ ಎಕರೆಯೋ ಒಂದು ಎಕರೆಯೋ ತನ್ನ ಶಕ್ತಿ ಎಷ್ಟಿದೆಯೋ ಅಷ್ಟನ್ನು ಮಾತ್ರ ಬೆಳೆಯಬಹುದು. ಆದರೆ ಕಾಫಿ ತೋಟದಹಾಗೆ ಅಡಿಕೆ, ತೆಂಗಿನ ತೋಟಗಳನ್ನು ಬೆಳೆಯುವುದಕ್ಕಾಗುವುದಿಲ್ಲ. ಇಂಡಸ್ಟ್ರೀಸಿಗೆ ಇದು ಅಪ್ಲೈ ಆಗದೆಹೋದರೆ ತೆಂಗು, ಅಡಿಕೆ ತೋಟಗಳ

ಬಗ್ಗೆ ಏತಕ್ಕೆ ಸೀಲಿಂಗ್ ಇಡುತ್ತೀರಿ! ನನಗಿದು ಅರ್ಥವಾಗುವುದಿಲ್ಲ. ಸರ್ಕಾರ ಎಲ್ಲಾ ಕ್ಷೇತ್ರದಲ್ಲೂ ಒಂದು ಯೂನಿಫಾರಂ ಸೀಲಿಂಗ್ ಹಾಕುವುದಾದರೆ, ಆಗ ಮಾತ್ರ ತೆಂಗು, ಅಡಿಕೆ, ಕಾಫಿ ತೋಟದ ಮೇಲೆಯೂ ಸೀಲಿಂಗ್‌ಹಾಕಿ. ಆದರೆ ಒಂದನ್ನು ಮಾತ್ರ ಮರೆತಿದ್ದೀರಿ. ಮೊನ್ನೆ ತಾನೇ ಶ್ರೀಮಾನ್ ಕೆಂಚಪ್ಪನವರು ಹೇಳಿದ್ದಾರೆ. ಹೊಂಗೇತೋಪು ಗ್ರೀನ್‌ಮ್ಯಾನ್ಯೂರ್, ಅಂಥಾದ್ದಕ್ಕೆ 20 ಎಕರೆ ಮಾತ್ರ ಸೀಲಿಂಗ್ ಇದೆ, ಅದು ಕೇವಲ ಹೊಂಗೇ ಸೊಪ್ಪು ಬೆಳೆಯತಕ್ಕ ಭೂಮಿ. ಅದರಮೇಲೆ ಎಗ್ಸೆಂಪ್ಷನ್ ಏತಕ್ಕೆ ಕೊಡಲಲ್ಲ! ಹಾಗೆಯೇ ಆರೆಂಜ್‌ಗ್ರೋವ್ಸ್ ಕೊಡಗಿನಲ್ಲಿವೆ. ಏತಕ್ಕೆ ಅವಕ್ಕೂ ಕೂಡ ವಿನಾಯಿತಿ ಕೊಡಲಿಲ್ಲ! ಹುಣಿಸೆತೋಪು ಬೇಕಾದಷ್ಟಿದೆ. ಅದನ್ನು ಬೆಳೆಯತಕ್ಕವರಿಗೆ ಏತಕ್ಕೆ ವಿನಾಯಿತಿ ಕೊಡಲಿಲ್ಲ! ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಇಡುತ್ತಿದ್ದೀರಿ. ವಿನಾಯಿತಿ ಒಂದೇ ಸಮನೆ ಕೊಡಬೇಕು. ಒಂದಕ್ಕೆ ವಿನಾಯಿತಿ ತೋರಿಸುವುದು ಇನ್ನೊಂದಕ್ಕೆ ವಿನಾಯಿತಿ ತೋರಿಸದೇ ಇರುವುದು. ಇದು ಬಹಳ ಅನ್ಯಾಯ. ಹೀಗಾದರೆ ಬೆಳೆಯತಕವರಿಗೆ ಅಸಮಾಧಾನ ಬೇರೂರುವುದಿಲ್ಲವೇ! ಖಂಡಿತವಾಗಿ ಅಸಮಾಧಾನವುಂಟಾಗುವುದರಲ್ಲಿ ಯಾವ ಸಂಧೇಹವೂ ಇಲ್ಲ. ಎಲ್ಲಾ ತೋಟದವರಮೇಲೆ ಸೀಲಿಂಗ್ ಹಾಕಿದರೆ ಆಗಮಾತ್ರ ಯಾರಿಗೂ ಅಸಮಾಧಾನವಿರುವುದಿಲ್ಲ. ಇಂತಹ ಅಸಮಾಧಾನವನ್ನು ದೂರಮಾಡಬೇಕಾದರೆ ಎಲ್ಲಾ ತೋಟದವರಿಗೂ ಸೀಲಿಂಗ್ ಹಾಕಿ, ಇಲ್ಲದಿದ್ದರೆ ಎಲ್ಲಾ ತೋಟದವರಿಗೂ ವಿನಾಯಿತಿ ಕೊಡಿ ಎಂದು ನಾನು ಸರ್ಕಾರಕ್ಕೆ ಸೂಚನೆ ಕೊಡುತ್ತೇನೆ.

ಇನ್ನು ಷುಗರ್‌ಕೇನ್ ತೋಟಗಳಿಗೆ ವಿನಾಯಿತಿ ತೋರಿಸುವ ಬಗ್ಗೆ ಸರ್ಕಾರಕ್ಕೆ to the capacity of the factory ಎಷ್ಟು ವರ್ಕ್ ಮಾಡಬಹುದೋ ಅಷ್ಟನ್ನು ಕೊಡುವುದಕ್ಕೆ ಶಕ್ತಿ ಇದೆಯೆಂಬುದು ಗೊತ್ತಿದೆ. ಇದನ್ನು ಯಾವ ದೃಷ್ಟಿಯಿಂದ ಹೇಳುತ್ತಿದ್ದೇನೆಂದರೆ ಶ್ರೀಮಾನ್ ನಿಜಲಿಂಗಪ್ಪನವರು ತುಂಗಭದ್ರ ಷುಗರ್ ಫ್ಯಾಕ್ಟರಿಗೆ ಐದು ಸಾವಿರ ಎಕರೆ ಜಮೀನನ್ನು ಲೀಸ್ ಮಾಡಿದಾಗ ಅದನ್ನು ಕಡಮೆ ಮಾಡುವುದಕ್ಕೆ ನಿಮ್ಮ ಗುಂಪಿನಲ್ಲೇ ವಾದವಿತ್ತು. ಎರಡೂವರೆ ಸಾವಿರ ಎಕರೆ ಜಮೀನು ಕೊಟ್ಟರಿ. ಅದೇ ಷುಗರ್ ಫ್ಯಾಕ್ಟರಿಗೆ ಸಂಬಂಧಪಟ್ಟ ಯಾವ ರೈತ 10–15–20 ಎಕರೆ ಜಮೀನು ಇಟ್ಟುಕೊಂಡಿದ್ದಾನೆ, ಅದರಿಂದ ಫಲ ಪಡೆಯುತ್ತಿದ್ದಾನೆ ಎಂಬುದನ್ನು ತೋರಿಸಿ. ಇನ್ನು ceiling in respect of lands of restricted tenure ವಿಷಯದಲ್ಲಿ ಷುಗರ್ ಫ್ಯಾಕ್ಟರಿಗೆ ಯಾವರೀತಿ ಕೊಟ್ಟಿದ್ದೀರಿ ಎಂಬುದನ್ನು ಹೇಳುವಾಗ ಮಂಡ್ಯದಲ್ಲಿ ಅನೇಕ ಕಡೆ ರೈತರೂ ಜಮೀನ್ದಾರರೂ ತಮ್ಮ ಜಮೀನುಗಳನ್ನು ಇಟ್ಟುಕೊಂಡು ಅಲ್ಲಿ ಇವತ್ತು ಕಬ್ಬನ್ನು ಬೆಳೆಸಿ ಸಕ್ಕರೆ ಕಾರ್ಖಾನೆಗೆ ಕೊಡುತ್ತಿದ್ದಾರೆ. ತುಂಗಭದ್ರಾ ಷುಗರ್ ಫ್ಯಾಕ್ಟರಿ ಕೆಳಗೆ ಎಷ್ಟು ಜನ ರೈತರು ಷುಗರ್‌ಕೇನ್ ಕೊಡುತ್ತಾರೆ, ಷುಗರ್ ಕಂಪೆನಿಯವರು ಷುಗರ್‌ಕೇನ್ ತೆಗೆದು ಆದಾಯ ಪಡೆಯುತ್ತಾರೆ ಮತ್ತು ಇವತ್ತಿನ ದಿವಸ ಷುಗರ್ ಕೇನ್ ಬೆಲೆ ಏಕೆ ಜಾಸ್ತಿಯಾಗುತ್ತಿದೆ ಎಂಬುದಕ್ಕೆ ಸರ್ಕಾರ ಉತ್ತರ ಕೊಟ್ಟಿದ್ದು ನೋಡಿದರೆ ಅವರು ನಿಜವಾಗಿ ಯಾರೋ ಭೂಮಾಲೀಕರ ಗುಂಪಿಗೇನೋ ಸಹಾಯ ಮಾಡಬೇಕು, ಆ ಮಾಲೀಕರನ್ನು ರಕ್ಷಣೆ ಮಾಡಬೇಕು ಎಂಬ ಉದ್ದೇಶ ಇಟ್ಟುಕೊಂಡಿರುವುದು ಎದ್ದು ಕಾಣುತ್ತಿದೆ. ಆದ್ದರಿಂದ ಈ 72ನೇ ಕ್ಲಾಜು—Ceiling in respect of future acquisitions by sugar factories ಎಂಬುದನ್ನು ಈ ಮಸೂದೆಯಲ್ಲಿ ಸೇರಿಸಬಾರದು ಎಂದು ಈ ಮೂಲಕ ನಾನು ಪ್ರಾರ್ಥನೆ ಮಾಡುತ್ತೇನೆ.

ಇನ್ನು 73ನೆಯ ಕ್ಲಾಜು—Land on restricted tenure such as service or other inam land—for the purpose of ceilings—ಈ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ದೇಶದಲ್ಲಿ ತಾವು ಹೇಳತಕ್ಕಂಥ ತೋಟಿ-ತಳವಾರರಿಗೆ, ಶ್ಯಾನುಭೋಗರು ಪಟೇಲರಿಗೆ ಕೊಟ್ಟಿರತಕ್ಕ ಇನಾಂ ಲ್ಯಾಂಡ್ ಎಷ್ಟೆಷ್ಟು ಇದೆ, ಯಾವಯಾವ ಭಾಗದಲ್ಲಿ ಎಷ್ಟೆಷ್ಟು ಇನಾಮ್ ಲ್ಯಾಂಡ್ ಇದೆ ಎಂಬುದು ಸರಿಯಾಗಿ ಗೊತ್ತಾಗುವುದಿಲ್ಲ. ಈ ವಿಚಾರದಲ್ಲಿ ನಮಗೆ ಆಕ್ಯುಯಲ್ಲಾಗಿ ಅಂಕಿಅಂಶಗಳು ಒದಗಿಸಿದ್ದರೆ ಸೀಲಿಂಗ್ ಲಿಮಿಟ್ ಬಗ್ಗೆ ಯಾವರೀತಿ ತೀರ್ಮಾನ ತೆಗೆದುಕೊಳ್ಳಬಹುದೆಂಬುದು ಗೊತ್ತಾಗುವುದಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಅವರದು ಸರ್ಕಾರಕ್ಕೆ ಸೇರಿದ ಜಮೀನು. ಅವರ ಸರ್ವಿಸ್ ನಿಲ್ಲಿಸಿದರೆ ಸರ್ಕಾರಕ್ಕೆ ಬರುವ ಉತ್ಪತ್ತಿ ಹೋಗುತ್ತದೆ. ಅದಕ್ಕೋಸ್ಕರ ಆ ಕ್ಲಾಜನ್ನು ಈ ಮಸೂದೆಯಲ್ಲಿ ಸೇರಿಸಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇನ್ನು 74ನೇ ಕ್ಲಾಜು. ಅದರಲ್ಲಿ Surplus land to be surrendered to State Government ಎಂಬ ವಿಷಯ ಹೇಳಿದೆ. ಈ ಬಗ್ಗೆ ನಾನು ಹೇಳುವುದಾದರೆ ತಮಗೆ ಕೊಡತಕ್ಕ ಭೂಮಿ, ಸರ್ಕಾರ ಪಡೆಯತಕ್ಕ ಜಮೀನನ್ನು ಎಷ್ಟು ವಿವೇಚನೆಯಿಂದ ಜನರಿಗೆ ಹಂಚುತ್ತೀರಿ ಎಂಬುದರಲ್ಲಿ ನನಗೆ ಅನುಮಾನ ಬಂದಿದೆ. ಪ್ಲಾನಿಂಗ್ ಕಮಿಷನ್ನಿನವರು ಜಮೀನನ್ನು ಲ್ಯಾಂಡ್‌ಲೆಸ್ಸಿಗೆ ಕೊಡಬೇಕೆಂದು ಹೇಳುತ್ತಾರೆ. ಅದು ಬಹಳ ಸಂತೋಷ. ಯಾವಾಗ ಸರ್ಪ್ಲಸ್ ಲ್ಯಾಂಡನ್ನು ಜಮೀನ್ದಾರರಿಂದ ಪಡೆಯುತ್ತೀರೋ ಅದನ್ನು ಜಮೀನು ಇಲ್ಲದವನಿಗೆ ಕೊಡಬೇಕು. ಹಾಗೆ ಕೊಡದೆ ತಾವು ಅದನ್ನು ಬೇರೆ ರೀತಿಯಲ್ಲಿ ಉಪಯೋಗಮಾಡಿದರೆ ನಮಗೆ ಸಂತೋಷವಿಲ್ಲ. ಸರ್ಕಾರಕ್ಕೆ ಕೋ-ಆಪರೇಟಿವ್ ಫಾರ್ಮಿಂಗ್ ಪ್ರಾರಂಭಮಾಡಬೇಕೆಂಬ ಇಚ್ಛೆ ಇರುವುದರಿಂದ ಅಲ್ಲಿಯೂ ಜಮೀನನ್ನು ಕೊಡಬಹುದು ಎಂಬುದಾಗಿ ತಮ್ಮ ಉದ್ದೇಶ ಇದೆಯೆಂಬುದು ಎದ್ದು ಕಾಣುತ್ತಿದೆ. ಅದಕ್ಕೋಸ್ಕರ ತಮ್ಮ ಅಭಿಪ್ರಾಯದಲ್ಲಿ ಸರ್ಪ್ಲಸ್ ಲ್ಯಾಂಡ್ ಇರುವವನಿಂದ ಜಮೀನನ್ನು ಕಿತ್ತುಕೊಂಡು ಕೋ-ಆಪರೇಟಿವ್ ಫಾರ್ಮಿಂಗಿಗೆ ಕೊಡುತ್ತೀರೋ ಅಥವಾ ಯಾವನು ಜಮೀನಿಲ್ಲವೆಂದು ಹೇಳುತ್ತಾನೋ ಅಂತಹವನಿಗೆ ಕೊಡುತ್ತೀರೋ ಅದನ್ನು ತಿಳಿಸಬೇಕು. ನನಗೆ ಇದರಲ್ಲಿ ತಿಳಿಯಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಮಸೂದೆಯನ್ನು ಸರಿಯಾಗಿ ಓದಿ. ಎಲ್ಲಾ ಅರ್ಥವಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಎಲ್ಲಾ ಓದಿದ್ದೇನೆ. ನನಗೆ ಅದರಲ್ಲಿ ಏನೇನು ಅಂಶಗಳು ಯಾವ ಯಾವರೀತಿ ಸೇರಿಸಿವೆಯೆಂಬುದೆಲ್ಲಾ ಅರ್ಥವಾಗಿದೆ.

ಇನ್ನು 88ನೆಯ ಸೆಕ್ಷನ್‌ನಲ್ಲಿ Disposal of surplus land ವಿಷಯ ಹೇಳಿದೆ. ಅದರಲ್ಲಿ ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿಯ ಬಗ್ಗೆ ಹೇಳಿರುವುದನ್ನು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ನೋಡಿದರೆ, ಅದು ಹೇಗೆ ಕಾಣುತ್ತದೆಂದರೆ ಚೇಳಿನ ಮಂತ್ರ ಬಾರದೇ ಇರುವವರು ಹಾವಿನ ಬುಟ್ಟಿಗೆ ಕೈಹಾಕಿದರಂತೆ ಎಂಬಂತಾಗಿದೆ. ಈಗ ನಡೆಯುತ್ತಿರತಕ್ಕ ಸಮಗ್ರಸಹಕಾರ ಸೇವಾ ಸಂಘಗಳ ಕೆಲಸ ಕಾರ್ಯಗಳು ಎಷ್ಟರಮಟ್ಟಿಗೆ ನಡೆಯುತ್ತಿವೆ ಮತ್ತು ತಮ್ಮ ವ್ಯವಸಾಯ ಕ್ಷೇತ್ರಗಳಲ್ಲಿ ಎಷ್ಟರಮಟ್ಟಿನ ಭಯಂಕರ ದೃಷ್ಟಿಯನ್ನುಂಟುಮಾಡಿ ಬಡರೈತರನ್ನು ಹೆದರಿಸುತ್ತಿದ್ದೀರಿ ಎಂಬುದನ್ನು ತಾವು ಅರಿತು ಕಾನೂನುಗಳನ್ನು ಮಾಡಬೇಕು.

ಸ್ವಾಮಿ, ತಾವು ಮೊದಲು ಪ್ರಾರಂಭಿಸಿದ ಸರ್ವಿಸ್ ಕೋ-ಆಪರೇಟಿವ್ ಸೊಸೈಟಿಗಳು ಎಷ್ಟರಮಟ್ಟಿಗೆ ಕೆಲಸಮಾಡುತ್ತಿವೆ ಎಂಬುದನ್ನು ನೋಡಿ, ಈ ಮೈಸೂರು ದೇಶದಲ್ಲಿ ಸಹಕಾರ ಸಂಘಗಳಲ್ಲಿ ಲಕ್ಷಾಂತರ ರೂಪಾಯಿಗಳ ಹಣ ದುರುಪಯೋಗವಾಗುತ್ತಿದೆ. ರಾಜಕೀಯದ ತರಹ ಈ ರೀತಿಯ ಸಹಕಾರ ಸಂಘಗಳು ಈ ದಿವಸ ದೇಶದಲ್ಲಿ ಬೆಳೆಯುತ್ತಿವೆಯೆಂದು ಹೇಳಿದರೆ ತಪ್ಪಾಗುವುದಿಲ್ಲ. ಸರ್ ಎಂ. ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಸ್ಥಾಪಿತವಾದ ರೂರಲ್ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿಗಳೆಷ್ಟೋ ನಡೆದುವು, ಶ್ರೀಮಾನ್ ಮರಿಯಪ್ಪನವರ ಕಾಲದಲ್ಲಿ ಸಮಗ್ರಸೇವಾ ಸಹಕಾರ ಸಂಘಗಳು ಸ್ಥಾಪನೆಯಾದುವು, ಈ ದಿವಸ ಖಾದಿ ಬೋರ್ಡ್ ಮತ್ತು ಇನ್ನೂ ಎಷ್ಟೋ ಸಹಕಾರ ಸಂಘ ಸಂಸ್ಥೆಗಳು ಸ್ಥಾಪನೆಯಾಗಿವೆ. ಇವೆಲ್ಲಾ ಹೇಗೆ ನಡೆಯುತ್ತಿವೆ, ಜನರಿಗೇನಾದರೂ ಅನುಕೂಲವಾಗಿದೆಯೇ, ಅದರಕಡೆ ಸ್ವಲ್ಪವಾದರೂ ದೃಷ್ಟಿಯಿದೆಯೇ, ಅದಕ್ಕೆ ಬೆಲೆಯಿದೆಯೇ ಎಂದು ಯೋಚನೆಮಾಡಬೇಕಾಗಿದೆ. ಯಾವ ಸೊಸೈಟಿ ತೆಗೆದುಕೊಳ್ಳಿ, ಯಾವ ಸಂಘ ಸಂಸ್ಥೆ ತೆಗೆದುಕೊಳ್ಳಿ, ಎಲ್ಲ ಕಡೆಯೂ ಹಣದ ದುರುಪಯೋಗ ನಡೆಯುತ್ತಿದೆ. ಅಂದಮೇಲೆ ಸಹಕಾರ ವ್ಯವಸಾಯ ಕ್ಷೇತ್ರ ಎಷ್ಟುಮಟ್ಟಿಗೆ ನಡೆದೀತೆಂಬುದನ್ನು ಊಹಿಸಬಹುದು. ಮೈಸೂರು ಸಂಸ್ಥಾನದಲ್ಲಿ ರೂ.ವ ಸಹಕಾರ ವ್ಯವಸಾಯ ಕ್ಷೇತ್ರ ಎಷ್ಟುಮಟ್ಟಿಗೆ ನಡೆದಿದೆ, ಅದರಿಂದ ಎಷ್ಟು ಅನುಕೂಲವಾಗಿದೆ, ಅದೆಷ್ಟು ಡಿವಿಡೆಂಡ್ ಡಿಕ್ಲೇರ್ ಮಾಡಿದೆ ಎಂದು ಹಿಂದಿನದನ್ನು ನೋಡಿ ಮುಂದೆ ಬುದ್ಧಿವಂತಿಕೆಯಿಂದ ವಾದಮಾಡಬೇಕಾಗುತ್ತದೆ. ಬೆಳಗಾಂನಲ್ಲಿ ನಾವು ಕೇಳಿರುವ ಹಾಗೆ ಯಾವುದೋ ಒಂದು ಸೊಸೈಟಿ, ಮೈಸೂರಿಗೆ ಬೆಳಗಾಂ ಸೇರುವುದಕ್ಕೆ ಮುಂಚೆ ಅಲ್ಲಿದ್ದ ಒಂದು ವ್ಯವಸಾಯ ಕ್ಷೇತ್ರ, ಸಹಕಾರ ಪದ್ಧತಿಯ ಮೇಲೆ ಪ್ರಾರಂಭಿಸಿದ ಕ್ಷೇತ್ರ ಯಾವುದಿತ್ತೋ ಅದರ ಬಾಗಿಲನ್ನು ಈ ದಿನ ಮುಚ್ಚಿದ್ದಾರೆ. ಸರ್ಕಾರ ಕೊಟ್ಟ 45-50 ಸಾವಿರ ರೂಪಾಯಿಗಳಷ್ಟು ಹಣಕ್ಕೆ ಲೆಕ್ಕಪತ್ರವಿಲ್ಲ. ಬೊಂಬಾಯಿ ಪ್ರಾಂತದಿಂದ ಬಂದಿರುವವರು, ಕಾಂಗ್ರೆಸ್ ಪಕ್ಷದ ಈ ಸಭಾ ಸದಸ್ಯರೇ ಅನೇಕರು ಸಹಕಾರ ವ್ಯವಸಾಯ ನಿಜವಾಗಿಯೂ ಜನರಿಗೆ ಮೋಸಮಾಡುವುದು ಎಂದು ಹೇಳಿದ್ದಾರೆ. ನಾನು ಅವರ ಹತ್ತಿರ ಗಂಟೆಗಟ್ಟಲೆ ಮಾತನಾಡಿದ್ದೇನೆ. ಈ ಪದ್ಧತಿ ಸರಿಯಾದುದಲ್ಲ. ಕಾಂಗ್ರೆಸ್ ಸರ್ಕಾರ ಬಹಳ ಎಚ್ಚರಿಕೆಯಿಂದ ಹೆಜ್ಜೆಯಿಡಬೇಕಾಗಿದೆ. ಮಾನ್ಯ ಸಂಜೀವರೆಡ್ಡಿಯವರೂ ಸಹ ಸಹಕಾರ ವ್ಯವಸಾಯದ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದ ಕಾಲಿಡುತ್ತಿರುವುದಾಗಿ ಹೇಳಿದ್ದಾರೆ. ಮೈಸೂರು ಸಂಸ್ಥಾನದಲ್ಲಿ 26 ಸಹಕಾರ ವ್ಯವಸಾಯ ಕ್ಷೇತ್ರಗಳಿವೆಯೆಂದು ಮಂತ್ರಿಗಳು ಹೇಳಿದರು. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಈ ಬಿಲ್ಲನ್ನು ಪೈಲಟ್‌ಮಾಡುವಾಗ ಸರ್ಕಾರದ ಉದ್ದೇಶ ಈ ರೀತಿಯಿದೆ, ಸಹಕಾರ ವ್ಯವಸಾಯದ ಪದ್ಧತಿಯ ಪ್ರಕಾರ ಮೈಸೂರು ಸಂಸ್ಥಾನದಲ್ಲಿ ಇಷ್ಟು ಸೊಸೈಟಿ ಪ್ರಾರಂಭಿಸಿ ಇಷ್ಟು ದಕ್ಷತೆಯಿಂದ ಕೆಲಸಮಾಡುತ್ತಿವೆ ಎಂದು ಹೇಳಬೇಕಾಗಿತ್ತು. ಅವರು ಹೇಳದಿರುವುದಕ್ಕೆ ಕಾರಣ ಇವೆಲ್ಲಾ ನಾಮಾವಶೇಷವಾಗಿವೆ. ಇವು ಎಲ್ಲಿದ್ದವೋ, ಎಲ್ಲಿ ಬೆಳೆದುವೋ ಯಾರಿಗೂ ಗೊತ್ತಿಲ್ಲ. ಇದನ್ನೇಕೆ ಇಲ್ಲಿ ತಂದರೋ ಗೊತ್ತಿಲ್ಲ. ವ್ಯವಸಾಯ ಕ್ಷೇತ್ರಗಳಲ್ಲಿ ಸಹಕಾರ ಪದ್ಧತಿಯಮೇಲೆ ವ್ಯವಸಾಯವನ್ನವಲಂಬಿಸುವಾಗ ಯಾರಮೇಲೂ ಬಲವಂತಮಾಡುವುದಿಲ್ಲ, ಬಲವಂತಮಾಡಿ ಯಾರನ್ನೂ ಹಿಂಸೆಮಾಡುವುದಿಲ್ಲ ಎಂದು ಪಂಡಿತ್ ನೆಹ್ರೂರವರೇ ಹೇಳಿದ್ದಾರೆ. ಅದರ ಈ ಮಸೂದೆಯಲ್ಲಿರುವ ಪ್ರತಿಯೊಂದು ವಿಧಿ, ನಿಯಮ ಓದುತ್ತಿದ್ದರೆ ರಷ್ಯಾ, ಚೈನಾ ದೇಶಗಳಲ್ಲಿ ನಡೆಯುವ ಕ್ರೂರ ದಬ್ಬಾಳಿಕೆಗಿಂತ ಘೋರವಾದ ದಬ್ಬಾಳಿಕೆ ನಡೆಸುವಂತೆ ಕಂಡುಬರುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಮ್ಮ ಮುಂದೆ ಹೇಳುವುದನ್ನು ತಾವು ಸ್ವಲ್ಪ ಅರ್ಥಮಾಡಿಕೊಳ್ಳಬೇಕು. ಕಮ್ಯೂನಿಸಂ ಅಪ್ರತ್ಯಕ್ಷವಾಗಿ ತಾವು ಒಪ್ಪಿಕೊಳ್ಳಲು ಪ್ರಯತ್ನ ನಡೆದಿದೆ. ಇದರ ಮೂಲಕ ತಮ್ಮ ಅಧಿಕಾರ ಶಾಶ್ವತ ಆಗಬಹುದೆಂಬ ದೃಷ್ಟಿಯಿದೆ ಎಂದು ಹೇಳದೆ ವಿಧಿಯಿಲ್ಲ. ಈ ದಿವಸ ವ್ಯವಸಾಯ ಮಾಡುವ ಒಕ್ಕಲಿನವರು ತಮ್ಮ ದನಗಳಿಗೆ ಮೇವು ಬೇಕಾದರೆ ಸೊಸೈಟಿ ಇನ್ಸ್‌ಪೆಕ್ಟರನ್ನೋ, ಡೈರೆಕ್ಟರನ್ನೋ ಕೇಳಿ ಹುಲ್ಲು ಕೊಯ್ದು ಹಾಕಬೇಕಾಗಿದೆ. ಇದಕ್ಕಿಂತಲೂ ಡಾ|| ಚಂದ್ರಶೇಖರ್‌ರವರು ಇಲ್ಲಸ್ಟ್ರೇಟೆಡ್ ವೀಕ್ಲಿಯಲ್ಲಿ ಬರೆದಿರುವ ಲೇಖನ ನೋಡಿದರೆ ಕಮ್ಯೂನಿಟಿ ಲೈಫ್ ಎಷ್ಟುಮಟ್ಟಿಗೆ ದುರವಸ್ಥೆಗೆ ಈಡುಮಾಡಿದೆಯೆಂಬುದು ಅರ್ಥವಾಗುತ್ತದೆ. ಈ ದಿವಸ "Democracy should function well. It is a peoples' rule. Peoples' views must be respected." ಎಂದು ಹೇಳಿದ್ದಾರೆ. ತಾವು ಜನರ ಅಭಿಪ್ರಾಯಕ್ಕೆ ಮನ್ನಣೆ ನೀಡುತ್ತಿದ್ದೀರಾ ಎಂಬುದೇ ಅರ್ಥವಾಗುತ್ತಿಲ್ಲ; 75 ಜನ ಒಪ್ಪಿದರೆ ಇತರರಮೇಲೆ ಒತ್ತಾಯವಾಗುತ್ತದೆ. ಕೇರಳದಲ್ಲಿ ಇದಕ್ಕಿಂತ ಹೆಚ್ಚಾಗಿ ನಡೆಯಿತು. ಕೇರಳ ನೋಡಿ ತಾವು ಪಾಠ ಕಲಿತು ಮೈನಾರಿಟೀಸ್ ಅಭಿಪ್ರಾಯಕ್ಕೆ ಗೌರವ ನೀಡಬೇಕು. ಪ್ರತಿಯೊಂದು ಅಂಶವನ್ನೂ ದೂರದೃಷ್ಟಿಯಿಂದ ನೋಡಬೇಕು ಎಂದು ಸರ್ಕಾರಕ್ಕೆ, 140 ಜನ ತಮ್ಮ ಪಕ್ಷದವರಿಂದ ಕೂಡಿರುವ ಸರ್ಕಾರಕ್ಕೆ ಬಹಳ ವಿನಯಪೂರ್ವಕವಾಗಿ ಸೂಚನೆಮಾಡುತ್ತಿದ್ದೇನೆ. ಇದನ್ನು ಮಾಡದಿದ್ದರೆ ಸರ್ಕಾರಕ್ಕೆ ಕೀರ್ತಿಬರುವುದಿಲ್ಲ. ಕೋ-ಆಪರೇಟಿವ್ ಫಾರ್ಮಿಂಗ್ ಮಾಡಬೇಕೆಂದಿರುವಾಗ ಅದು ಎಷ್ಟು ದಕ್ಷತೆಯಿಂದ ಕೆಲಸಮಾಡಬಹುದು, ಎಷ್ಟು ಅದರಿಂದ ಆಹಾರದ ಉತ್ಪತ್ತಿ ಹೆಚ್ಚಬಹುದು, ಅದು ಜಯಪ್ರದವಾಗಿ ನಡೆಯುತ್ತದೆಯೇ ಎಂಬುದನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆಮಾಡಬೇಕಾಗುತ್ತದೆ. ಕೋ-ಆಪರೇಟಿವ್ ಫಾರ್ಮಿಂಗ್ ಎಂಬುದನ್ನು ಕನಸು ಮನಸ್ಸಿನಲ್ಲಿ ಕೂಡ ಇಟ್ಟುಕೊಳ್ಳಬೇಡಿ ಎಂದು ಸರ್ಕಾರಕ್ಕೆ, ಆಡಳಿತ ಪಕ್ಷಕ್ಕೆ ಈ ಸಮಯದಲ್ಲಿ ಸೂಚನೆ ಕೊಡುತ್ತಿದ್ದೇನೆ. I do not want suppositions because the Hon'ble Minister told that this is an illustration. I do not want an illustration. Let us be practical. Let us be definite about our views. ಸರ್ಕಾರ ಇಂಥ ಒಂದು ಅತ್ಯುತ್ತಮವಾದ ಕಾನೂನನ್ನು ಕಡತಕ್ಕೇರಿಸುವಾಗ ಏನೇನು

ಇದರಿಂದ ಅಪಾಯವಿದೆ, ಕಷ್ಟವಿದೆ ಎಂದು ಕಣ್ಣು ಬಿಟ್ಟು ನೋಡಬೇಕೆಂದು ಹೇಳುತ್ತೇನೆ.

ಇನ್ನು ಒಂದೇ ಒಂದು ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಏನೆಂದರೆ ಕಾಫಿ ಪ್ಲಾಂಟೇಷನ್‌ಗೆ ವಿನಾಯಿತಿ ಎಂದು ಹೇಳುತ್ತೀರಿ. In South Kanara a peculiar law is just governing a particular section of the people. 'ಅಳಿಯಸಂತಾನ' ಎಂಬುದೊಂದು ಅಲ್ಲಿದೆ. ಅದಕ್ಕೇನು ಮಾಡುತ್ತೀರಿ! ಅದಕ್ಕೆ ಎಷ್ಟು ದೂರ ರಕ್ಷಣೆಕೊಡಬಹುದು! ಶ್ರೀಮಾನ್ ಶ್ರೀನಿವಾಸಶೆಟ್ಟರು ಕೆಲವು ವರ್ಷಗಳ ಕೆಳಗೆ ಮದ್ರಾಸ್ ಹೈಕೋರ್ಟಿನಲ್ಲಿ ಒಂದು ವಿಷಯದಲ್ಲಿ ಹೀಗೆ ತೀರ್ಮಾನವಾಗಿದೆಯೆಂದು ಹೇಳುತ್ತಿದ್ದರು. ತಂದೆ ಕಡೆ ಮತ್ತು ತಾಯಿಯ ಕಡೆ ಸಂಬಂಧಿಗಳ ವಿವರಣೆಬೇಕಾಗುತ್ತದೆ. ಅದಕ್ಕೆ ಹೇಗೆ ರಕ್ಷಣೆಕೊಡುತ್ತೀರಿ! ಅಲ್ಲಿರುವ ರೈತರನ್ನು ಭೂ ಹಿಡುವಳಿ ಒಕ್ಕಲು ಅನ್ನುತ್ತೀರಾ ಅಥವಾ ಗೇಣೀದಾರ ರನ್ನು ಒಕ್ಕಲು ಎನ್ನುತ್ತೀರಾ ಎಂಬುದನ್ನು ಎಲ್ಲೂ ಹೇಳಿಲ್ಲ.

4 P.M.

ಜಮೀನುದಾರರು ಗೇಣೀದಾರರನ್ನು ಬಿಡಿಸ ಬೇಕೆಂದು ಮಾಡಿದರೆ ಅಲ್ಲಿ ಒಂದು ದೊಡ್ಡ ಚಳವಳಿ ಏಳುತ್ತದೆ. ಸೆಕ್ಷನ್ 70ರಲ್ಲಿ 'The tota extent held shall not exceed nine family holdings in the case of an Aliya Santhana family and six family holdings in the case of other families' ಎಂದು ಇದೆ. ಹೀಗೆ ಹೇಳುವುದರಿಂದ ನನಗೆ ಇದರ ಅರ್ಥವಾಗು ವುದಿಲ್ಲ. ಆದ್ದರಿಂದ ಅಳಿಯ ಸಂತಾನದ ಪರಮಾವಧಿ ಮಿತಿಯ ಬಗ್ಗೆ ಸುದೀರ್ಘವಾಗಿ ಆಲೋಚನೆಮಾಡ ಬೇಕು. ಇದರಿಂದ ಜಮೀನುದಾರನಿಗೂ ಗೇಣಿದಾರ ನಿಗೂ ತೊಂದರೆಯಾಗುತ್ತದೆ. ಆದ್ದರಿಂದ ಇದಕ್ಕೆ ಒಂದು ಪರಿಹಾರವನ್ನು ಹುಡುಕುತಾರೆಂದು ನಾನು ತಿಳಿಯುತ್ತೇನೆ. ನಾನೇನೂ ಶ್ರೀಮಾನ್ ಹನು ಮಂತಯ್ಯನವರ ಹಾಗೆ ಮುಖ್ಯ ಮಂತ್ರಿಯಾಗಿರಲಿಲ್ಲ. ನನ್ನ capacity, limit ಎಷ್ಟಿದೆಯೋ ಅಷ್ಟನ್ನು ಅರ್ಥಮಾಡಿಕೊಂಡಿದ್ದೇನೆ. ಅಷ್ಟನ್ನು ತಿಳಿದುಕೊಂಡಿ ದ್ದೇನೆ. ದೇಶಕ್ಕೆ ಏನಾದರೂ ಒಳ್ಳೆಯದನ್ನು ಮಾಡಿರಿ ಎಂದು ನಾನು ಹೇಳುತ್ತೇನೆ. ಪ್ರತಿಯೊಂದು ವ್ಯಾಜ್ಯ ದಲ್ಲಿ ವಕಾಲತ್ತು ಕೊಡುವುದಕ್ಕೆ ಅವಕಾಶವಿದೆ. ಆದರೆ ಗೇಣಿದಾರ ಮತ್ತು ಜಮೀನುದಾರ ಇವರ ನಡುವೆ ವ್ಯಾಜ್ಯಬಂದಾಗ್ಗೆ ಮಾತ್ರ ಬೇಡ ಎಂದು ಹೇಳುವುದಾದರೆ ಇದೆಂಥ ನ್ಯಾಯ! ಇಂಥ ಡಿಕ್ಟೇಟರ್ ಆಳ್ವಿಕೆಯನ್ನು ನಾನೆಲ್ಲಿಯೂ ನೋಡಿಲ್ಲ. ಪಾಕಿಸ್ತಾನ ದಲ್ಲಿ ಸರ್ವಾಧಿಕಾರಿ ಅಯೂಬ್‌ಖಾನರು ಈರೀತಿ ಮಾಡಿದ್ದಾರೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಎಲ್ಲ ಜನಗಳಿಗೂ ದಾರಿ ತೋರಿಸತಕ್ಕಂಥಾದ್ದು ಕಾನೂನು. ಕಾನೂನು ಪ್ರಕಾರ ಯಾರಿಗಾದರೂ ರಕ್ಷಣೆ ಪಡೆದು ಕೊಳ್ಳಬೇಕಾದರೆ ಕೋರ್ಟುಗಳು ಬೇಕು. ಜನರು ನ್ಯಾಯಾಲಯಕ್ಕೆ ಹೋಗಿ ರಿಲೀಫ್ ಪಡೆಯಬಹುದು. ನ್ಯಾಯಾಲಯಗಳಲ್ಲಿ ಕಾನೂನಿನ ಪ್ರಕಾರ ವಾದ ಮಾಡುವುದಕ್ಕೆ ಲಾಯರುಗಳು ಬೇಕು. They plead he is not guilty and that he is innocent. ಒಂದೊಂದು ಸಾರಿ ಲಾಯರುಗಳಿಂದ ಜನಗಳಿಗೆ ತೊಂದರೆಯಾಗುತ್ತದೆ. They create-litigation ಎಂಬ ಭಾವನೆಯೂ ಇದೆ. ಆದರೆ ಪರಿಹಾರ ಕೊಡಿಸಬೇಕಾದರೆ ಲಾಯರುಗಳು ಇರ ಬೇಕಾದುದು ಆವಶ್ಯಕ. ಲಾಯರುಗಳು ಗೇಣಿದಾರನ ಪರವಾಗಿ ನ್ಯಾಯಾಲಯದಲ್ಲಿ ವಾದ ಮಾಡಬಹುದು. ಗೇಣಿದಾರ ಮತ್ತು ಜಮೀನುದಾರ ಇವರುಗಳ ನಡು ವಿನ ವ್ಯಾಜ್ಯ ಫೈಸಲು ಆಗುವುದಕ್ಕೆ ಲಾಯರು ಗಳಿಗೆ ವಕಾಲತ್ತು ಹಾಕುವುದಕ್ಕೆ ದೊಡ್ಡ ಮನಸ್ಸು ಮಾಡಿ ಪರವಾನಗಿ ಕೊಡಬೇಕೆಂದು ನಾನು ಸೂಚಿಸು ತ್ತೇನೆ.

ನಾವು ಈ ಸಭೆಯಲ್ಲಿ ಹತ್ತು ದಿವಸ ಈ ಮಸೂದೆ ಯನ್ನು ಚರ್ಚೆಮಾಡಿದರೂ ಕೂಡ ಜಮೀನುದಾರರಿಗೆ ರಕ್ಷಣೆ ಕೊಡುವಹಾಗೆ ಮಾಡಿ ಈ ಮಸೂದೆಯನ್ನು ಕಾನೂನು ಕಡತಕ್ಕೆ ಏರಿಸಿ ಬಿಡುತ್ತೀರಿ. ದೇಶದಲ್ಲಿ ಭೂಕಂಪವಾಗಿ ಭೂಮಿ ನಡುಗಿದರೂ ಕೂಡ ನೀವು ನಡುಗದೆ ಗಟ್ಟಿಯಾಗಿ ನಿಲ್ಲುತ್ತೀರಿ. ಈಗಾಗಲೇ ಈ ಕಾನೂನು ಬರುತ್ತದೆಂದು ಜನರು ತಿಳಿದುಕೊಂಡು ತಮ್ಮ ಹತ್ತಿರವಿರುವ ಹೆಚ್ಚಿನ ಭೂಮಿಯನ್ನು ಬೇರೆ ಯವರ ಹೆಸರಿಗೆ ಟ್ರಾನ್ಸ್‌ಫರ್ ಮಾಡುವುದು, ಗಿಫ್ಟ್ ಕೊಡುವುದು, ಭೂಮಿಯನ್ನು ಹಂಚಿಕೊಟ್ಟುಬಿಡು ವುದು, ಮಾರಾಟಮಾಡುವುದು ಮುಂತಾದುವು ನಡೆದಿದೆ. ಹೀಗೆ ಮಾಡುವುದರಿಂದ ಈ ಭೂಸುಧಾರ ಣೆಯ ಮೂಲ ಉದ್ದೇಶವನ್ನೇ ವಿಫಲಗೊಳಿಸುವುದಕ್ಕೆ ಪ್ರಯತ್ನಪಡುತ್ತಿದ್ದಾರೆ. ಇದನ್ನು ತಡೆಗಟ್ಟಬೇಕಾ ದುದು ಅತ್ಯಂತ ಅಗತ್ಯ. ನಾವು ಹೇಳುವುದು ಅರಣ್ಯ ರೋದನವಾಗುತ್ತದೆ. ನಾವು ಹೇಳುವುದು ಅರಣ್ಯ ರೋದನವಾಗಬಾರದೆಂದು ಹೇಳಲಿಚ್ಛಿಸುತ್ತೇನೆ. ಆದ್ದರಿಂದ ಜಮೀನುದಾರರು ಮಾಡತಕ್ಕಂಥ ಅಧರ್ಮ ಗಳಿಗೆ ತಡೆಹಾಕುವುದಕ್ಕೆ ಒಂದು ಗವರ್ನಮೆಂಟ್ ಆರ್ಡರ್ ಹೊರಡಿಸಬೇಕು. ಈ ತಡೆ ಆರ್ಡರನ್ನು ತಕ್ಷಣ ಹೊರಡಿಸಬೇಕೆಂದು ನಾನು ಸರಕಾರಕ್ಕೆ ಮನವಿಮಾಡಿಕೊಳ್ಳುತ್ತೇನೆ.

Your Bill is going to prove to be in vain. Certainly it will not give relief to the agriculturists. You are not going to help the tenants. Therefore, I request that this Government should see that this law comes into effect immediately. Whether they remain in office or not they must pass this legislation. They must send this to the Upper House immediately and the report of the Joint Select Committe be discussed before October or November.

Sri K. HANUMANTHAIYA (Ramanagaram).—There is not one per cent of land for distribution. The Prime Minister himself when asked, at a press conference has said let these transfers take place ; I have no objection.'

Sri C. J. MUCKANNAPPA.—Is it not upto the Hon'ble Member to advise the Ministry ?

ಸ್ವಾಮಿ, ನಮಗಂತೂ ಪಂಡಿತನೆಹರೂ ಅವರು ಹೇಳುವುದು, ಶ್ರೀಮಾನ್ ಹನುಮಂತಯ್ಯನವರು ಹೇಳು ವುದು, ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀಮಾನ್ ವೀರಣ್ಣಗೌಡರು ಹೇಳುವುದು, ಕಂದಾಯ ಮಂತ್ರಿಗಳು ಹೇಳುವುದು, ಇದನ್ನೆಲ್ಲಾ ಕೇಳಿಬಿಟ್ಟರೆ ನಾವು ಎಲ್ಲಿ ಇದ್ದೇವೆ ಎಂಬುದೇ ತಿಳಿ ಯುವದಿಲ್ಲ. ನಾವೇನು ಬಾಬಾಬುಡನಗಿರಿ ಬೆಟ್ಟದ

ಮೇಲೆ ಇದ್ದೇವೆಯೋ, ಕಾಂಚನಗಿರಿ ತಪ್ಪಲಮೇಲೆ ಇದ್ದೇವೆಯೋ ಎಂದು ಅನ್ನಿಸುತ್ತದೆ. ನಿಜವಾಗಿಯೂ ಜಮೀನು ಇಲ್ಲ ಎಂದು ಹೇಳಿದರೆ ಅದಕ್ಕೆ ಏನನ್ನ ಬೇಕು !

Sri KADIDAL MANJAPPA.—What is the relevancy of transfer and partition with regard to this legislation? I can understand the landlord being prevented from evicting his tenant. But when the law permits an individual to alienate his land, how can we prevent?

Sri C. J. MUCKANNAPPA.—Transfers are taking place after this Bill came into existence. It is after the introduction of this Bill that there is not an inch of land left for distribution. ನಮಗಿರತಕ್ಕಂಥ ಜಮೀನನ್ನು ನಾವು ಮಾರಾಟ ಮಾಡುತ್ತಿದ್ದೇವೆಂದು ಒಬ್ಬ ಮಾನ್ಯ ಸದಸ್ಯರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅದಕ್ಕೋಸ್ಕರ ನಾನು ಬಹಳ ವಿನಯದಿಂದ ಸರಕಾರಕ್ಕೆ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಮಂತ್ರಿಮಂಡಲವು ಇಂದೇ ಸಾಯಂಕಾಲದ ವರೆಗೆ ಆಗಲಿ, ರಾತ್ರಿಹನ್ನೊಂದು ಗಂಟೆಯವರೆಗೆ ಆದರೂ ಕುಳಿತು ಸಭೆಮಾಡಿ ಒಂದು ಆರ್ಡರ್ ಹೊರಡಿಸಬೇಕು. ಜಮೀನು ಮಾಲೀಕರು ಇಂದಿನಿಂದ ಇನ್ನು ಮುಂದೆ ಜಮೀನು ಮಾರಾಟಮಾಡುವುದಕ್ಕೆ ಅಡ್ಡಿಮಾಡಬೇಕು. ಈ ಮಸೂದೆಯನ್ನು ಅತಿ ಶೀಘ್ರವಾಗಿ ಕಾನೂನು ಕಡತಕ್ಕೆ ಏರಿಸುವಹಾಗೆ ನಿಮಗೆ ದೇವರು ಶಕ್ತಿ ಕೊಡಲೆಂದು ಹಾರೈಸಿ ನನ್ನ ಭಾಷಣ ಮುಗಿಸುತ್ತೇನೆ.

*ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಈಗ ಸಭೆಯ ಮುಂದೆ ಚರ್ಚೆಗೆ ಬಂದಿರುವ ಈ ಭೂಸುಧಾರಣೆಯ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಹೀಗೆ ಸ್ವಾಗತಿಸುತ್ತಾ, ನಿನ್ನೆಯಿಂದ ಇಂದಿನವರೆಗೆ ಮಾತನಾಡಿದಂಥ ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಮುಕ್ಕಣ್ಣಪ್ಪನವರ ವಾದದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಿನ್ನೆಯ ದಿವಸ ಮಾತನಾಡುತ್ತಾ ಶ್ರೀಮಾನ್ ಮುಕ್ಕಣ್ಣಪ್ಪನವರು ಜಮೀನುದಾರರು ಏನೇನು ಅನ್ಯಾಯಮಾಡಿದ್ದಾರೆ, ಸರಕಾರದವರು ಎಲ್ಲರನ್ನೂ ಬಟ್ಟು ಮಾರಿಯ ಕಣ್ಣು ಹೋತನಮೇಲೆ ಎಂಬಂತೆ ಮಾಡಿದ್ದಾರೆಂದು ಏನು ಉಗ್ರವಾಗಿ ಟೀಕೆ ಮಾಡಿದರೋ, ಅವರ ಇಂದಿನ ಭಾಷಣ ಕೇಳಿದರೆ ಬಹುಶಃ ನಿನ್ನೆ ರಾತ್ರಿ ಅವರಿಗೆ ಜ್ಞಾನೋದಯವಾಗಿರಬೇಕು ಎಂದು ಅನ್ನಿಸುತ್ತದೆ. ಅವರು ನಿನ್ನೆ ಹೇಳಿದ್ದಕ್ಕೂ ಇಂದು ಮಾತನಾಡಿದ್ದಕ್ಕೂ ಹೊಂದಾಣಿಕೆಯಿಲ್ಲದೆ ಒಂದಕ್ಕೊಂದು ವಿರೋಧವಾಗಿರತ್ತದೆ. ಬಹುಶಃ ದೇಶದ ಜನತೆ ಅಂಥ ಧೋರಣೆಯನ್ನು ಒಪ್ಪುವುದಿಲ್ಲ ಎಂದು ಅವರಿಗೆ ತಿಳಿದಿರಬಹುದು. ಈ ದಿನ ಕೇರಳದಲ್ಲಿ ಕಮ್ಯೂನಿಸ್ಟರು ಮಾಡಿದ್ದನ್ನು ಮೀರಿಸುವಂತೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅವರು ಮಾತನಾಡಿದ್ದಾರೆ. ಜಮೀನುದಾರರು ಏನೋ ಮಾಡಿ ಜನರ ತಲೆ ಹೊಡೆದು ಜಮೀನು ಸಂಪಾದನೆಮಾಡಿ ತಮ್ಮ ಕೈಮುಷ್ಟಿಯಲ್ಲಿಟ್ಟುಕೊಂಡಿದ್ದಾರೆ, ಜಮೀನು ಇಲ್ಲದೇ ಇರತಕ್ಕಂಥ ರೈತರಿಗೆ ಜಮೀನು ಕೊಡುವುದಕ್ಕೆ ತಾತ್ಸಾರಮಾಡುತ್ತಿದ್ದಾರೆ, ಮತ್ತು ಅಸಮರ್ಥರಾಗಿದ್ದಾರೆ, ಇವರೆಲ್ಲ ಪಟ್ಟಭದ್ರ ಹಿತಗಳನ್ನು ರಕ್ಷಣೆಮಾಡುವುದರಲ್ಲಿ ತೊಡಗಿದ್ದಾರೆ ಎಂದು ಅವರು ಭಾಷಣ ಮಾಡಿದರು. ಅವರು ನಿನ್ನೆ ಮಾಡಿದ ಭಾಷಣದ ಧಾಟಿ ಇವತ್ತಿನ ಅವರ ಭಾಷಣಕ್ಕೆ ಸರಿಹೋಗುವುದಿಲ್ಲ.

ಈ ಭೂ ಸುಧಾರಣೆಯ ವಿಚಾರ ಬಹಳ ಜಟಿಲವಾದದ್ದು. ಬಹಳ ಸಾರಿ ಇಲ್ಲಿ ಚರ್ಚೆಯಾಗಿದೆ. ದೇಶದಾದ್ಯಂತ ಪ್ರಜಾಪ್ರತಿನಿಧಿಗಳು ಮತ್ತು ಹೆಚ್ಚಾಗಿ ತಿಳಿದಂಥವರು, ಅನುಭವಿಗಳು ಎಲ್ಲರೂ ಕೂಡ ಈ ವಿಚಾರವನ್ನು ಚರ್ಚೆಮಾಡಿದ್ದಾರೆ. ಚರ್ಚೆಮಾಡಿ ತಮಗೆ ಈ ಸಂದರ್ಭದಲ್ಲಿ ಯಾವುದು ಸರಿ ಎನ್ನುವುದನ್ನು ಬಹಳ ತಿಳಿದಂಥವರು ಬರೆದಿಟ್ಟಿದ್ದಾರೆ. ಇದೆಲ್ಲವನ್ನೂ ಕ್ರೋಡೀಕರಿಸಿ ನ್ಯಾಷನಲ್ ಪ್ಲಾನಿಂಗ್ ಕಮೀಷನ್ನಿನವರು ತಮ್ಮ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಉಲ್ಲೇಖಿಸಿದ್ದಾರೆ. ಸರ್ಕಾರದವರು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ನಿಯಮಗಳನ್ನು, ನೀತಿಯನ್ನು ಸೂಚಿಸಿದ್ದಾರೋ ಆ ನೀತಿಯ ಆಧಾರದ ಮೇಲೆ ಈ ಮಸೂದೆಯನ್ನು ರಚಿಸಿ ಸಭೆಯ ಮುಂದೆ ಇಟ್ಟಿದ್ದಾರೆ. ಈ ಮಸೂದೆಯಲ್ಲಿರತಕ್ಕ ಎಲ್ಲಾ ನಿಯಮಗಳೂ ಕೂಡ ಈ ಕಾಲಕ್ಕೆ ಒಪ್ಪತಕ್ಕವೇ ಆಗಿವೆ. ಆದರೆ ಇದರ ಸ್ವರೂಪವನ್ನು ನಮ್ಮ ಮೈಸೂರು ದೇಶದಲ್ಲಿರತಕ್ಕ ಪರಿಸ್ಥಿತಿಗೆ ಹೊಂದಿಸಿಕೊಳ್ಳುವಂತೆ ನಾವು ಅಲ್ಲಲ್ಲೇ ಕೆಲವು ಮಾರ್ಪಾಡನ್ನು ಮಾಡಬೇಕಾದದ್ದು ಅತ್ಯಗತ್ಯವಾಗಿದೆ. ಈ ಅಗತ್ಯವಾದ ಮಾರ್ಪಾಡುಗಳನ್ನು ಮಾಡಿ ಈ ಮಸೂದೆಯನ್ನು ಕಾನೂನಿನ ಕಡತಕ್ಕೆ ಏರಿಸುವುದರಿಂದ ಜನತೆಗೆ ಅನುಕೂಲವಾಗುತ್ತದೆ ಎಂದು ನಾನಾದರೂ ಭಾವನೆ ಮಾಡಿಕೊಂಡಿದ್ದೇನೆ. ಪಂಚವಾರ್ಷಿಕ ಯೋಜನೆಯ ನ್ಯಾಷನಲ್ ಪ್ಲಾನಿಂಗ್ ಕಮೀಷನ್ನಿನವರು ನಿರ್ಧಾರವಾಗಿ ನಾವು ಇಂತಿಷ್ಟೇ ಜಮೀನಿನ ಪರಿಮಿತಿಮಾಡಬೇಕು ಅಥವಾ ಇಷ್ಟೇ ಕುಟುಂಬ ಹಿಡುವಳಿ ಮಾಡಬೇಕು ಅಥವಾ ಇಂತಿಷ್ಟೇ ಜಮೀನು ಬೇಸಿಕ್ ಹೋಲ್ಡಿಂಗ್ ಆಗಿರಬೇಕು ಎಂದು ಏನೂ ಹೇಳಿಲ್ಲ. ಅವರು ನಮ್ಮ ದೇಶದಲ್ಲಿರತಕ್ಕ ಪರಿಸ್ಥಿತಿಯನ್ನನುಸರಿಸಿ ಅದಕ್ಕೆ ತಕ್ಕಂತೆ ನಾವು ಮಾರ್ಪಾಡು ಮಾಡಿಕೊಳ್ಳಬಹುದು ಎಂದು ಹೇಳಿದ್ದಾರೆ. ಈ ಮಸೂದೆಯನ್ನು ತರುವಾಗ ಅಲ್ಲಲ್ಲಿ ಕೆಲವು ಮಾರ್ಪಾಡನ್ನು ಸರ್ಕಾರದವರೇ ಮಾಡಿಕೊಳ್ಳಬೇಕಾಗಿದ್ದುದು ಅತ್ಯಗತ್ಯವಾಗಿತ್ತು ಎಂದು ನಾನಾದರೂ ಭಾವನೆಮಾಡುತ್ತೇನೆ. 1952ನೆಯ ಗೇಣಿ ಮಸೂದೆಗೆ ಹಿಂದೆ ಒಮ್ಮೆ ಒಂದು ತಿದ್ದುಪಡಿಯನ್ನು ಸರ್ಕಾರದವರೇ ಸೂಚಿಸಿದ್ದರು. ಆ ಸಂದರ್ಭದಲ್ಲಿ ನಾಲ್ಕೈದು ದಿನ ಚರ್ಚೆಯಾಗಿ ಆಗ ಆ ಮಸೂದೆಯನ್ನು ಮಂಡಿಸಿದವರು ಈಗ ರೆವಿನ್ಯೂ ಮಂತ್ರಿಗಳಾಗಿರುವ ಮಂಜಪ್ಪನವರು ಯಾವ ಕಾರಣದಿಂದಲೋ ಆ ಮಸೂದೆಯನ್ನು ಮುಂದುವರಿಸಲಿಲ್ಲ.

Sri KADIDAL MANJAPPA.—On account of States re-organisation coming in.

ಶ್ರೀ ಕೆ. ಪುಟ್ಟಸ್ವಾಮಿ.—ತಾವು ಹೇಳತಕ್ಕ ವಿವರಣೆಯನ್ನು ನಾನಾದರೂ ಒಪ್ಪುವುದಿಲ್ಲ. ಆ ವಿಚಾರದಲ್ಲಿ ಬಹಳ ತೀವ್ರವಾದ ಭಿನ್ನಾಭಿಪ್ರಾಯ ಇದ್ದದ್ದರಿಂದ ಆ ಮಸೂದೆಯನ್ನು ಮುಂದುವರಿಸಲಿಲ್ಲ ಎಂದು ಅನಿಸುತ್ತದೆ. ಅದಕ್ಕೆ ಸಾಕಾದಷ್ಟು ವಾತಾವರಣ ಇಲ್ಲ ಕಲ್ಪನೆ ಆಗಿರಲಿಲ್ಲ.

ಶ್ರೀ ಕೆ. ವಿ. ರೇವಣ್ಣಸಿದ್ದಪ್ಪ.—ಯಾರಲ್ಲಿ ಸ್ವಾಮಿ ಭಿನ್ನಾಭಿಪ್ರಾಯ ?

ಶ್ರೀ ಕೆ. ಪುಟ್ಟಸ್ವಾಮಿ.—ಜನರಲ್ಲಿ, ಜನರ ಪ್ರತಿನಿಧಿಗಳಲ್ಲಿ ಇತ್ತು. ನನ್ನಲ್ಲಿ, ನನ್ನ ಸಹೋದ್ಯೋಗಿಗಳಲ್ಲೂ ಇತ್ತು. ಭಿನ್ನಾಭಿಪ್ರಾಯ ಇದೆ ಎಂದಾಕ್ಷಣಕ್ಕೇ ಅದು ದೋಷವಲ್ಲ. ಈ ಮಸೂದೆಯ ವಿಚಾರದಲ್ಲಿ ನಮ್ಮ ಪಕ್ಷದಲ್ಲಿ ಭಿನ್ನಾಭಿಪ್ರಾಯವಿದ್ದರೆ ಅದು ಒಂದು ಪಕ್ಷದಲ್ಲಿರತಕ್ಕ ಪ್ರಗತಿಯ ಲಕ್ಷಣದ ಮತ್ತು ಆಲೋಚನೆ ಮಾಡತಕ್ಕ ಶಕ್ತಿಯ ಗುರುತಾಗಿದೆಯೇ ವಿನಾ ಅದು ಪ್ರಗತಿಗೆ ವಿರುದ್ಧವಾದದ್ದು ಎಂದು ಮಾನ್ಯ ಸ್ನೇಹಿತರು ಯಾರಾದರೂ ಭಾವನೆ ಮಾಡಿದರೆ ಅದು ತಪ್ಪು ಎಂದು ವಿನಯಪೂರ್ವಕವಾಗಿ ಹೇಳುತ್ತೇನೆ. ಆಗ ಆ ಮಸೂದೆಯಲ್ಲಿ ಸ್ಟ್ಯಾಂಡರ್ಡ್ ಏಕರ್ ಎನ್ನುವ ಒಂದು ಸೂಚನೆಯನ್ನು ಇಟ್ಟಿದ್ದರು. ಅದಕ್ಕೆ ಒಂದು ಅರ್ಥವನ್ನು ಕಲ್ಪನೆಮಾಡಿ ಅದರ ಮೇಲೆ ಭೂಮಿ ನಿರ್ಧಾರವಾಗಬೇಕೆಂದು ಇತ್ತು. ಈಗಲಾದರೂ ನಾನು ಹೇಳುವುದು ಈ ಬೇಸಿಕ್ ಹೋಲ್ಡಿಂಗ್ ಎನ್ನುವುದಕ್ಕೆ ಬದಲು ಸ್ಟ್ಯಾಂಡರ್ಡ್ ಏಕರ್ ಎನ್ನುವುದನ್ನು ಈ ಮಸೂದೆಯಲ್ಲಿ ಅಡಕಮಾಡಿದರೆ ಬಹುಶಃ ನಮ್ಮ ಮಸೂದೆ ಹೆಚ್ಚು ಸಮರ್ಪಕವಾಗಬಹುದು ಎಂದು ನನಗಾದರೂ ಅನಿಸುತ್ತದೆ. ಸ್ವಾಮಿ, ಇಲ್ಲಿರತಕ್ಕ ನನ್ನ ಸನ್ಮಾನ್ಯ ಸಹೋದರರು ಎಲ್ಲರೂ ಗ್ರಾಮಾಂತರದಿಂದ ಬಂದವರು, ಎಲ್ಲರಿಗೂ ಅಲ್ಪ ಸ್ವಲ್ಪ ವ್ಯವಸಾಯದ ಅನುಭವ ಇದ್ದೇ ಇದೆ. ಯಾರಿಗಾದರೂ ಇಲ್ಲಿ ವ್ಯವಸಾಯದ ಅನುಭವವಿಲ್ಲ ಎಂದರೆ ಅದು ನಿಜವಾದ ಮಾತಲ್ಲ. ಈ ದೇಶದಲ್ಲಿ ಶೇಕಡ 75 ಭಾಗ ವ್ಯವಸಾಯದ ಜನರೇ ಇರುವಾಗ ಎಲ್ಲರಿಗೂ ವ್ಯಾಪಾರ ಮಾಡುವವರಿಗೂ ಕೂಡ ವ್ಯವಸಾಯದ ಅನುಭವ ಇದ್ದೇ ಇದೆ. ಭೂಮಿ ಒಂದೇ ತರಹವಾಗಿಲ್ಲ. ಒಂದು ಸರ್ವೇ ನಂಬರ್‌ನಲ್ಲಿ ನಾಲ್ಕಾರು ತರಹ ಭೂಮಿ ಇದೆ. ಮೂರು ಅಡಿ ಅಂತರದಲ್ಲಿ ಇವತ್ತು ಇರುವ ಹಾಗೆ ಆ ಜಮೀನಿನ ಬೆಲೆ ಅರ್ಧಕ್ಕೆ ಅರ್ಧ ಹೆಚ್ಚಾಗಿದೆ. ಅದರ ಬೆಳೆಯೂ ಹಾಗೆಯೇ ಇರುತ್ತದೆ. ಅಂತಹ ಸಂದರ್ಭದಲ್ಲಿ ಇದನ್ನು ನಿರ್ಧರಮಾಡುವಾಗ ನಾವು ಒಂದು ಸ್ಟ್ಯಾಂಡರ್ಡ್ ಏಕರ್ ಎಂದರೆ ಯಾವುದಾದರೂ ಒಂದು ಪ್ರಮಾಣವನ್ನು ಗೊತ್ತುಮಾಡಿ, ಈಗ ನಮ್ಮಲ್ಲಿ ಎಕರೆ, ಗುಂಟೆ ಎಂದರೆ ಅರ್ಥವಾಗುವ ಹಾಗೆ, ಬೇರೆ ರೀತಿಯಲ್ಲಿ ಹೇಳಿದರೆ ಅರ್ಥವಾಗುವುದಿಲ್ಲ. ಬೇಸಿಕ್ ಹೋಲ್ಡಿಂಗ್ ಆಗಲೀ, ಫ್ಯಾಮಿಲಿ ಹೋಲ್ಡಿಂಗ್ ಅನ್ನುವುದಾಗಲೀ, ಏನೂ ತಿಳಿಯದಂಥ ರೈತನಿಗೆ ಸ್ಟ್ಯಾಂಡರ್ಡ್ ಏಕರ , ಬೇಸಿಕ್ ಹೋಲ್ಡಿಂಗ್, ಫ್ಯಾಮಿಲಿ ಹೋಲ್ಡಿಂಗ್ ಎಂಬುದನ್ನು ವಿವರಿಸಬೇಕಾದರೆ ಬಹಳ ಕಷ್ಟವಾಗುತ್ತದೆ. ಸ್ಟ್ಯಾಂಡರ್ಡ್ ಏಕರ್ ಎಂದರೆ ಹೀಗ ಎಂದು ಹೇಳಬೇಕಾಗಿದೆ. ಬಹುಶಃ ಬಹಳ ಉತ್ಕೃಷ್ಟವಾದ ಭೂಮಿ ವ್ಯವಸಾಯಕ್ಕೆ ಲಾಭದಾಯಕವಾದಂಥ ಭೂಮಿ ಎಂದು ನಾವು ಭಾವನೆ ಮಾಡಿಕೊಂಡಿರುವುದು ಎಲ್ಲಿ ಅಷ್ಯೂರ್ಡ್ ವಾಟರ್ ಸಪ್ಲೈ, ಯಾವತ್ತಿಗೂ ಸದಾಕಾಲದಲ್ಲಿ ನೀರು ಹರಿಯುವಂಥ ನಾಲಾ ಮೂಲಕ ನೀರು ಒದಗುತ್ತದೆಯೋ ಆ ಭೂಮಿಯನ್ನು ನಾವು ಒಂದು ಆಧಾರವಾಗಿಟ್ಟುಕೊಂಡು ಅದರ ಮೂಲಕ ಅದಕ್ಕೆ ಸಮಾನವಾದ ಜಮೀನು ಯಾವುದು ಎಂದು ನಿರ್ಧರ ಮಾಡಬೇಕು. ಅಷ್ಯೂರ್ಡ್ ವಾಟರ್ ಸಪ್ಲೈ ಇರತಕ್ಕ ಒಂದು ಎಕರೆ ಜಮೀನು, ಕೆರೆ ಕೆಳಗೆ ಕೆರೆಯ ನೀರಿನಿಂದ ವ್ಯವಸಾಯವಾಗತಕ್ಕ ಜಮೀನು ಒಂದು ಒಂದೂವರೆ, ಒಂದೂಮುಕ್ಕಾಲು, ಎರಡು ಎಕರೆಗೆ ಯಾವುದು ಸಮಾನ ಎಂದು ತೀರ್ಮಾನಮಾಡಿದರೆ, ಹಾಗೆಯೇ ತರೀ, ಖುಷ್ಕಿ, ಬಾಗಾಯ್ತು ಎಲ್ಲಕ್ಕೂ ನಿರ್ಧರಮಾಡಬೇಕಾಗುತ್ತದೆ. ಹೀಗೆ ನಿರ್ಧಾರ ಮಾಡಿದ ಕೂಡಲೇ ರೈತನಿಗೆ ತನ್ನ ಹಿಡುವಳಿಯಲ್ಲಿ ಎಷ್ಟು ಎಕರೆ ಜಮೀನು ಇದೆ, ಅದರಲ್ಲಿ ತನಗೆ ಎಷ್ಟು ಜಮೀನು ಉಳಿಯುತ್ತದೆ, ಎಷ್ಟು ತಾನು ಕೊಡಬೇಕಾಗುತ್ತದೆ ಅಥವಾ ಗುತ್ತಿಗೆಗೆ ಕೊಟ್ಟಿದ್ದರೆ ಎಷ್ಟು ತಾನು ಬಿಡಿಸಿಕೊಳ್ಳಬಹುದು. ನಾಳೆ ಏನಾದರೂ ಗುತ್ತಿಗೆಗೆ ಕೊಡಬೇಕಾದರೆ ಎಷ್ಟು ಪ್ರಮಾಣದಲ್ಲಿ ಜಮೀನು ಇದ್ದರೆ ಗುತ್ತಿಗೆಗೆ ಕೊಡಬಹುದು ಎಂಬುದು ನಿರ್ಧರವಾಗುತ್ತದೆ. ಇದಕ್ಕೆ ಇಲ್ಲಿ ಲ್ಯಾಂಡ್ ಕಮೀಷನ್ ಎನ್ನುವ ಒಂದು ಸಂಸ್ಥೆಯನ್ನು ಏರ್ಪಾಡು ಮಾಡಿ ಅದರಲ್ಲಿ ಹೈಕೋರ್ಟ್ ನ್ಯಾಯಾಧೀಶರು ಒಬ್ಬರು, ವ್ಯವಸಾಯದಲ್ಲಿ ತಿಳಿದಂಥ ಮತ್ತು ಈ ವಿಚಾರಗಳಲ್ಲಿ ಅನುಭವವಿರತಕ್ಕ ಇಬ್ಬರು ಸರ್ಕಾರಿ ಅಧಿಕಾರಿಗಳು ಇಬ್ಬರು, ಒಬ್ಬರು ವ್ಯವಸಾಯದಲ್ಲಿ ಮಾಹಿತಿ ಇರುವವರು, ಇನ್ನೊಬ್ಬರು ರೆವಿನ್ಯೂವಿನಲ್ಲಿ ಮಾಹಿತಿ ಇರುವವರು—ಈ ಐದು ಜನ ದೇಶದಲ್ಲಿ ಪ್ರತಿಯೊಂದು ಲೋಕಲ್ ಏರಿಯಾದೊಳಗೂ ನಿರ್ಧರವಾದ ಸ್ಥಳದಲ್ಲಿ ಎಷ್ಟು ಉತ್ಪನ್ನ ಬರುತ್ತದೆ ಅಥವಾ ಎಷ್ಟು ವಿಸ್ತೀರ್ಣದ ಜಮೀನು ಬೇಸಿಕ್ ಹೋಲ್ಡಿಂಗ್ ಆಗುತ್ತದೆ. ಎಷ್ಟು ವಿಸ್ತೀರ್ಣದ ಜಮೀನು ಫ್ಯಾಮಿಲಿ ಹೋಲ್ಡಿಂಗ್ ಆಗುತ್ತದೆ ಎಂದು ನಿರ್ಧಾರಮಾಡಬೇಕೆಂದು ಇದೆ.

ಈ ತತ್ವವನ್ನು ನಾವು ಒಪ್ಪಿಕೊಂಡರೆ ಲ್ಯಾಂಡ್ ಕಮಿಷನ್ ಎಂದಿಗೆ ಇಷ್ಟು ಕಾರ್ಯವನ್ನು ಮುಗಿಸಬಹುದು. ಇದಕ್ಕೆ ಅನೇಕ ವರ್ಷಗಳು ಹಿಡಿಯಬಹುದೆಂದು ನನಗಾದರೂ ಅನ್ನಿಸುತ್ತದೆ. ಇವರ ಕಾರ್ಯ ಮುಗಿಯುವವರೆಗೂ ರೈತರಿಗೆ ನಿಶ್ಚಿತವಾದ ಪರಿಸ್ಥಿತಿ ಇರುವುದಿಲ್ಲ. ಎಲ್ಲ ಅನಿಶ್ಚಿತವಾದ ಪರಿಸ್ಥಿತಿ ಇರುತ್ತದೆ. ಆದುದರಿಂದ ಇದರಲ್ಲಿ ಅತ್ಯಗತ್ಯವಾಗಿಮಾಡಬೇಕಾದಂಥ ಕೆಲಸಗಳಿಗೆಮಾತ್ರ ಲ್ಯಾಂಡ್‌ಕಮಿಷನ್ ಇಟ್ಟುಕೊಂಡು basic holding, family holding, ceiling limit ಮುಂತಾದುವುಗಳಿಗೆ ಎಕರೆಯನ್ನು ಅಳತೆಯ ಪ್ರಮಾಣವಾಗಿಟ್ಟುಕೊಂಡು ನಾವು ಮುಂದುವರಿದಿದ್ದೇ ಆದರೆ ರೈತರಿಗೆ ಈ ಮಸೂದೆಯಿಂದ ಕೂಡಲೇ ಏನು ಪರಿಣಾಮವಾಗಬಹುದೆನ್ನುವುದು ಅರ್ಥವಾಗುತ್ತದೆ; ಮತ್ತು ಲ್ಯಾಂಡ್ ಕಮಿಷನ್ ಅವರು ನಾಳೆಯ ದಿವಸ ಮಾಡುವಂಥ ತೀರ್ಮಾನ ಯಾವ ರೀತಿ ಬರುತ್ತದೆಯೋ ಏನೋ ಎನ್ನುವ ಭಯ ಅವರಿಗೆ ತಪ್ಪುತ್ತದೆ.

ಸ್ವಾಮಿ ಜಮೀನ್ದಾರರು ಎಂದು ಇಲ್ಲಿ ಹೇಳುವಾಗ ನಾನು ಮೂರು ತರಹ ಜಮೀನ್ದಾರರನ್ನು ಗಮನದಲ್ಲಿಟ್ಟುಕೊಂಡು ಹೇಳುತ್ತಿದ್ದೇನೆ. ಕೆಲವರು ಜಮೀನನ್ನು ಖುದ್ದು ಸಾಗುವಳಿ ಮಾಡತಕ್ಕ ರೈತರು; ಇನ್ನೂ ಕೆಲವರು ಕೆಲವು ಜಮೀನನ್ನು ಗುತ್ತಿಗೆಗೆ ಕೊಟ್ಟು ಕೆಲವು ಜಮೀನನ್ನು ತಾವೇ ವ್ಯವಸಾಯ ಮಾಡತಕ್ಕವರು; ಮತ್ತೆ ಕೆಲವರು ಎಲ್ಲ ಜಮೀನನ್ನೂ ಗುತ್ತಿಗೆಗೋ ವಾರಕ್ಕೋ ಕೊಟ್ಟು ತಾವು ದೂರವಾಗಿ ಬೇರೆ ಉದ್ಯಮವನ್ನು ಕೈಗೊಂಡಿರತಕ್ಕವರು. ಇವರೆಲ್ಲರಿಗೂ ಒಂದೇ ರೀತಿಯ ಕಾನೂನನ್ನು ಮಾಡುತ್ತೇವೆಂದರೆ ಈ ಭೂಸುಧಾರಣೆಯನ್ನು ಯಾವ ಉದ್ದೇಶದಿಂದ ಕೈಗೊಂಡಿದ್ದೇವೆನ್ನುವುದನ್ನೇ ನಾವು ಮರೆತಂತಾಗುತ್ತದೆ. ದೇಶದಲ್ಲಿರತಕ್ಕ ಜಮೀನನ್ನು ವ್ಯವಸಾಯೋದ್ಯಮದಲ್ಲಿ ತೊಡಗಿರುವವರೆಲ್ಲರಿಗೂ ಕೂಡ ಸಮಾನವಾಗಿ ಹಂಚಿಕೊಡಬೇಕೆಂಬ ಉದ್ದೇಶವಾದರೂ ಸರ್ಕಾರಕ್ಕೆ ಇದೆಯೇ ಎಂದು ನನಗಾದರೂ ನಂಬಿಕೆ ಇಲ್ಲ. ಇದರ ಮೂಲ ಉದ್ದೇಶ ಕಷ್ಟಪಟ್ಟು ದುಡಿಯುವ ರೈತ ಶೋಷಣೆಗೆ ಒಳಗಾಗಬಾರದು ಮತ್ತು ಅವನು ಪಟ್ಟ ಶ್ರಮಕ್ಕೆ ತಕ್ಕ ಪ್ರತಿಫಲ ಅವನಿಗೆ ದೊರೆಯ

(ಶ್ರೀ ಕೆ. ಪುಟ್ಟಸ್ವಾಮಿ)

ಬೇಕು, ಕಾಲಾನುಗುಣ್ಯವಾಗಿ ಅವನು ಜಮೀನಿನ ಮಾಲೀಕನಾಗುವಂಥ ಅವಕಾಶವನ್ನು ನಾವು ಮಾಡಿ ಕೊಡಬೇಕು, ಇದು ಉದ್ದೇಶವಾಗಿದೆ. ಇದು ನಮ್ಮ ಉದ್ದೇಶವಾಗಿರುವಾಗ ಈ ಮೂರು ದರ್ಜೆಯ ಜನರಿದ್ದಾರಲ್ಲ ಅವರಿಗೆ, ಸಂಪೂರ್ಣವಾಗಿ ವ್ಯವಸಾಯ ಮಾಡುವವರು, ಸ್ವಲ್ಪ ಜಮೀನನ್ನು ತಾವೇ ವ್ಯವಸಾಯಮಾಡಿ ಇನ್ನು ಸ್ವಲ್ಪ ಜಮೀನನ್ನು ಗುತ್ತಿಗೆಗೆ ಕೊಟ್ಟಿರುವವರು, ಸಂಪೂರ್ಣವಾಗಿ ಜಮೀನನ್ನು ಗುತ್ತಿಗೆಗೆ ಕೊಟ್ಟಿರುವ ಜನರು (absentee landlords) ಇವರೆಲ್ಲರನ್ನೂ ಒಂದೇ ಅಳತೆಗೋಲಿನಿಂದ ಅಳತೆಮಾಡಿ, ಎಲ್ಲರಿಗೂ ಅನ್ವಯಿಸುವಂತೆ ಒಂದೇ ಕಾನೂನನ್ನು ನಾವು ರಚಿಸಿದ್ದೇ ಆದರೆ ನಾವು ನಿಜವಾಗಿಯೂ ಕೂಡ ಖುದ್ದು ವ್ಯವಸಾಯ ಮಾಡತಕ್ಕ ರೈತರಿಗೆ ಅನ್ಯಾಯ ಮಾಡಿದಂತಾಗುತ್ತದೆಂದು ನನ್ನ ಭಾವನೆ.

1952ರ ಗೇಣಿ ಶಾಸನ ಯಾವ ರೀತಿಯಲ್ಲಿ ಈ ದೇಶದಲ್ಲ ಜಾರಿಯಲ್ಲಿದೆ ಎನ್ನುವುದನ್ನು ನೋಡಿದರೆ ಈ ಶಾಸನವನ್ನು ಮಾಡುವಾಗ ನಾವು ಎಷ್ಟು ಎಚ್ಚರಿಕೆಯಿಂದ ಇರಬೇಕಾಗುತ್ತದೆಂದು ಗೊತ್ತಾಗುತ್ತದೆ. 1952ರ ಗೇಣಿ ಶಾಸನ ಕೇವಲ ಶೇಕಡ ಐದು ಭಾಗ ಗೇಣಿಯಲ್ಲಿರತಕ್ಕ ಜಮೀನಿನ ರೈತರಿಗೆ ಕೂಡ ಪ್ರಯೋಜನಕಾರಿಯಾಗಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಇನ್ನೂ ಅನೇಕ ತಾಲ್ಲೂಕುಗಳಲ್ಲಿ, ಜಿಲ್ಲೆಗಳಲ್ಲಿ, ಇಂಥ ಒಂದು ಕಾನೂನಿದೆ ಎನ್ನುವುದು ಕೂಡ ಗೊತ್ತಿಲ್ಲ. ಆ ಕಾನೂನಿನ ಅರಿವು ಜನರಿಗೆ ಆಗಿಲ್ಲ. ಕೆಲವು ಕಡೆ ಕಾನೂನಿನ ಅರಿವು ಆಗಿದ್ದರೂ ಕೂಡ ಸ್ಥಳೀಯ ಕಾರಣಗಳಿಂದ, ಕಾನೂನನ್ನು ಜಾರಿಗೆ ತರುವುದಕ್ಕೆ ನೇಮಿಸಿರುವ ಅಧಿಕಾರಿಗಳ ಮನೋಭಾವನೆಯಿಂದ, ಆ ಕಾನೂನಿನಿಂದ ಏನು ಪ್ರತಿಫಲ ರೈತನಿಗೆ, ಗೇಣಿದಾರನಿಗೆ ದೊರೆಯಬೇಕೋ ಅದು ಇವೊತ್ತಿನವರೆಗೂ ದೊರೆತಿಲ್ಲ. ಆ ಕಾನೂನಿನ ಮೂಲಕ ರೈತರಿಗೂ ಮತ್ತು ಜಮೀನ್ದಾರರಿಗೂ ವಿವಾದಗಳು ಎಲ್ಲೆಲ್ಲಿ ನಡೆದಿವೆಯೋ ಅಂಥ ಸ್ಥಳಗಳಲ್ಲಿಯೂ ಶೇಕಡ ಐದು ಭಾಗದ ಜನರಿಗೂ ಕೂಡ ಅದರ ಪ್ರತಿಫಲ ಲಭ್ಯವಾಗಿಲ್ಲ. 1952ರ ಗೇಣಿ ಶಾಸನದಲ್ಲಿ ಪರಮಾವಧಿ ಗೇಣಿ ಮೈದಾನದಲ್ಲಿ ಅರ್ಧ ಭಾಗದಷ್ಟಕ್ಕಿಂತ ಮೀರಿರಕೂಡದು ಮತ್ತು ಮಲೆನಾಡಿನಲ್ಲಿ ಮೂರನೆಯ ಒಂದು ಭಾಗಕ್ಕಿಂತ ಮೀರಿರಕೂಡದು ಎಂದು ಇದೆ. ಸರ್ಕಾರದವರು ಅರ್ಧಭಾಗ ಗೇಣಿಗೆ ಮೀರಿರಕೂಡದು ಎನ್ನುವುದನ್ನು ಜಾರಿಗೆ ತರುವುದಕ್ಕೆ, ಎಲ್ಲೆಲ್ಲಿ ಹಿಡುವಳಿ ಗೇಣಿಯಲ್ಲಿದೆಯೋ ಅಲ್ಲಿಯಾದರೂ ಜಾರಿಗೆ ತರುವುದಕ್ಕೆ ಯಾವ ಕರ್ತವ್ಯವನ್ನೂ ಮಾಡಲಿಲ್ಲ. ಏನೋ ತಾನಾಗಿ ಎದ್ದು ಬಂದಂಥ ವಿವಾದದ ಫೈಸಲಾತಿಗೆ ಏರ್ಪಾಡು ಮಾಡಿದರೇ ವಿನಾ ಶೋಷಣೆಗೆ ಒಳಗಾಗಿರತಕ್ಕ ರೈತ, ಜಮೀನ್ದಾರನ ಎದುರಿಗೆ ನಿಲ್ಲಲಾರದ ರೈತ, ಹೆಚ್ಚು ಗೇಣಿಯನು ಕೊಟು ಶೋಷಣೆಗೆ ಒಳಗಾಗಿರುವ ರೈತ, ಇವರಿಗೆ ರಕ್ಷಣೆಯನ್ನು ಕೊಡಬೇಕೆನ್ನುವ ಅಭಿಪ್ರಾಯ ನಡೆಯಲಿಲ್ಲ. ಆದುದರಿಂದ ಎಲ್ಲಿ ಗೇಣಿಯಲ್ಲಿದ್ದಂಥ ರೈತ ತಿಳುವಳಿಕಸ್ತನಾಗಿದ್ದಾನೆ, ಎಲ್ಲಿ ರೈತನಿಗೆ ದುಡ್ಡು ಖರ್ಚುಮಾಡುವ ಶಕ್ತಿ ಇದೆ ಅವನು ಗೇಣಿಕಾನೂನಿನ ಪ್ರತಿಫಲವನ್ನು ಪಡೆಯುವುದಕ್ಕೆ ಪ್ರಯತ್ನಮಾಡುತ್ತಾನೆ. ಒಂದು ವಿವಾದ ಕೋರ್ಟಿಗೆ ಹೋದರೆ ಎರಡು ಮೂರು ವರ್ಷಗಳಾದರೂ ತಹಸೀಲ್ದಾರರ ಕೋರ್ಟಿನಲ್ಲಿ ತೀರ್ಮಾನವಾಗದ ರೈತನಾದವನು ವ್ಯವಸಾಯದ ಕಾಲದಲ್ಲಿಯೂ ಕೂಡ ಜಮೀನಿನಲ್ಲಿ ವ್ಯವಸಾಯ ಮಾಡದೆ ತಾಲ್ಲೂಕು ಕೇಂದ್ರಕ್ಕೆ ತಿರುಗಿ ತಿರುಗಿ ಸುಸ್ತಾದದ್ದೂ ಇದೆ. ಅಂಥ ಸಂದರ್ಭದಲ್ಲಿ ರೈತನಿಗೂ ಮತ್ತು ಜಮೀನ್ದಾರನಿಗೂ ಪೈಪೋಟಿ ಬಂದಾಗ ಯಾವ ಬಡರೈತನಾದರೂ ಜಮೀನ್ದಾರರ ಮೇಲೆ ಪೈಪೋಟಿಗೆ ನಿಲ್ಲುವುದಕ್ಕೆ ಸಾಧ್ಯವಿಲ್ಲ. ಆ ಮೊಕದ್ದಮೆಗೆ ಆಗಬೇಕಾದಂಥ ಖರ್ಚನ್ನು ಒಪಗಿಸಿ ಅದನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಅನೇಕ ವೇಳೆ ಜಮೀನ್ದಾರನಿಗೆ ಗೇಣೀದಾರ ಅಥವಾ ರೈತ ಅನೇಕ ಬಲವತ್ತರವಾದ ಕಾರಣಗಳ ದೆಸೆಯಿಂದ ಶರಣಾಗತನಾಗಬೇಕಾದ ಸನ್ನಿವೇಶಗಳು ಬಂದಿವೆ. ನಾನು ಈ ವಿಚಾರವನ್ನು ಪ್ರಸ್ತಾಪಮಾಡುತ್ತಿರುವುದು ಏಕೆಂದರೆ ಕಾನೂನು ಮಾಡುವುದು ಬಹಳ ಸುಲಭ. ಸರ್ವವ್ಯಾಪಿಯಾದ ಇಂಥ ಕಾನೂನನ್ನು ಜಾರಿಗೆ ತರಬೇಕಾದರೆ ಜಾರಿಗೆ ತರಬೇಕಾದಂಥ ಯಂತ್ರ ಸರಿಯಾಗಿಲ್ಲದೆ ಹೋದರೆ, ಆ ಯಂತ್ರಕ್ಕೆ ಇದರಲ್ಲಿ ಸಾಕಷ್ಟು ಶ್ರದ್ಧೆ ಇಲ್ಲದೆ ಹೋದರೆ, ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಗೇಣೀ ಶಾಸನ 1952ರಲ್ಲಿ ಜಾರಿಗೆ ಬಂದಾಗ ಒಬ್ಬ ಅಸಿಸ್ಟೆಂಟ್ ಕಮಿಷನರ್ ಆದವರು ಈ ಗೇಣೀ ಶಾಸನವನ್ನು ಜನಗಳಿಗೆ ಹೇಳುತ್ತಿದ್ದವರ ವಿಚಾರದಲ್ಲಿ ಏನು ಅಭಿಪ್ರಾಯ ವ್ಯಕ್ತಪಡಿಸಿದರೋ ಅದರಿಂದ ಅವರಿಗೆ ಈ ಕಾನೂನುಗಳ ವಿಚಾರದಲ್ಲಿ ಏನು ಮನಸ್ಸಿದೆ ಎನ್ನುವುದು ಗೊತ್ತಾಗುತ್ತದೆ. ಓಟಿಗಾಗಿ ಈ ಜನ ಆ ಬಡ ಜನರನ್ನು ಎತ್ತಿಕಟ್ಟಿ ಅವರಿಗೆ ಏನೋ ಲಾಭ ಕೊಡಿಸುತ್ತೇವೆಂದು ಓಡಾಡುತ್ತಿದ್ದಾರೆ, ಆದುದರಿಂದ ಇಂಥದ್ದರಲ್ಲಿ ನಾವು ಬಹಳ ಕಟ್ಟುನಿಟ್ಟಾಗಿ ವರ್ತಿಸಬೇಕೆಂದು ರೈತರಿಗೆ ತೊಂದರೆ ಮಾಡಿದಂಥ ನಿದರ್ಶನಗಳಿವೆ. ಬಹುಶಃ ಈ ಶಾಸನವನ್ನೂ ನಾವು ಕಡತಕ್ಕೆ ಏರಿಸಿದಮೇಲೆ ನಮ್ಮ ಅಧಿಕಾರಿಗಳಿಗೆ ಸ್ಪೆಷಲ್ ಟ್ರೈನಿಂಗ್ ಕೊಡಬೇಕಾಗುತ್ತದೆ; ಇದರ ಉದ್ದೇಶವೇನು ಯಾವ ರೀತಿ ಜಾರಿಗೆ ತರಬೇಕು ಎಂದು ಅವರಿಗೆ ನಾವು ಬೋಧಿಸದ ಹೊರತು, ಈ ಕೆಲಸಕ್ಕೆ ತಕ್ಕಂಥ ಅಧಿಕಾರಿಗಳನ್ನು ನಾವು ನೇಮಿಸದ ಹೊರತು ನಾವು ಏನೇ ಕಾನೂನನ್ನು ಮಾಡಿದರೂ ಕೂಡ ಅದು ನಿಷ್ಫಲವಾಗುತ್ತದೆ. ಈಗ 1952ರ ಗೇಣಿ ಶಾಸನವನ್ನೇ ಇನ್ನೂ ಜಾರಿಗೆ ತರದೆ ಇರುವಾಗ ಇಂಥ far reaching measures ತರುವುದಕ್ಕೆ ಪ್ರಯತ್ನ ಮಾಡುವುದರಿಂದ, ನೀರಿಳಿಯದ ಗಂಟಲಿಗೆ ಕಡುಬು ತುರುಕಿದ ಹಾಗಾಗುತ್ತದೆ. ಆದುದರಿಂದ ಈ ರೀತಿ ಇದನ್ನು ಮಾಡಬಾರದೆನ್ನುವ ದೃಷ್ಟಿಯಿಂದ ನಾನು ಹೇಳಿದ್ದೇನೆ. ಇದನ್ನು ಮಾಡಬೇಕಾದರೆ ಎಷ್ಟು ಎಚ್ಚರಿಕೆಯಿಂದ ನಾವು ಮಾಡಬೇಕು ಎನ್ನುವುದಕಾಗಿ ನಾನು ಇಷ್ಟೆಲ್ಲ ಹೇಳುತ್ತಿದ್ದೇನೆ.

4-30 P.M.

ಈ ಮಸೂದೆಯನ್ನು ನಾನು ಕೆಲವಾರು ಬಾರಿ ಓದಿದ್ದೇನೆ. ಓದುತ್ತ ಓದುತ್ತ ಹೋದಹಾಗೆಲ್ಲ ಇದು ಎಷ್ಟು ಕ್ಲಿಷ್ಟವಾಗಿದೆ ಎನ್ನುವುದು ನನಗೇ ಅರ್ಥವಾಗುತ್ತದೆ. ಇದನ್ನು ಜಾರಿಗೆ ತರಬೇಕಾದರೆ ಬಹಳ ಕಷ್ಟವಾಗುತ್ತದೆ. ಅದಕ್ಕಾಗಿ ನಾನು ಇದಕ್ಕಿಂತ ಇನ್ನೂ ಸುಲಭವಾಗಿ ಈ ಕಾನೂನನ್ನು ಮಾಡುವುದಕ್ಕೆ ಅವಕಾಶ ಅಲ್ಲಲ್ಲೇ ಇದರಲ್ಲಿದೆ. ಸರಕಾರದವರು ಮತ್ತು ಈ ಮಾನ್ಯ ಸಭೆಯವರು ಈ ಕಾನೂನನ್ನು ಎಷ್ಟು ಸುಲಭವಾಗಿ ಮಾಡುವುದಕ್ಕೆ ಸಾಧ್ಯವೋ ಅಷ್ಟು ಸುಲಭವಾಗಿ ಮಾಡಬಹುದು ಎಂದು ನಾನು ಆಶಿಸುತ್ತೇನೆ. ಸುಲಭವಾಗಿ ಮಾಡುವಾಗ ಇಲ್ಲಿರುವ ''ಬೇಸಿಕ್ಕು ಹೋಲ್ಡಿಂಗು'' ಎನ್ನುವುದನ್ನು ''ಸ್ಟಾಂಡರ್ಡ್ ಏಕರ್'' ಎಂದು ಸುಲಭವಾಗಿ ಮಾಡಿಕೊಳ್ಳುವುದಕ್ಕೆ ಆಗುತ್ತದೆ ಎಂದು ನಾನು ಭಾವನೆ ಮಾಡಿ

ಕೊಳ್ಳುತ್ತೇನೆ. ಈಗಿರುವಂತೆ ನಾನೂರು ರೂಪಾಯಿ ಒಂದು ಬೇಸಿಕ್ಕು ಹೋಲ್ಡಿಂಗಿಗೆ ಎನ್ನುವುದನ್ನು ಒಪ್ಪಿಕೊಳ್ಳೋಣ. ಆದರೆ ಮೊದಲು "ಸ್ಟಾಂಡರ್ಡ್ ಎಕರ್" ಎನ್ನುವ ಕಾನ್‌ಸೆಪ್ಟನ್ನು ಒಪ್ಪಿಕೊಂಡರೆ ಮುಂದೆ ಇದನ್ನು ಮಾಡಿಕೊಳ್ಳುವುದಕ್ಕೆ ಸುಲಭವಾಗುತ್ತದೆ.

ನಾನು ಮೊದಲು ಮೂರು ತರಹ ಜಮೀನುದಾರರ ವಿಷಯವನ್ನು ಹೇಳುತ್ತೇನೆ. ಯಾರು ಜಮೀನನ್ನು ಸಂಪೂರ್ಣವಾಗಿ ಗೇಣಿಗೆ ಕೊಟ್ಟು ಬೇರೆ ಉದ್ಯಮಕ್ಕೆ ತೊಡಗಿದ್ದಾರೋ ಅಂತಹವನಿಂದ ಜಮೀನನ್ನು ತೆಗೆದುಕೊಳ್ಳಲು ಎಂತಹ ಕಟ್ಟುನಿಟ್ಟಾದ ಕಾನೂನನ್ನು ಮಾಡಿದರೂ ನನಗೆ ಸಮ್ಮತಿಯೇ. ಹಾಗೆ ಜಮೀನನ್ನು ವ್ಯವಸಾಯ ಮಾಡದೆಯೇ ಗೇಣಿಯಿಂದ ಜೀವನ ಮಾಡುತ್ತಿರುವವರಿಗೆ ಸಾಕಷ್ಟು ಪರಿಹಾರವನ್ನು ಕೊಟ್ಟು ಅದನ್ನು ಗೇಣೀದಾರರಿಗೆ ವಹಿಸಿಕೊಡುವುದು ಧರ್ಮ. ಇದೇ ರೀತಿಯಲ್ಲಿ ಖುದ್ದು ಸಾಗುವಳಿ ಮಾಡುವ ಜಮೀನಿನ ವಿಷಯದಲ್ಲಿ ನೀವು ಬೇರೆ ರೀತಿಯಾಗಿ ವರ್ತಿಸಬೇಕು. ಇಲ್ಲಿಯೂ ವ್ಯವಸಾಯಗಾರನ ಜೀವನ ತಮಗೆ ಗೊತ್ತಿರಬೇಕು. ಅವನು ನೂರು ಎಕರೆಯಷ್ಟು ಜಮೀನಿನಿಂದ ಜೀವನ ಮಾಡುತ್ತಿದ್ದರೂ ಆತ ಒಂದು ಮಿಲ್ಲಿನಲ್ಲಿ ಕೆಲಸಮಾಡತಕ್ಕ ಕೂಲಿಯವನ ಜೀವನವನ್ನೂ ಸಹ ಮಾಡುವುದಕ್ಕೆ ಆಗುವುದಿಲ್ಲ. ಕೂಲಿಗಾರನಿಗೆ ಒಂದು ನೆಮ್ಮದಿ ಇದೆ. ಅವನಿಗೆ ನಾಳೆಯ ಭಯ ಇಲ್ಲ. ಅವನು ಜೀವನಕ್ಕೆ ಹೇಗೆ ಎಂದು ತೊಂದರೆಪಡುವುದಿಲ್ಲ ಮತ್ತು ಆ ಕಡೆಗೆ ಯಾವ ಲಕ್ಷ್ಯವೂ ಕೂಡ ಇಲ್ಲ. ಆದರೆ ರೈತನು ಎಷ್ಟು ಹೆಚ್ಚಿನ ಜಮೀನನ್ನು ವ್ಯವಸಾಯ ಮಾಡಿದರೂ ಅವನ ಜೀವನ ಮಟ್ಟ ಹೆಚ್ಚಿನ ಮಟ್ಟದಲ್ಲಿರುವುದಿಲ್ಲ. ಇದರಲ್ಲಿಯೂ ಖುದ್ದು ಸಾಗುವಳಿ ಮಾಡುವುದಕ್ಕೆ ಒಂದು ಲಿಮಿಟ್ಟು ಇದೆ. ಎಷ್ಟೇ ಜಮೀನು ಇರಲಿ ಖುದ್ದು ಸಾಗುವಳಿ ಮಾಡುವವನು ಎಲ್ಲ ಜಮೀನನ್ನೂ ಖುದ್ದಾಗಿಯೇ ಸಾಗುವಳಿ ಮಾಡುವುದಕ್ಕೆ ಆಗುವುದಿಲ್ಲ. ಅವನಲ್ಲಿ ನಾಲ್ಕು, ಐದು ಅಥವಾ ಹತ್ತು ಎತ್ತು ಇರಬಹುದು. ಇದ್ದರೂ ಅವನು ಸಾಗುವಳಿಮಾಡುವುದಕ್ಕೆ ಆಗುವುದಿಲ್ಲ ಬಹಳ ಕಷ್ಟವಾಗುತ್ತದೆ. ಸುಮಾರು ಐವತ್ತು ಎಕರೆಯಷ್ಟು ಸಾಗುವಳಿ ಮಾಡುವಂತಹ ರೈತರು ಒಂದು ಜಿಲ್ಲೆಗೆ ಒಬ್ಬಿಬ್ಬರು ಸಿಕ್ಕಬಹುದು. ನಮ್ಮಲ್ಲಿರುವ ಫ್ಯಾಮಿಲಿ ಹೋಲ್ಡಿಂಗು, ಬೇಸಿಕ್ಕು ಹೋಲ್ಡಿಂಗ್, ಸೀಲಿಂಗು ಇವನ್ನೆಲ್ಲ ಅನ್ವಯಮಾಡಬೇಕಾಗಿಲ್ಲ. ಈ ಸಭೆಯಲ್ಲಿ ಈ ವಿಷಯವನ್ನು ಚರ್ಚೆಮಾಡುವಾಗ ಒಂದು ವಿಚಾರದಲ್ಲಿ ಬಹಳವಾಗಿ ಹೇಳಿದ್ದಾರೆ. ಎಲ್ಲ ಉದ್ಯಮವನ್ನೂ ಬಿಟ್ಟು ಈ ವ್ಯವಸಾಯದ ಉದ್ಯಮಕ್ಕೇ ಇಂತಹ ಕಾನೂನು ಏಕೆ? ಒಬ್ಬ ಸರಕಾರಿ ಅಧಿಕಾರಿ ಎಷ್ಟು ಬೇಕಾದರೂ ಸಂಪಾದನೆ ಮಾಡಬಹುದು. ನಮ್ಮ ದೇಶದಲ್ಲಿ ನಾಲ್ಕು ಸಾವಿರ ರೂಪಾಯಿಗಳ ಸಂಬಳ ತೆಗೆದುಕೊಳ್ಳುವ ಅಧಿಕಾರಿಗಳಿದ್ದಾರೆ. ಅವರಿಗೆ ಈ ಹಣ ನಮ್ಮ ದೇಶದಲ್ಲಿ ಮಾಹೆಯಾನ ಪಾವತಿಯಾಗುತ್ತಿರತ್ತದೆ. ಹೀಗೆ ಸಂಬಳ ಕೊಡುವುದಕ್ಕೆ ಅಡ್ಡಿ ಏನಿಲ್ಲ. ಕೈಗಾರಿಕೆಯಲ್ಲಿ ಉತ್ಪನ್ನಮಾಡಿ ಲಕ್ಷಾಂತರ, ಹಾಗೆಯೇ ವ್ಯಾಪಾರದ ಉದಮದಲ್ಲಿ ಲಕ್ಷಾಂತರ ಸಂಪಾದನೆಮಾಡುವುದಕ್ಕೆ ಅಡ್ಡಿ ಇಲ್ಲ. ಆದರೆ ವ್ಯವಸಾಯದ ಉದ್ಯಮದಲ್ಲಿ ಒಂದು ಮಿತಿಯನ್ನು ನಿರ್ಧರಿಸುವಾಗ ಯಾವ ರೀತಿಯಾಗಿ ನಿರ್ಧರಿಸುತ್ತೀರಿ ಎನ್ನುವುದನ್ನು ನೋಡಬೇಕಾಗಿದೆ. ಆದುದರಿಂದ ನಮ್ಮ ಮಾನ್ಯ ಸದಸ್ಯರಾದ ಮುಕ್ಕಣ್ಣಪ್ಪನವರು ಹೇಳಿದ ಹಾಗೆ ಇದನ್ನು ಸ್ವಲ್ಪ ಸೂಕ್ಷ್ಮವಾಗಿ ಪರಿಗಣಿಸಬೇಕು ಎಂದು ನಾನು ಅಭಿಪ್ರಾಯಪಡುತ್ತೇನೆ. Existing holding under self-cultivation. ಯಾರು ಜಮೀನನ್ನು ಜಮೀನುದಾರನಾಗಿ ಹೊಂದಿಕೊಂಡು ಸ್ವಂತವಾಗಿ ವ್ಯವಸಾಯ ಮಾಡುತ್ತಿರುತ್ತಾನೋ ಅವನ ಗೋಜಿಗೆ ಇಂದೂ ಹೋಗಬಾರದು, ಮುಂದೂ ಹೋಗಬಾರದು. ಸ್ವಂತವಾಗಿ ವ್ಯವಸಾಯ ಮಾಡುವ ರೈತನಿಗೆ ಎಷ್ಟೋ ವಿಧವಾದ ತೊಂದರೆಗಳಿವೆ. ಅದರಲ್ಲೂ ತಾನೂ ವ್ಯವಸಾಯ ಮಾಡದೆ ತನ್ನ ಜಮೀನನ್ನು ಗುತ್ತಿಗೆಗೆ ಕೊಟ್ಟಿದ್ದರೆ ಅಂತಹವನ ಮೇಲೆ ಈ ಕಾನೂನನ್ನು ಹೇಗೆ ಅನ್ವಯ ಮಾಡಬೇಕೋ ಹಾಗೆ ಅನ್ವಯಮಾಡಿ. ಅನೇಕರು ತಾವೇ ಜಮೀನನ್ನು ಹೊಂದಿ ತಮ್ಮ ಮಕ್ಕಳು ವಿದ್ಯಾಭ್ಯಾಸಮಾಡಿ ಬೇರೆ ಉದ್ಯಮಕ್ಕೆ ಹೋಗುವ ಶಕ್ತಿಯಿದ್ದರೂ, ವ್ಯಾಪಾರ ಮಾಡುವುದಕ್ಕೆ ಶಕ್ತಿ ಇದ್ದರೂ ಆ ಜಮೀನನ್ನು ನೋಡಿಕೊಳ್ಳುವುದಕ್ಕೆ ಹತ್ತಾರು ಎರು, ಆಳುಗಳು, ಎಲ್ಲ ಸಿಬ್ಬಂದಿಯನ್ನೂ ಇಟ್ಟುಕೊಂಡು, ಮಳೆ ಬಿಸಿಲು ಎನ್ನದೆ, ಬೇಸಿಗೆ ಚಳಿಗಾಲವೆನ್ನದೆ ವರ್ಷವೆಲ್ಲ ವ್ಯವಸಾಯಮಾಡುತ್ತಾರೆ. ಅಂಥ ರೈತರಿಗೆ ನೀವು ಇಲ್ಲಿ ಕುಳಿತುಕೊಂಡು ಕಾನೂನನ್ನು ಮಾಡುತ್ತಿದ್ದೀರಿ. ಅವನಿಗೆ ಮೂರು ಫ್ಯಾಮಿಲಿ ಹೋಲ್ಡಿಂಗು ಎಂದು ಸೀಲಿಂಗು ಇಟ್ಟಿದ್ದೀರಿ. ಅದಕ್ಕಿಂತ ಜಾಸ್ತಿ ಇದೆ ಎಂದು ಅದನ್ನು ಬಿಟ್ಟುಕೊಡು ಎಂದು ಹೇಳುವುದಕ್ಕೆ ನಿಮಗೆ ಏನು ಅಧಿಕಾರವಿದೆ? ಇಂತಹ ಜಮೀನು ಹೆಚ್ಚೇನೂ ಇಲ್ಲ. ದೇಶದ ಬೇರೆ ಕಡೆ ಇರುವ ಪರಿಸ್ಥಿತಿ ನನಗೆ ಗೊತ್ತಿಲ್ಲ. ನಮ್ಮ ಕಡೆಯಲ್ಲಿ ಮೂರು ಫ್ಯಾಮಿಲಿ ಹೋಲ್ಡಿಂಗು ಅಥವಾ ಆರು ಫ್ಯಾಮಿಲಿ ಹೋಲ್ಡಿಂಗು ಇದಕ್ಕಿಂತ ಹೆಚ್ಚಿನ ವಿಸ್ತೀರ್ಣವುಳ್ಳ ತರಿ, ಖುಷ್ಕಿ ಅಥವಾ ಬಾಗಾಯಿತು ಜಮೀನನ್ನು ವ್ಯವಸಾಯ ಮಾಡುವ ರೈತರು ಇಲ್ಲ. ಅದರಿಂದ ನಾನು ಹೇಳುವುದು ಈ ಕಾನೂನಿನಿಂದ ಒಬ್ಬರಿಗೂ ತೊಂದರೆಯಾಗಬಾರದು ಎಂದು ನಾನು ಹೇಳುತ್ತೇನೆ.

ಶ್ರೀ ಎಂ. ಕೆ. ಬೊಮ್ಮೇಗೌಡ (ಕೃಷ್ಣರಾಜಪೇಟೆ).—ಈಗ ಒಬ್ಬರ ಹತ್ತಿರ ಹತ್ತಿಪ್ಪತ್ತು ಎಕರೆಗಳಷ್ಟು ಜಮೀನಿರುತ್ತದೆ. ಇದನ್ನು ಒಂದು ವರ್ಷ ವ್ಯವಸಾಯ ಮಾಡಲು ಏನೋ ಕಾರಣಗಳಿಂದ ಆಗಲಿಲ್ಲ. ಇದನ್ನು ಮಾರನೆ ವರ್ಷ ಮಾಡಲು ಅವನ ಶಕ್ತಿ ಸಾಮರ್ಥ್ಯಗಳು ಬಂದರೆ ಆಗ ಜಮೀನನ್ನು ಬಿಡಿಸಿಕೊಳ್ಳಬೇಕಾದರೆ ತಾವೇನು ಸಲಹೆ ಕೊಡುತ್ತೀರಿ?

ಶ್ರೀ ಕೆ. ಪುಟ್ಟಸ್ವಾಮಿ.—ನಮ್ಮ ಸ್ನೇಹಿತರು ಐವತ್ತೆರಡನೆ ಇನಾಮಿಯ ಟೆನೆನ್ಸಿ ಕಾಯಿದೆಯನ್ನು ಓದಿದ್ದರೆ ಈ ಪ್ರಶ್ನೆ ಬರುತ್ತಿರಲಿಲ್ಲ. ಯಾವುದೇ ಕಾರಣಕ್ಕೆ ಒಂದು ಸಾರಿ ಬಿಡಿಸಿದಂತಹ ಜಮೀನನ್ನು ಐದುವರ್ಷಗಳವರೆಗೆ ಕೊಡಿಸಕೂಡದು ಎಂದು ಇಲ್ಲಿಯೇ ಇದೆ. ಈ ರೀತಿಯಾಗಿ ಐದು ವರ್ಷಗಳವರೆಗೆ ಅವಧಿಯನ್ನು ಕೊಡಿಸುವುದಕ್ಕಾಗಿ ಆರಾರು ತಿಂಗಳಿಗೆ ತಾತ್ಕಾಲಿಕವಾದ ಶಾಸನವನ್ನು ಕೂಡ ಹಾಗೆ ಇಲ್ಲಿಯವರೆಗೂ ಮುಂದುವರಿಸಿಕೊಂಡು ಬಂದಿದೆ. ಈ ಬಿಲ್ಲಿನಲ್ಲಿಯೂ ಕೂಡ ಸೆಲ್ಫ್ ಕಲ್ಟಿವೇಷನ್ನು ಇದಕ್ಕಾಗಿ ಬಿಡಿಸಿಕೊಳ್ಳುವುದಕ್ಕೆ ಅವಕಾಶವಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯ್ಕನಹಳ್ಳಿ).—ಜತ್ತಿ ಸಮಿತಿಯ ರಿಪೋರ್ಟಿನಲ್ಲೇ ನೂರು ಎಕರೆ ಇರುವಷ್ಟು ಜಮೀನು ಸುಮಾರು 3,20,000 ಎಕರೆಗಳಷ್ಟು ಅಥವಾ ಸುಮಾರು ಒಂದು ಲಕ್ಷ ಚಿಲ್ಲರೆ ಇತ್ತು ಎಂದು ಹೇಳಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಮೂರು ಲಕ್ಷ ಎಕರೆಗಳ ಪೈಕಿ ಎಷ್ಟು ಎಕರೆ ಜಮೀನು ಗೇಣಿ ಸಾಗಿದೆ ನಲ್ಲಿದೆಯೋ? ಗೇಣಿ ಸಾಗಿನಲ್ಲಿ ಜಾಸ್ತಿ ಇರಬೇಕು. ಗೇಣಿಸಾಗಿನಲ್ಲಿದ್ದರೆ ಅದನ್ನು ಬಿಡಿಸಿಕೊಳ್ಳೋಣ. ನಾನು ಹೇಳುವುದು ಯಾರು ಖುದ್ದು ವ್ಯವಸಾಯಮಾಡುತ್ತಾನೆಯೋ ಅಂತಹವನ ಜಮೀನನ್ನು ಅಳೆಯುವುದಕ್ಕೆ ಹೋಗಬೇಡಿ. ಸರಪಣಿ ಹಿಡಿದುಕೊಂಡು ಅಳೆಯಬೇಡಿ. ನಾವು ಮುಖ್ಯವಾಗಿ ಒಂದು ವಿಷಯವನ್ನು ತಿಳಿದುಕೊಳ್ಳಬೇಕು. ಮುಂದೆ ಬರತಕ್ಕ ಜನರಾಗಲೀ ನಮ್ಮ ಸಮಕಾಲೀನರಾಗಲಿ ನಮ್ಮ ಪೀಳಿಗೆಯವರಾಗಲಿ ಅವರಿಗೆ ಮಾಡುತ್ತಿದ್ದೇವೆಂದು ಇಟ್ಟುಕೊಳ್ಳಬಾರದು. ಖುದ್ದು ಸಾಗುವಳಿ ಮಾಡತಕ ವರಿಗೆ ಈ ಅಡಚಣೆಗಳನ್ನು ಇಟ್ಟರೆ ಯಾವ ರೀತಿಯಾದ ಭಾವನೆಯಿಂದ ನೋಡುತ್ತಾರೆ ಎಂಬುದನ್ನು ತಿಳಿದುಕೊಳ್ಳಿ. ಈಗ ಭೂಮಿಯನ್ನು ಟ್ರಾನ್ಸ್‌ಫರ್‌ಮಾಡುವುದಕ್ಕೆ ಮತ್ತು ಪಾರ್ಟಿಷನ್‌ಮಾಡುವುದಕ್ಕೆ ಏನೂ ಅಡ್ಡಿ ಇಲ್ಲ. ಸಭೆಯ ಅಭಿಪ್ರಾಯನೋಡಿದರೆ ಇದನ್ನು ಕಾನೂನು ಕಡತಕ್ಕೆ ಸೇರಿಸುವುದಕ್ಕೆ ಅವರ ಅಭ್ಯಂತರವಿಲ್ಲ. ಮೂರು ಸೀಲಿಂಗಿನಷ್ಟು ಎಂದರೆ ಒಂಭತ್ತು ಫ್ಯಾಮಿಲಿ ಹೋಲ್ಡಿಂಗ್ಸನ್ನು ನಾಲ್ಕು ಜನ ಹಂಚಿಕೊಂಡರೆ ಒಬ್ಬೊಬ್ಬರಿಗೆ ಎರಡು ಚಿಲ್ಲರೆ ಫ್ಯಾಮಿಲಿ ಹೋಲ್ಡಿಂಗ್ ಬರುತ್ತದೆ. ಆಗ ಅದು ನಿಮ್ಮ ಕಾನೂನಿಗೆ ಸಿಕ್ಕುವುದಿಲ್ಲ. ಅವರಲ್ಲಿರತಕ್ಕ ಮನೋಭಾವನೆಯನ್ನು ನಾವು ಏನು ಎಂದು ನೋಡಬೇಕು. ಈಗ ಒಟ್ಟಿಗೆ ವ್ಯವಸಾಯವನ್ನು ಮಾಡುತ್ತಿದ್ದಾರೆ. ಈ ಜಮೀನು ನನ್ನದು, ಈ ಜಮೀನು ನನ್ನ ತಮ್ಮನದು, ನನ್ನ ಅಣ್ಣನದು ಎಂದು ಮಾಡಿಕೊಂಡ ಮೇಲೆ ಒಗ್ಗಟ್ಟಾಗಿ ವ್ಯವಸಾಯಮಾಡುವ ಮನೋಭಾವನೆ ಹೋಗುತ್ತದೆ. ಆದ್ದರಿಂದ ಸರ್ಕಾರದವರು ಬೇಕಾದರೆ ಕಾನೂನು ಮಾಡಿ ಸೀಲಿಂಗ್ ತಂದು ಭೂಮಿಯನ್ನು ತೆಗೆದುಕೊಳ್ಳಲಿ. ಬೇರೆ ಬೇರೆ ಆಗಬೇಕು ಎನ್ನುವ ಮನೋಭಾವನೆ ಇಲ್ಲದೆ ಇರುವಾಗ ಈ ರೀತಿ ಒಂದು ಕಾನೂನು ಬರುವುದರಿಂದ ವಿಭಾಗಪತ್ರವನ್ನು ಮಾಡಿ ತಪ್ಪಿಸಿಕೊಳ್ಳಬೇಕು ಎಂಬ ಜನರಿದ್ದಾರೆ. ನಾವು ನಿರ್ಧಾರವಾಗಿ ಹೇಳಬಹುದು, ಯಾರು ಖುದ್ದು ಸಾಗಿನಲ್ಲಿ ಇದ್ದಾರೋ ಅಂಥವರ ಜಮೀನಿನ ಹವ್ಯಾಸಕ್ಕೆ ಬರುವುದಿಲ್ಲ ಎಂದು. ನಾವು ಅವಿಭಕ್ತ ಕುಟುಂಬಕ್ಕೆ ಬಹಳ ಬೆಲೆ ಕೊಡುತ್ತೇವೆ; ಎಷ್ಟೋ ವೇಳೆ ವಿಭಾಗ ಆದರೂ, ವಿಭಾಗ ಆಗುವ ಸಂದರ್ಭ ಬಂದಾಗ ಮನಸ್ಸಿಲ್ಲದೆ ದುಃಖಪಟ್ಟುಕೊಂಡು ವಿಭಾಗ ಮಾಡಿಕೊಳ್ಳುತ್ತಾರೆ. ಹೀಗೆ ಬೇರೆ ಬೇರೆ ಕಾರಣಗಳಿಂದ ವಿಭಾಗ ಆಗಬೇಕಾಗಿ ಬರುತ್ತದೆ. ನಾಲ್ಕು ಜನ ಅಣ್ಣ ತಮ್ಮಂದಿರು ಒಟ್ಟಿಗೆ ಬಾಳಬೇಕು, ಕಷ್ಟಸುಖಕ್ಕೆ ಭಾಗಿಯಾಗಬೇಕು, ಕುಟುಂಬದಲ್ಲಿ ಎಲ್ಲರೂ ವಿಹಿತವಾಗಿ ಬಾಳಬೇಕು ಎನ್ನುವ ಆಶೆ ಎಷ್ಟೋ ಬಲವಾಗಿದ್ದರೂ, ಅನಿವಾರ್ಯವಾಗಿ ವಿಭಾಗ ಮಾಡಬೇಕಾದ ಸಂದರ್ಭ ಬರುತ್ತದೆ. ಅದರ ಜೊತೆಗೆ ಸರ್ಕಾರದವರು ಕಾನೂನು ತಂದು ಜಮೀನು ಕಿತ್ತುಕೊಳ್ಳುತ್ತಾರೆ ಎನ್ನುವ ಭಯದಿಂದ ವಿಭಾಗಮಾಡಿಕೊಂಡಿದ್ದಾರೆ ಎನ್ನುವುದಕ್ಕೆ ಏತಕ್ಕೆ ಅವಕಾಶಕೊಡಬೇಕು? ಆದ್ದರಿಂದ ಖುದ್ದು ಜಮೀನು ಮಾಡಿದ ಸಂದರ್ಭದಲ್ಲಿ ನಾವು ಬರುವುದಿಲ್ಲ ಎಂದು ಹೇಳಿ. ಸ್ವಂತ ಜಮೀನುಮಾಡುವ ಕಡೆ ಸೀಲಿಂಗ್ ಬೇಡ. ಫ್ಯಾಮಿಲಿ ಹೋಲ್ಡಿಂಗ್, ಬೇಸಿಕ್‌ಹೋಲ್ಡಿಂಗ್ ಬೇಡ. ಸ್ವಂತವಾಗಿ ಖುದ್ದು ಸಾಗುವಳಿ ಮಾಡುತ್ತಿದ್ದರೆ ಅದನ್ನು ಬಿಡಿಸಿಕೊಳ್ಳುವುದಕ್ಕೆ ಹೋಗಬೇಡಿ; ಸ್ವಲ್ಪ ಜಮೀನು ಇದ್ದು ಇನ್ನೂ ಸ್ವಲ್ಪ ಜಮೀನು ಬಿಡಿಸಿಕೊಳ್ಳಬೇಕಾದರೆ ಅದಕ್ಕೆ ಈ ಕಾನೂನು ಬೇಕಾಗುತ್ತದೆ. ಆದ್ದರಿಂದ ಖುದ್ದು ಸಾಗುವಳಿ ಮಾಡುವ ಜಮೀನನ್ನು ಅಳೆಯುವ ಗೋಜಿಗೆ ಹೋಗಬಾರದು. ಅದರಿಂದ ರೂಢಮೂಲವಾಗಿ ಬಂದಿರತಕ್ಕ ಭಾವನೆಗೆ ಅಡಚಣೆ ತಂದಂತಾಗುತ್ತದೆ. ಇದರಿಂದ ನಾನು ಭೂಸುಧಾರಣೆಗೆ ವಿರೋಧವಾಗಿದ್ದೇನೆ ಎಂದು ಅರ್ಥವಾಗುವುದಿಲ್ಲ. ಅದನ್ನು ತಾವು ನಾನು ಹೇಳಿದಂತೆ ದಯವಿಟ್ಟುಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ವಿ. ಶ್ರೀನಿವಾಸಶೆಟ್ಟಿ (ಕುಂದಾಪುರ).—ಸ್ವಂತ ಸಾಗುವಳಿಗೆ ಸೀಲಿಂಗ್‌ಬೇಡ ಎಂದು ಹೇಳುತ್ತೀರಿ. ಹಾಗಾದರೆ ಅಬ್ಸೆಂಟೀ ಲ್ಯಾಂಡ್ ಲಾರ್ಡ್ಸ್‌ಗೆ ಸೀಲಿಂಗ್ ಹಾಕಿ ಭೂಮಿಯನ್ನು ಸ್ವಾಧೀನಕ್ಕೆ ವಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಸೀಲಿಂಗ್ ಹಾಕಿದ ಮೇಲೆ ಸ್ವಂತವಾಗಿ ಇಟ್ಟುಕೊಳ್ಳುವುದಕ್ಕೆ ಹಕ್ಕು ಇರುತ್ತದೆಯೋ? ಅಥವಾ ರಿಜಂಷನ್ ಹಕ್ಕು ಇರುತ್ತದೆಯೋ? ಯಾವ ರೀತಿಯಲ್ಲಿ ಅವರಿಗೆ ಸೀಲಿಂಗ್‌ಹಾಕಬೇಕು ?

ಶ್ರೀ ಕೆ. ಪುಟ್ಟಸ್ವಾಮಿ.—ವಿರೋಧ ಪಕ್ಷದ ನಾಯಕರಾದ ಶ್ರೀ ಶ್ರೀನಿವಾಸಶೆಟ್ಟರು ಕೇಳುವ ಸಂದೇಹವನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಗುತ್ತದೆ. ಎಲ್ಲಾ ಜಮೀನನ್ನು ಸಂಪೂರ್ಣವಾಗಿ ಗೇಣಿಗೆ ಬಿಟ್ಟಿದ್ದರೆ ತಾನು ಸ್ವಂತವಾಗಿ ವ್ಯವಸಾಯಮಾಡಬೇಕು ಎಂದು ಅಪೇಕ್ಷೆಪಟ್ಟರೆ ಒಂದು ಫ್ಯಾಮಿಲಿ ಹೋಲ್ಡಿಂಗ್ ಬಿಡಿಸಿಕೊಳ್ಳುವುದಕ್ಕೆ ಅವಕಾಶವಿದೆ. ಹೆಚ್ಚು ಜಮೀನನ್ನು ಗುತ್ತಿಗೆಗೆ ಕೊಟ್ಟಿರತಕ್ಕಂಥವರು ಒಂದು ಫ್ಯಾಮಿಲಿ ಹೋಲ್ಡಿಂಗ್ ಬಿಡಿಸಿಕೊಳ್ಳುವುದಕ್ಕೆ ಅವಕಾಶವಿದೆ. ಕೆಲವು ಸಂದರ್ಭದಲ್ಲಿ ಮೂರು ಫ್ಯಾಮಿಲಿಹೋಲ್ಡಿಂಗಿನವರೆಗೆ ಬಿಡಿಸಿಕೊಳ್ಳುವುದಕ್ಕೆ ಅವಕಾಶವಿದೆ. ಹೆಚ್ಚು ಜಮೀನು ಇದ್ದು ಗುತ್ತಿಗೆಗೆ ಕೊಟ್ಟಿದ್ದರೆ ಬೇಸಿಕ್ ಹೋಲ್ಡಿಂಗ್ ಪ್ರಕಾರ ಬಿಡಿಸಿಕೊಳ್ಳುವುದಕ್ಕೆ ಅವಕಾಶವಿದೆ. ಹೆಚ್ಚು ಜಮೀನು ಗುತ್ತಿಗೆಯಲ್ಲಿದ್ದರೆ ಫ್ಯಾಮಿಲಿ ಹೋಲ್ಡಿಂಗ್ ಬಿಡಿಸಿಕೊಳ್ಳುವುದಕ್ಕೆ ಅವಕಾಶವಿದೆ. ಯಾವುದೇ ಕಾರಣದಿಂದಲಾಗಲಿ ಮೂರು ಫ್ಯಾಮಿಲಿ ಹೋಲ್ಡಿಂಗ್ಸ್ ಬಿಡಿಸಿಕೊಳ್ಳಬಹುದು. ಬೇಸಿಕ್ ಹೋಲ್ಡಿಂಗ್, ಫ್ಯಾಮಿಲಿ ಹೋಲ್ಡಿಂಗ್, ಸೀಲಿಂಗ್ ಎನ್ನುವುದು ಯಾವುದು ಇದೆಯೋ ಅದನ್ನು ನಾವು ಒಪ್ಪಿಕೊಳ್ಳಲೇಬೇಕಾಗುತ್ತದೆ. ಇಷ್ಟು ಜಮೀನು ಇದ್ದರೆ ಸೀಲಿಂಗ್ ಆಗುತ್ತದೆ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಖುದ್ದು ಸಾಗುವಳಿಯಲ್ಲಿರುವ ಜಮೀನನ್ನು ಕಿತ್ತುಕೊಳ್ಳುವುದಿಲ್ಲ ಎಂಬುದಕ್ಕೆ ನಾವು ಒಪ್ಪಿಗೆಕೊಡಬೇಕು ನಾವು ಇನ್ನೊಂದು ಆಲೋಚನೆಮಾಡಬೇಕು. ಕೆಲವು ಐಟಂಗಳಿಗೆ ವಿನಾಯಿತಿಗಳನ್ನು ನೀಡಿದ್ದಾರೆ. ಕಾಫೀ, ಟೀ, ರಬ್ಬರ್ ಆರ್ಚರ್ಡ್ಸ್, ಇತ್ಯಾದಿ ಎಲ್ಲಾ ಫಾರಮ್ಸ್ ನೋಡಿದ್ದೇನೆ. ಇನ್ನು ಯಾವುದು ಉಳಿದದ್ದು? ಬತ್ತ ರಾಗಿ ಬೆಳೆಯುವ ಭೂಮಿ ಮಾತ್ರ. ವೆಲ್ ಕಲ್ಟಿವೇಟೆಡ್ ಫಾರಮ್ಸ್ ಜಮೀನು ವಿನಾಯಿತಿಯಾದ ಪಕ್ಷದಲ್ಲಿ, ಅದರಲ್ಲಿ ಬತ್ತ, ರಾಗಿ ಬೆಳೆಯುವ ಭೂಮಿ ಬಂದರೂ ಬರಬಹುದು. ಹತ್ತು ಮೈಲಿ ದೂರ ಇದ್ದರೂ ಕಾಂಪ್ಯಾಕ್ಟ್ ಫಾರಂ ಆಗಬೇಕು ಎಂದು ವಿಶೇಷ ಸೂಚನೆ ಕೂಡ ಇದೆ. ಆದ್ದರಿಂದ ಹೀಗೆ ಬಳಸಿ ಬಳಸಿಹೋಗುವುದಕ್ಕೆ ಬದಲು ನೇರವಾಗಿ ಹೇಳಬಹುದು. ಯಾರು ಖುದ್ದು ಸಾಗಿನಲ್ಲಿ ಜಮೀನು ಮಾಡುತ್ತಾನೆಯೋ ಆ ಜಮೀನಿನ ತಂಟೆಗೆ ಬರುವುದಿಲ್ಲ ಎಂದು.

ಶ್ರೀ ವಿ ಶ್ರೀನಿವಾಸಶೆಟ್ಟಿ.—ಒಬ್ಬನಿಗೆ ಹತ್ತು ಸಾವಿರ ಎಕರೆ ಇದ್ದರೂ ಅವನ ತಂಟೆಗೆ ಬರುವುದಿಲ್ಲವೋ?

ಶ್ರೀ ಕೆ. ಪುಟ್ಟಸ್ವಾಮಿ.—ಹತ್ತು ಸಾವಿರ ಎಕರೆ ಸಾಗುವಳಿಮಾಡುವುದಕ್ಕೆ ಬರುವುದಿಲ್ಲ. ಅದು ಕನಸಿನ ಮಾತು. ವಾದಕ್ಕೆ ಹೇಳಬಹುದು.

ಒಬ್ಬ ಸದಸ್ಯರು.—ಎಷ್ಟು ಮಾಡಬಹುದು ?

ಶ್ರೀ ಕೆ. ಪುಟ್ಟಸ್ವಾಮಿ.—ಸಾಗಿನಲ್ಲಿ ಎಷ್ಟು ಇದೆ ಎಂಬುವನ್ನು ಕೇಳಿ, ಸರ್ಕಾರದವರು ಅಂಕಿಅಂಶಗಳನ್ನು ಒದಗಿಸಿಕೊಡುತ್ತಾರೆ ಪರ್ಸನಲ್ ಕಲ್ಟಿವೇಟೆಡ್ ಲ್ಯಾಂಡ್ ಎಷ್ಟು ಇದೆ ಎಂದು ಸರ್ಕಾರದವರು ಹೇಳಬಹುದು. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ 50 ಎಕರೆ ತರಿ 200 ಚಿಲ್ಲರೆ ಎಕರೆ ಖುಷ್ಕಿ ವ್ಯವಸಾಯ ಮಾಡಬಹುದು. ಒಂದೊಂದು ಜಿಲ್ಲೆಯಲ್ಲಿ ಜಾಸ್ತಿ ಜಮೀನು ಇರತಕ್ಕವರು ಒಬ್ಬರೋ ಅಥವಾ ಇಬ್ಬರೋ ಇರಬಹುದು. ಅಂಥವರಿಗೆ ಏತಕ್ಕೆ ಅಡಚಣೆ ಮಾಡಬೇಕು ? (*Interruption*) ನನಗೆ ಬೇಸಿಕ್ ಹೋಲ್ಡಿಂಗ್ಸ್ ಇಲ್ಲ. ಇರುವುದನ್ನು ಬೇಕಾದರೆ ಬಿಡಿಸಿಕೊಳ್ಳಬಹುದು. ಅದನ್ನೂ ನಾನೇ ವ್ಯವಸಾಯ ಮಾಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ).—ಅಸೆಂಬ್ಲಿ ಸದಸ್ಯರ ಪೈಕಿ ಸಾವಿರಾರು ಎಕರೆ ಜಮೀನು ಇರುವವರೂ ಇದ್ದಾರೆ ?

ಶ್ರೀ ಕೆ. ಪುಟ್ಟಸ್ವಾಮಿ.—ಯಾರಿಗಾದರೂ ಸೀರಿಯಸ್ ಮ್ಯಾಲಡಿ ಇದ್ದರೆ ಅದಕ್ಕೆ ತಕ್ಕ ರೆಮೆಡಿ ಇದ್ದೇ ಇರುತ್ತದೆ. ಒಂದು ವಿಚಾರವನ್ನು ಪ್ರಾಮುಖ್ಯವಾಗಿ ಹೇಳುತ್ತೇನೆ. ಗೇಣಿಗೆ ಕೊಡಲು ಯಾವ ಅಂತರದಲ್ಲಿ ಅವಕಾಶಕೊಡಬಹುದು ? ಫ್ಯಾಮಿಲಿ ಹೋಲ್ಡಿಂಗ್‌ನವರಿಗೆ ಕೊಡುವುದಕ್ಕೆ ಪ್ಲಾನಿಂಗ್ ಕಮಿಷನ್‌ರವರ ಆಕ್ಷೇಪಣೆ ಏನೂ ಇಲ್ಲ. ಈಗ ತಮ್ಮ ಬಿಲ್ಲಿನಲ್ಲಿರತಕ್ಕದ್ದು ಬೇಸಿಕ್ ಹೋಲ್ಡಿಂಗ್ಸ್ ಕಡಿಮೆ ಇರತಕ್ಕ ಜನ, ಮೈನರ್ ಮಕ್ಕಳು, ಸೈನ್ಯದಲ್ಲಿ ಇರತಕ್ಕವರು, ಮತ್ತು ಸ್ಮಾಲ್ ಹೋಲ್ಡರ್ಸ್ ಅವರು ಗುತ್ತಿಗೆ ಕೊಡಬಹುದು. ಅದೂ ಸ್ಮಾಲ್ ಹೋಲ್ಡರ್ಸ್ ಡೆಫಿನಿಷನ್ ಬೇಸಿಕ್ ಹೋಲ್ಡಿಂಗ್ಸ್‌ಗಿಂತ ಕಡಿಮೆ ಇರುವವರು ಎಂದು ನಾನು ಹೇಳುತ್ತೇನೆ. ಸ್ಮಾಲ್ ಹೋಲ್ಡರ್ಸ್ ಡೆಫಿನಿಷನ್ ಬೇಸಿಕ್ ಹೋಲ್ಡಿಂಗ್ ಕಡಿಮೆ ಇರುವವರು ಎನ್ನುವುದಕ್ಕೆ ಬದಲು ಫ್ಯಾಮಿಲಿ ಹೋಲ್ಡಿಂಗ್ ಎಂದು ಮಾಡಬೇಕು. ಕೆಲವರಿಗೆ ಆಶ್ಚರ್ಯ ಆಗಬಹುದು ಇದು ಭೂಸುಧಾರಣೆಯೋ ಎಂದು.

ಫ್ಯಾಮಿಲಿ ಹೋಲ್ಡಿಂಗ್ಸ್ ಇರತಕ್ಕವರಿಗೇನೋ ಸುಮಾರು ಎಂಟು–ಒಂಬತ್ತು ಎಕರೆ ಗದ್ದೆಗಳಾಗುತ್ತವೆ. ಅಷ್ಟು ಜಮೀನನ್ನು ಗುತ್ತಿಗೆಗೆ ಕೊಟ್ಟಿರಬಹುದು ಎಂದು ಹೇಳುತ್ತೇನೆ. ಅದುಸರಿ. ಬೇರೆ ಉದ್ಯಮಕ್ಕೆ ತೊಡಗದೇ ಇರುವವರು ಯಾರೂ ಈಗ ಫೇರ್‌ರೆಂಟ್ ನಿರೀಕ್ಷಣೆಮಾಡಿ ಜಮೀನು ಕೊಡುವುದಿಲ್ಲ. ಅನಿವಾರ್ಯವಾಗಿ ಬಂದ ಹೊರತು ಜಮೀನನ್ನು ಗುತ್ತಿಗೆಗೆ ಕೊಡುವುದಿಲ್ಲ, ತಾನೇ ವ್ಯವಸಾಯ ಮಾಡುತ್ತಾನೆ ಮುಖ್ಯ ಬೆಳೆಯಲ್ಲಿ ಕಾಲು ಭಾಗಕ್ಕೆ ಮೀರದಂತೆ ಬೆಳೆದ ಫಸಲನ್ನು ತಾನು ತೆಗೆದುಕೊಂಡು ಜಮೀನನ್ನು ಗುತ್ತಿಗೆಗೆ ಕೊಟ್ಟು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಬೇರೆ ಉದ್ಯೋಗ ಮಾಡುವಾಗ ಆತ ಗುತ್ತಿಗೆಗೆ ಕೊಡಬಹುದು. ಫ್ಯಾಮಿಲಿ ಹೋಲ್ಡಿಂಗ್ ಇರುವವರನ್ನು ಸ್ಮಾಲ್ ಹೋಲ್ಡರ್ ಎಂದು ಪರಿಗಣಿಸಿ ಎಂದು ಹೇಳುವುದರಲ್ಲಿ ಒಂದು ಮುಖ್ಯಕಾರಣವಿದೆ. ನಮ್ಮಲ್ಲಿ ಅನೇಕರು ಗ್ರಾಮಾಂತರದಿಂದ ಬಂದಿರುವವರು. ನಮ್ಮೆಲ್ಲರಿಗೂ ಅಲ್ಪಸ್ವಲ್ಪ ಜಮೀನು ಇರುತ್ತದೆ. ನಮ್ಮಲ್ಲಿ ಸ್ವಲ್ಪ ಜಮೀನು ಇದ್ದು ಮಗ ಬುದ್ಧಿವಂತನಾದರೆ, ವಿದ್ಯಾವಂತನಾದರೆ, ಸ್ವಲ್ಪ ಸಾಹಸಿಯಾದರೆ ದೊಡ್ಡದೊಡ್ಡ ಪಟ್ಟಣಗಳಿಗೆ ಹೋಗಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸಮಾಡಿ ತಾನು ಇನ್ನೂ ಮುಂದೆ ಬರಬೇಕೆಂಬ ಶಕ್ತಿ ಇರುವವನು ಊರು ಬಿಟ್ಟುಹೋಗುವಾಗ ತನ್ನ ಜಮೀನನ್ನು ಏನು ಮಾಡಬೇಕು ? ಆ ಜಮೀನನ್ನು ಗುತ್ತಿಗೆಗೆ ಕೊಡುವುದಕ್ಕೆ ಅವಕಾಶವಿರುವುದಿಲ್ಲ. ಬೇಸಿಕ್ ಹೋಲ್ಡಿಂಗಿನಲ್ಲಿ ತಗಾದೆ ಇರುತ್ತದೆ. ಆಗ ಆ ಜಮೀನನ್ನು ಮಾರಿ ಬೇರೆ ಸ್ಥಳದಲ್ಲಿ ಬೇರೆ ಉದ್ಯಮಗಳಲ್ಲಿ ತೊಡಗಬೇಕು. ಹೊಸ ಹೊಸ ಉದ್ಯೋಗಗಳನ್ನು ಹುಡುಕುವಾಗ ಅದರಲ್ಲಿ ನಾವು ಜಯಶೀಲರಾಗಬಹುದು. ಆಗ ನಮ್ಮ ಮನಸ್ಸಿನಲ್ಲಾಗತಕ್ಕ ಭಾವನೆ ಏನಾಗುತ್ತದೆಂದರೆ ಇರತಕ್ಕ ಜಮೀನನ್ನು ಇಟ್ಟುಕೊಂಡು ವ್ಯವಸಾಯ ಮಾಡೋಣವೋ ಬೇಡವೋ ಎಂಬ ಮನಸ್ಸು ಬರುತ್ತದೆ. ನಾವು ಯಾವ ಉದ್ಯಮದಲ್ಲಿ ದುಡಿಯುತ್ತೇವೋ ಅದರಲ್ಲಿ ಜಯಶೀಲರಾಗುತ್ತೇವೆಯೋ ಇಲ್ಲವೋ ಎಂಬ ಭಾವನೆ ನಮಗೆ ಇರುತ್ತದೆ. ಆ ಭಾವನೆಯಿಂದ ಹಳ್ಳಿಯ ಮಕ್ಕಳು ವಿದ್ಯಾವಂತರಾದವರು, ಬುದ್ಧಿವಂತರಾದವರು, ಸಾಹಸಿಗಳಾಗುವ ಶಕ್ತಿಯಿರುವವರು ಇರತಕ್ಕ ಜಮೀನನ್ನು ಬಿಟ್ಟುಬರುವುದಕ್ಕಾಗದೆ ಆ ಜಮೀನಿನಲ್ಲಿಯೇ ಇದ್ದು ಆ ಜಮೀನಿನಲ್ಲಿಯೇ ಸಾಯಬೇಕಾಗುತ್ತದೆ. ಆದ್ದರಿಂದ ಈ ರೀತಿಯಾದ ಕಟ್ಟುನಿಟ್ಟಾದ ಕಾನೂನುಗಳನ್ನು ಮಾಡುವುದರಿಂದ ವ್ಯವಸಾಯಗಾರರ ಮಕ್ಕಳು ತಲೆತಲಾಂತರ ವ್ಯವಸಾಯದಲ್ಲೇ ಇರಬೇಕಾಗುತ್ತದೆ. ಸಾಮಾನ್ಯವಾಗಿ ಒಬ್ಬ ವ್ಯವಸಾಯಗಾರನಿಗೆ ಎಂಟು ಎಕರೆ ಜಮೀನಿದ್ದರೆ, ಅವನಿಗೆ ನಾಲ್ಕು ಜನ ಮಕ್ಕಳಿದ್ದರೆ, ಎರಡೆರಡು ಎಕರೆಯಂತೆಯೂ, ಅವರಿಗೆ ಮಕ್ಕಳು ಆದರೆ ಕೊನೆಗೆ ಇಷ್ಟಿಷ್ಟು ಗುಂಟೆಗಳಂತೆಯೂ ಹಂಚಿಕೊಂಡು ಹೋಗಬೇಕಾಗುತ್ತದೆ. ಆದ್ದರಿಂದ ಅಗ್ರಿಕಲ್ಚರಲ್ ಎಕಾನಮಿಯಲ್ಲಿ ಬಹಳ ಬಿಗಿಮಾಡಬಾರದು. ಅದು ಸಡಿಲವಾಗಿರಬೇಕು. ಬೇರೆಬೇರೆ ಉದ್ಯಮಗಳಲ್ಲಿ ಅವರೂ ಸಹ ತೊಡಗುವುದಕ್ಕೆ ಅವಕಾಶವಿರಬೇಕು. ನಮ್ಮಲ್ಲಿರತಕ್ಕ ಜಮೀನನ್ನು ಗುತ್ತಿಗೆಗೆ ಕೊಟ್ಟು ಯಾವಾಗ ನಾಲ್ಕರಲ್ಲಿ ಒಂದುಭಾಗ ಅಥವಾ ಐದರಲ್ಲಿ ಒಂದುಭಾಗವೆಂದು ನಿರ್ಧಾರಮಾಡಿದರೂ ಗುತ್ತಿಗೆದಾರನಿಗೆ ಫಾಯಿದೆಕರವಾಗಿರುವುದಿಲ್ಲ. ನಾವೂ ಸಹಿತ ಬೆಂಗಳೂರಿನಲ್ಲಿ ವ್ಯಾಪಾರಮಾಡುತ್ತೇವೆ, ಅಲ್ಲಿ ಸಂಪಾದನೆಮಾಡುವ ಶಕ್ತಿ ಇರುತ್ತದೆ. ತಾತ್ಕಾಲಿಕವಾಗಿ ಜಮೀನನ್ನು ಗುತ್ತಿಗೆಗೆ ಕೊಟ್ಟಿರುತ್ತೇವೆ. ಇಲ್ಲಿ ಆತ ವ್ಯಾಪಾರದಲ್ಲಿ ಮುಂದುವರಿದರೆ ಇರತಕ್ಕ ಜಮೀನನ್ನು ಮಾರಬಹುದು. ವ್ಯಾಪಾರದಲ್ಲಿ ಮುಂದುವರಿಯದಿದ್ದರೆ ಪುನಃ ವ್ಯವಸಾಯಮಾಡಲು ತನ್ನ ಗ್ರಾಮಕ್ಕೆ ಹೋಗಲೇಬೇಕು. ಅದಕ್ಕೋಸ್ಕರವಾಗಿ ಗೇಣಿದಾರನಿಗೆ ರಕ್ಷಣೆಕೊಡಬೇಕು. ಅಂಥಾದ್ದು ಇರುವಾಗ ಈ small holders ಜಮೀನನ್ನು ಗುತ್ತಿಗೆಗೆಕೊಟ್ಟು ಬೇರೆಬೇರೆ ಉದ್ಯಮಗಳಿಗೆ ಹೋಗುವುದಕ್ಕೆ ಏತಕ್ಕೆ ಪ್ರೋತ್ಸಾಹ ಕೊಡಕೂಡದು ? ದೇಶದಲ್ಲಿ ಇನ್ನೂ ಕೈಗಾರಿಕೆ ಕ್ರಾಂತಿ ಆಗದೇ ಇರುವುದರಿಂದ ಜಮೀನಿನ ಮೇಲೆ ಹೆಚ್ಚು ಜನರಿದ್ದಾರೆ ಇದಕ್ಕೆ ಕಾರಣ ಕೈಗಾರಿಕೆಗಳಲ್ಲಿ ಬೇರೆಬೇರೆ ಉದ್ಯೋಗಗಳು ದೊರೆಯದೆ ಇರುವುದೇ ಆಗಿದೆ. ಆ ರೀತಿಯಾಗುವಾಗ ಜಮೀನನ್ನು ಬಿಟ್ಟು ಅವರೇ ಹೋಗುತ್ತಾರೆ. ಈಗ ವ್ಯವಸಾಯಕ್ಕೆ ಕೊಟ್ಟಿರತಕ್ಕ ಪ್ರೋತ್ಸಾಹ, ಬೇರೆ ಬೇರೆ ಉದ್ಯೋಗಗಳಿಗೆ ಕೊಟ್ಟಿರತಕ್ಕ ಪ್ರೋತ್ಸಾಹ–ಇವನ್ನೆಲ್ಲಾ ನೋಡಿದರೆ ಮುಂದೆ ಸಬ್‌ಫೇಷ ಕೊಟ್ಟು ವ್ಯವಸಾಯಮಾಡಲು ಜನರನ್ನು ಕಳುಹಿಸಬೇಕಾಗಿದೆ. ಗ್ರಾಮವಾಸಿಗಳು ವ್ಯವಸಾಯ ಮಾಡು

(ಶ್ರೀ ಕೆ. ಪುಟ್ಟಸ್ವಾಮಿ)

ವುದೊಂದೇ ಉದ್ಯೋಗವೆಂದು ಆ ಕೆಲಸಕ್ಕೆ ತೊಡಗಿಲ್ಲ. ಬೇರೆಬೇರೆ ಮಾರ್ಗಗಳು ಇಲ್ಲದೆ ವ್ಯವಸಾಯ ಮಾಡುತ್ತಾರೆ. ಈ ದೃಷ್ಟಿಯಿಂದ ಈ ಕಾನೂನನ್ನು ಬಹಳ ಬಿಗಿಯಾದ ಕಾನೂನಿನಂತೆಮಾಡಿ ಗ್ರಾಮಾಂತರದ ಆರ್ಥಿಕ ಸ್ಥಿತಿ ಹೆಚ್ಚು ಬೆಳೆಯುವುದಕ್ಕೆ ಅವಕಾಶ ಮಾಡದೇ ಇರುವುದರಿಂದ ಬಹಳ ಅನಾಹುತವಾಗುತ್ತದೆಂದು ನನ್ನ ಭಾವನೆ.

Sri C. K. RAJAIAH SETTY.—Then you encourage absentee landlordism.

Sri K. PUTTASWAMY.—"Small holder" means a land owner owning land in extent not more than a basic holding for the local area in which such land or the larger part of it is situate, ಎಂದು ಹೇಳಿದೆ. ಸೆಕ್ಷನ್ (19)ರಲ್ಲಿ provision applicable to persons under disability, etc.—"Notwithstanding anything contained in the second proviso to section 18 where the landlord belongs to any one of the following categories, namely :—

(i) a minor, (ii) a widow (iii) a serving member of the armed forces or (iv) a person subject to any physical or mental disability : then the notice under section 18 may be given and such application for possession made, etc."

ಈ ರೀತಿ ಹೇಳಿರುತ್ತದೆ.

Sri KADIDAL MANJAPPA.—Small holder is a person who holds less than a basic holding.

ಶ್ರೀ ಕೆ. ಪುಟ್ಟಸ್ವಾಮಿ.—Small holder ಎನ್ನುವ ಡೆಫಿನಿಷನ್ನನ್ನು ಬೇಸಿಕ್ ಹೋಲ್ಡಿಂಗಿಗಿಂತ ಕಡಮೆ ಎಂದು ಮಾಡುವುದಕ್ಕೆ ಬದಲು ಫ್ಯಾಮಿಲಿ ಹೋಲ್ಡಿಂಗಿಗಿಂತ ಕಡಮೆ ಇರುವವನು ಎಂದು ಮಾಡಬೇಕೆಂದು ನಾನು ಸೂಚನೆಮಾಡುತ್ತೇನೆ.

ಈ ವಿಚಾರವನ್ನು ಪ್ರಸ್ತಾಪಮಾಡುವಾಗ ಕೆಲವು ಮಾನ್ಯಸದಸ್ಯರು ಆಬ್‍ಸೆಂಟೀ ಲ್ಯಾಂಡ್ ಲಾರ್ಡಿಗೆ ಈ ಕಾನೂನನ್ನು ಅನ್ಯಾಯಮಾಡಿ ಎಂದು ಹೇಳಿದರು. ನಾನು ಅವರ ಪರವಾಗಿ ವಾದ ಮಾಡುತ್ತಿಲ್ಲ. ಫ್ಯಾಮಿಲಿ ಹೋಲ್ಡಿಂಗಿಗಿಂತ ಕಡಮೆ ಇರುವ ಜಮೀನನ್ನು ಅವರು ಗುತ್ತಿಗೆಗೆ ಕೊಡಬಹುದು ಎಂದು ನಾನು ಹೇಳುತ್ತೇನೆ. ಯಾವುದು ಸ್ಮಾಲ್ ಎಂಬುದನ್ನು ಯೋಚನೆಮಾಡುತ್ತಿದ್ದಾರೆ. ಅದರಮೇಲೆ ಇದೆ. ಅದಕ್ಕಾಗಿಯೇ ಕೆಲವು ಕಲ್ಟಿವೇಟರ್ಸ್ ಕೂಡ ಅಂತಹ ಫ್ಯಾಮಿಲಿ ಹೋಲ್ಡಿಂಗ್ಸನ್ನು ಲೀಸ್ ಮಾಡಬಹುದು. ತಾನು ಜಮೀನನ್ನು ಗುತ್ತಿಗೆಗೆ ಕೊಟ್ಟು ಬೇರೆಬೇರೆ ಸ್ಥಳದಲ್ಲಿ ಹೋಗಿ ಉದ್ಯೋಗದಲ್ಲಿದ್ದು ಅಲ್ಲಾದರೂ ಜಯಶೀಲನಾಗಿ ಉಳಿದುಕೊಳ್ಳುತ್ತಾನೋ ಇಲ್ಲವೋ ಎಂಬುದನ್ನು ನೋಡಬೇಕು. ಇಲ್ಲದಿದ್ದರೆ ವ್ಯವಸಾಯ ಮಾಡಲು ಹಿಂದಕ್ಕೆ ಬರುವುದಕ್ಕೆ ಅವನಿಗೆ ಅವಕಾಶ ಇರಬೇಕು.

5 P.M.

20ನೆಯ ಕ್ಲಾಜಿನಲ್ಲಿ ಗೇಣಿಯಲ್ಲಿರುವ ಜಮೀನನ್ನು ಯಾವರೀತಿ ಎಷ್ಟಿದ್ದರೆ ಬಿಡಿಸಿಕೊಳ್ಳಬಹುದು ಎಂಬುದು ನಮೂದಿಸಲ್ಪಟ್ಟಿವೆ. ಬೇಸಿಕ್ ಹೋಲ್ಡಿಂಗ್‍ಗಿಂತ ಕಡಮೆಯಿರುವಾಗ ಪೂರ್ಣವಾಗಿ ಬಿಡಿಸಿಕೊಳ್ಳುವುದಕ್ಕೆ ಅವಕಾಶವಿದೆ. ಹಾಗೆ ಬಿಡಿಸಿಕೊಳ್ಳಬೇಕಾದರೆ ಒಂದು ಕಂಡೀಷನ್ ಪರಿಹಾರ ಮಾಡಬೇಕು. ಹತ್ತನೆಯ ಕಂಡೀಷನ್ ಪ್ರಕಾರ ಜಮೀನು ಬಿಡಿಸಿಕೊಳ್ಳುವುದಕ್ಕೆ ಅದರ ಉತ್ಪತ್ತಿಯಿಂದಲೇ ಜೀವನಮಾಡುತ್ತಿರಬೇಕು ; ಇಲ್ಲದಿದ್ದರೆ ಅವಕಾಶವಿಲ್ಲ. 400 ರೂಪಾಯಿಗಳ ನಿವ್ವಳ ಆದಾಯಬರುವ ಜಮೀನು ಬೇಸಿಕ್ ಹೋಲ್ಡಿಂಗ್. ಆ ಜಮೀನು ಬಿಡಿಸಿಕೊಳ್ಳಬೇಕಾದರೆ, 400 ರೂಪಾಯಿಗಳಿಗಿಂತ ಕಡಮೆ ಉತ್ಪತ್ತಿ ತೋರಿಸಬೇಕಾದರೆ ಏನೂ ಉದ್ಯೋಗವಿಲ್ಲ, ಕೂಲಿಮಾಡುವ ಶಕ್ತಿಕೂಡ ಇಲ್ಲ ಎಂದು ತೋರಿಸಬೇಕಾಗಿದೆ. ಈ ಕಂಡೀಷನ್ ಹೀಗೆಯೆ ಇದ್ದರೆ ಪರಿಣಾಮವೇನೆಂದು ನೋಡಬೇಕು. ಜನರು ತಮಗಿರುವ ಜಮೀನಿನಲ್ಲಿ ಅಲ್ಪಸ್ವಲ್ಪ ಬಿಡಿಸಿಕೊಳ್ಳುವುದಕ್ಕೆ, ಪರ್ಸನಲ್ ಕಲ್ಟಿವೇಷನ್ನಿಗೆ ಅವಕಾಶಮಾಡಬೇಕು. ಅದರ ಜೊತೆಗೆ ಹತ್ತನೆಯ ಸಬ್-ಕ್ಲಾಜಿನಲ್ಲಿರುವ ತೊಂದರೆಯನ್ನು ಕೂಡ ಪರಿಹಾರಮಾಡಬೇಕು; ಇಲ್ಲದಿದ್ದರೆ ಕಷ್ಟ. ಈಗ ಕೋರ್ಟುಗಳಲ್ಲಿ ಹೋಗಿ ರುಜುವಾತು ಕೊಡಬೇಕಾಗುತ್ತದೆ. ತನಗೆ ಬೇಸಿಕ್ ಹೋಲ್ಡಿಂಗ್‍ಗಿಂತ ಇಷ್ಟು ಕಡಮೆಯಿದೆ ಅಥವಾ ಫ್ಯಾಮಿಲಿ ಹೋಲ್ಡಿಂಗ್‍ಗಿಂತ ಕಡಮೆಯಿದೆ, ಆದುದರಿಂದ ಕಾನೂನು ಪ್ರಕಾರ ಇಷ್ಟು ಜಮೀನು ಬಿಡಿಸಿಕೊಳ್ಳುವುದಕ್ಕೆ ಅವಕಾಶವಿದೆ ಎಂದು ಹೇಳಿದರೆ ಸಾಲದು. ಇನ್ನೊಂದು ವಿಷಯವೇನೆಂದರೆ, ಇದರ ಪ್ರಕಾರ ಈ ಜಮೀನಿನಲ್ಲಿ ಬರುವ ಉತ್ಪತ್ತಿಯೇ ಪ್ರಿನ್ಸಿಪಲ್ ಸೋರ್ಸ್ ಆಫ್ ಇನ್‍ಕಂ, ಅದೇ ಮುಖ್ಯ ಆದಾಯ, ಬೇರೆ ಆದಾಯ ತನಗಿಲ್ಲ ಎಂದು ಸ್ಪಷ್ಟಪಡಿಸಬೇಕು. ಕೋರ್ಟುಗಳಲ್ಲಿ ವಾದವಿವಾದಗಳಿಗೆ ಸಾಕ್ಷಿಗಳನ್ನು ಒದಗಿಸಬೇಕಾಗುತ್ತದೆ. ಇದು ಅನಾವಶ್ಯಕವಾದ ತೊಂದರೆಯನ್ನುಂಟುಮಾಡುವುದಕ್ಕೆ ಕಾರಣವಾಗುತ್ತದೆ. ಆದುದರಿಂದ ಈ ಕಂಡೀಷನ್ ತೆಗೆದುಹಾಕಬೇಕೆಂದು ನಾನು ಹೇಳುತ್ತೇನೆ.

ಸರ್ಕಾರ ಈ ಮಸೂದೆಯನ್ನು ಸಭೆಯ ಮುಂದೆ ಇಡುವಾಗ ಕೆಲವು ವಿಚಾರಗಳನ್ನು ವಿಶದೀಕರಿಸಲಿಲ್ಲವಾದುದರಿಂದ ಮುಂದೆ ಅನಿಶ್ಚಿತ ಪರಿಸ್ಥಿತಿಯನ್ನುಂಟುಮಾಡುವುದಕ್ಕೆ ಅವಕಾಶವಾಗಿದೆ. ಎರಡನೆಯ ಸೆಕ್ಷನ್ನಿನ 13ನೆಯ ಸಬ್-ಸೆಕ್ಷನ್ನಿನಲ್ಲಿ fragment ಎಂಬುದನ್ನು ಡಿಫೈನ್ ಮಾಡಿದ್ದಾರೆ. ಬೆಳಗಾಂ, ಧಾರವಾಡ, ಬಿಜಾಪುರ ಮತ್ತು ನಾರ್ತ್ ಕೆನರಾದಲ್ಲಿ ಬೊಂಬಾಯಿನ ಆಕ್ಟ್ ಜಾರಿಯಲ್ಲಿದೆ, ಆದುದರಿಂದ ಅಲ್ಲೇನೂ ತೊಂದರೆಯಿಲ್ಲ. ಆ ಅರ್ಥವನ್ನೇ ಇಲ್ಲಿ ಕಲ್ಪನೆಮಾಡಿಕೊಳ್ಳಬೇಕು ಸಬ್-ಸೆಕ್ಷನ್ (6)ನಲ್ಲಿರುವ ಪ್ರಕಾರ ಸರ್ಕಾರದವರು ಯಾವುದು fragment ಎಂದು ಘೋಷಿಸಲು ನಿರ್ದಿಷ್ಟವಾದ ಅಧಿಕಾರವನ್ನಿಟ್ಟುಕೊಂಡಿದ್ದಾರೆ. ಇದೇಕೆ? Fragment ಎಂಬುದಕ್ಕೆ ಡೆಫಿನಿಷನ್ ಇರಬೇಕು ಅಥವಾ ಬೆಳಗಾಂ, ಧಾರವಾಡಗಳಲ್ಲಿರುವ ಬೊಂಬಾಯಿ ಆಕ್ಟಿನ ಡೆಫಿನಿಷನ್ ಏನಿದೆ ಅದೇ ಇರಬಹುದು. ಅಥವಾ ಆ ಡೆಫಿನಿಷನ್ ಈ ಪ್ರಾಂತಗಳಿಗೆ ಸಮರ್ಪಕವಾಗಿ ಹೊಂದುವುದಿಲ್ಲ, ಬೇರೆ ಪ್ರಾಂತಗಳಲ್ಲಿ ಫ್ರಾಗ್ಮೆಂಟ್ ಎಂದರೆ ಇಷ್ಟಿರಬೇಕು ಎಂದು ತೀರ್ಮಾನಮಾಡಬೇಕು. ಏಕೆಂದರೆ ಫ್ರಾಗ್ಮೆಂಟ್ ಎಂಬುದರ ಅರ್ಥವನ್ನು ನಿರ್ದಿಷ್ಟವಾಗಿ ತಿಳಿಸಬೇಕಾದದ್ದು ಅಗತ್ಯವಾಗಿದೆ. ಈ

ಮಸೂದೆಯಲ್ಲಿ ಅನೇಕ ಕಡೆ ಫ್ರಾಗ್ಮೆಂಟಾದಾಗ ಏನು ಮಾಡಬೇಕೆಂಬುದನ್ನು ಸ್ಪಷ್ಟಪಡಿಸಿಲ್ಲ. ಕೆಲವು ಸಾರಿ ಜಮೀನುದಾರರಿಗೆ ಅಥವಾ ಗೇಣಿದಾರರಿಗೆ ಫ್ರಾಗ್ಮೆಂಟ್ ಕೊಡಬೇಕಾಗುತ್ತದೆ. ಆದುದರಿಂದ ಫ್ರಾಗ್ಮೆಂಟ್ಸ್ ಎಂಬುದರ ಅರ್ಥವನ್ನು ವಿಶದೀಕರಿಸಿದ್ದರೆ ಬಹಳ ಚೆನ್ನಾಗಿತ್ತು ಎಂದು ನನಗಾದರೂ ಅನ್ನಿಸುತ್ತದೆ.

ಮಾನ್ಯ ಸದಸ್ಯರನೇಕರು ವಿನಾಯಿತಿಯನ್ನು ಕೊಡುವುದರಲ್ಲಿ ಸರ್ಕಾರದವರು ಈ ಮಸೂದೆಯಲ್ಲಿ ಜತ್ತಿ ಸಮಿತಿವರದಿಯಲ್ಲಿ ಅಡಕವಾಗಿರುವುದಕ್ಕಿಂತ ಮುಂದೆಹೋಗಿ ಕೆಲವನ್ನೆಲ್ಲಾ ಸೇರಿಸಿದ್ದಾರೆ, ತೆಂಗು ಇವೆಲ್ಲ ಖುದ್ದು ಸಾಗುವಳಿಯಲ್ಲಿದ್ದರೆ ಅವು ಯಾವುದಕ್ಕೂ ಅಡ್ಡಿಮಾಡಬಾರದು ಎಂದು ಹೇಳಿದ್ದಾರೆ ಎಂದು ಹೇಳಿದರು. ಹಾಗಿಲ್ಲದೆ ಅದು ಗೇಣಿಯಲ್ಲಿದ್ದರೆ ಅದಕ್ಕೇಕೆ ಅನ್ವಯಮಾಡಬಾರದು ? ಈ ಒಂದು ಬಾಬಿನಲ್ಲಿ ಇದು ಅಷ್ಟು ಪ್ರಗತಿ ಪರವಾಗಿಲ್ಲ ಎಂದು ಅನೇಕ ಸದಸ್ಯರು ಹೇಳಿದ್ದಾರೆ. ಇದನ್ನು ನಾನೂ ಕೂಡ ಸಮರ್ಥಿಸುತ್ತೇನೆ.

Sri KADIDAL MANJAPPA.—But the tenant will get all the rights which the other tenants are getting.

ಶ್ರೀ ಕೆ. ಪುಟ್ಟಸ್ವಾಮಿ.—ಇಷ್ಟು ಹೇಳಿ ಸಾಧಾರಣವಾಗಿ ಇಲ್ಲಿರುವ scheme of the Act ಏನಿದೆ ಅದಕ್ಕೆ ನನ್ನ ಸಮ್ಮತಿಯಿದೆ. ಅಲ್ಲಲ್ಲಿ ಕೆಲವು ತಿದ್ದುಪಡಿಗಳು ಆವಶ್ಯಕ, ಅವನ್ನು ಮಾಡಬೇಕಾದಾಗ ಈ ಸಭಾಸದರ ಅಭಿಪ್ರಾಯವನ್ನು ಗಮನಿಸಿ ಸೆಲೆಕ್ ಕಮಿಟಿಯವರು ಮಾಡುತ್ತಾರೆಂಬ ನಂಬಿಕೆಯಿದೆ ಎಂದು ಆ ದೃಷ್ಟಿಯಿಂದ ಈ ಮಸೂದೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

Smt. V. V. MIRJANKAR (Kumta).—Mr. Speaker, Sir, I rise to make a few observations on the Bill before the House. The main principles laid down in this Bill aim at safeguarding the interests of the tenants as well as of those who are cultivating lands personally with the ultimate aim of making the tiller the owner of the soil. It is no doubt an admitted fact that the agricultural labourers are mostly backward and usually exploited by the land-lords taking advantage of the illiteracy and ignorance prevailing among them.

I shall now deal only with some salient features of this Bill. Since it is going to a Joint Select Committee, I am of the opinion that certain of the provisions in this Bill deserve serious consideration so as to make it a more progressive one.

Since the formation of Greater Mysore, several Acts have been passed and uniform laws have been enforced throughout the State, but on going through this Bill I feel that there is no uniformity in fixation of rent, ceiling limit and compensation. In clause 5, the lands other than lands under plantation crops are classified under three categories whereas no mention has been made of khar lands in the whole of this Bill. I feel that khar lands should also be incorporated in this clause under category (*d* . These khar lands, as you all know, are mostly fertile lands which need hardly any manuring except for the maintenance of protective bunds. Hence I feel that most of the provisions of this Bill are harmful to the khar land cultivators and so I am compelled to say that this Bill has been rather hastily drawn up. I am sure the Hon'ble the Revenue Minister is fully aware of the difficulties and problems of these lands and I feel that he would give a careful thought to it and rectify the defects pointed out by me. Coming to clause 11 *proviso* to (*b*), I should like to point out that in Belgaum Division the rent paid by the tenant to the land lord is Rs. 20 per acre or five times the assessment whichever is less. I feel that there is no uniformity in fixation of rent. In evolving a uniform structure for the fixation of rent, it is quite necessary to clear the vague fear and uncertainty prevailing in the minds of the people of that area. Well, Sir, I do not think the Planning Commission, not the Central Land Reforms Committee, will in any way object to this suggestion of extending the same rent as is prevailing in Bombay area to the whole of the State.

Sri KADIDAL MANJAPPA.—They will agree provided this House agrees.

Smt. V. V. MIRJANKAR.—Hence, I feel that this proviso should be deleted and a uniform procedure should be brought in.

Coming to clause 12 (2), I find that only the principal crop is taken into consideration whereas other subsidiary crops are not. Here again, I must make reference about khar lands. Fish breeding is carried on on a large scale and it brings in a good amount of income to the tenant and this gives more income than is derived by agriculture and thus it is practically neglected. Hence I feel that the other crops also should be taken into

(SMT. V. V. MIRJANKAR)

consideration and the standard yield per acre should also be fixed taking into consideration the fertility of the soil and other conditions, failing which the land my be resumed by the Government or by the landlord.

Sri C. J. MUCKANNAPPA.—Is fish also a crop ?

Sri C. K. RAJAIAH SETTY.—It is not defined as agricultural income.

Smt. V. V. MIRJANKAR.—What I mean is they are neglecting the cultivation of these lands. That is why I said that standard yield per acre should be fixed.

The principle underlying here should be mainly to step up food production and there should be some legal binding on the part of cultivator also. The agreement between the landlord and the tenant should be executed in the presence of an officer not below the rank of a Thasildar to avoid unnecessary difficulties.

Coming to Clause 20, it clearly defines the ability and eligibility of a person resuming the land for self-cultivation. Sub-clause 10 seems to be unnecessary as it can be interpreted in any way. Under this provision, the landlord has to convince the authorities that it is the principal source of income for his maintenance. It also amounts to a matter of opinion and I am of opinion that such an ambiguous clause should be deleted and such loopholes should be avoided in this Bill.

Clause 35: In the existing Tenancy Act as in force in Belgaum Division, the landlord is entitled only for the rent. I have already referred to this aspect earlier in my speech, and as such, he is not entitled to pay contribution towards maintenance or repair of bunds, nor is he responsible for the cost incurred by the tenant. So whatever expenditure is incurred should be recovered from the person in actual possession of the land and it should not be recovered as an arrear of land revenue from the land-lord.

The responsibility of the land-lord should also be reduced to the barest minimum in this respect. This will give incentive for the tenant to cultivate his lands and step-up food production.

Sir, many have dealt more elaborately over this clause, clause 51, regarding the payment of compensation to the small holders. I also feel that the small land holders should be paid compensation at market value and it should be treated altogether on a different footing.

Sir, I feel that clause 68 (e) is much against the principles of this Bill. This clause safeguards the interests of the big land-lords and gives ample scope for the land-lords to take shelter under this clause. The authority who would assess these farms as well and efficiently managed can very well be influenced in one way or the other and hence it will only lead to corruption. Hence, I would caution that the Joint Select Committee to which this Bill is going to be referred, will delete this sub-clause.

Coming to the Plantation crops, it is defined as including rubber, tea, coffee and cardamom and pepper and areca. I feel that cashew should also be included as plantation crop and the ceiling should be fixed at 25 acres in respect of cashew also.

Coming to clause 140, I would like to say that this clause should also be modified in favour of educational and charitable institutions. These institutions should be exempted from the operation of this Act if possible. As it is the main source of income for them, it will go hard for such institutions to survive. Since the Constitution also guarrantees religious rights, I feel that this concession should be given to them.

Thank you.

ಶ್ರೀ ಬಿ. ಜಿ. ಖೋತ್ (ಸದಲಗಾ).—ಮಾನ್ಯ ಅಧ್ಯಕ್ಷರೇ, ಬಹಳ ದಿವಸಗಳಿಂದ ಪ್ರತೀಕ್ಷೆಮಾಡುತ್ತಿದ್ದ ಈ ಭೂಸುಧಾರಣೆಯು ಮಸೂದೆ ಈ ಸಭಾಗೃಹದಲ್ಲಿ ಚರ್ಚೆಗೆ ನಮ್ಮ ಮುಂದೆ ಈಗ ಇಡಲ್ಪಟ್ಟಿದೆ. ಈ ಭೂಸುಧಾರಣೆಯು ನಮಗೇನೂ ಹೊಸ ವಿಷಯವಲ್ಲ. ಸ್ವಾತಂತ್ರ್ಯ ಪ್ರಾಪ್ತಿಯ ಪೂರ್ವದಲ್ಲಿ ಅಂದರೆ 1933 ರಲ್ಲಿ Indian National Congress ಭೂಸುಧಾರಣೆಯ ಬಗ್ಗೆ ಠರಾವು ಪಾಸ್‌ಮಾಡಿದೆ ಅದಾದನಂತರ ಅಂದರೆ ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಕಾಂಗ್ರೆಸ್ಸಿನವರು ಒಂದು Agrarian Reforms Committee ಎಂದು ರಚಿಸಿದ್ದರು. ನಮ್ಮ ದೇಶದಲ್ಲಿ Agrarian Reforms ಯಾವ

ಪ್ರಕಾರದ್ದಿರಬೇಕು ಎನ್ನುವುದಕ್ಕೆ ಆ ಕಮಿಟಿಯವರು 1949ನೆಯ ಇಸವಿಯಲ್ಲಿ ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ.

1933ರಿಂದ 1949ರ ವರೆಗೆ ಈ ಎರಡು ಮಧ್ಯ ಕಾಲದಲ್ಲಿ 1938ರ ಸುಮಾರಿಗೆ ಕೆಲವು ಭಾಗದಲ್ಲಿ ಕಾಂಗ್ರೆಸ್ ರಾಜ್ಯದ ಆಡಳಿತವನ್ನು ನಡೆಸುವುದಕ್ಕೆ ಪ್ರಾರಂಭವಾಡಿತ್ತು. ಆ ರೀತಿ ಆಡಳಿತ ನಡೆಸುವ ಕಾಲಕ್ಕೆ ಈ ಭೂಸುಧಾರಣೆ Agrarian Reforms ಬೇಕು ಎನ್ನುವ ಪರಿಣಾಮಕ್ಕನುಸರಿಸಿ ಅಥವ ಕಾಂಗ್ರೆಸ್ ಠರಾವಿಗನುಸರಿಸಿ, ಅವರು ಏನೊಂದು ತರಹದ ನಿರ್ಣಯ ತೆಗೆದುಕೊಂಡರೋ, ಈ ಭೂಸುಧಾರಣೆ ಯಾವ ರೀತಿ ಆದರೆ ಭೂಸುಧಾರಣೆಯಾಗುತ್ತದೆ ಎಂದು ಅಭಿಪ್ರಾಯ ಪಟ್ಟರೋ, ಅದಕ್ಕನುಸಾರವಾಗಿ ಒಂದು ಯೋಜನೆ ಮಾಡಿದರು. ಆ ಯೋಜನೆ ಪ್ರಕಾರ ಎಲ್ಲ ಸ್ಟೇಟುಗಳಲ್ಲೂ ಟೆನೆನ್ಸಿ ಆಕ್ಟ್ ಪಾಸ್ ಮಾಡಿದರು. ಆ ಪ್ರಕಾರ Bombay State ನಲ್ಲಿಯೂ 1938ಕ್ಕೇ ಟೆನೆನ್ಸಿ ಆಕ್ಟ್ ಪಾಸ್ ಆಗಿ ಅಲ್ಲಿಂದ ಈ ಅಗ್ರೇರಿಯನ್ ರಿಫಾರ್ಮಿನ ಪ್ರೋಗ್ರಾಂ ನಡೆದುಕೊಂಡು ಬಂದಿದೆ. 1938ರಿಂದ ಇಲ್ಲಿಯ ತನಕ ಈ 20 ವರ್ಷದೊಳಗೆ ಟೆನೆನ್ಸಿ ಆಕ್ಟ್ ಬಾಂಬೇ ಏರಿಯಾದಲ್ಲಿ ಜಾರಿಯಲ್ಲಿದೆ. ಅದೇ ಪ್ರಕಾರ, Re-organise ಆದನಂತರ ಮೈಸೂರು ಸಂಸ್ಥಾನದಲ್ಲಿ ಭೂಸುಧಾರಣೆ ಯಾವ ರೀತಿ ಆಗಬೇಕೆಂಬುದನ್ನು ಪರಿಶೋಧನೆಮಾಡಲು ಮೈಸೂರು ಸರ್ಕಾರದವರು ಜತ್ತಿ ಸಮಿತಿಯನ್ನು ನೇಮಕ ಮಾಡಿದರು. ಆ ಸಮಿತಿಯವರು ಎಲ್ಲ ವಿಷಯಗಳನ್ನೂ ಪರಿಶೋಧ ಮಾಡಿ ತಮ್ಮ ವರದಿಯನ್ನು ಕೊಟ್ಟರು. ಅದರಲ್ಲಿ ಎರಡು ಮುಖ್ಯವಾದ ಉದ್ದೇಶಗಳನ್ನು ತಿಳಿಸಿದ್ದಾರೆ. ಅಗ್ರಿಕಲ್ಚರಲ್ ಪ್ರೊಡಕ್ಷನ್ ಹೆಚ್ಚಾಗಬೇಕು ಮತ್ತು ಎಕನಾಮಿಕ್ ಜಸ್ಟಿಸ್ ಎಲ್ಲರಿಗೂ ಸಿಕ್ಕಬೇಕು. ಇದಾಗಬೇಕಾಗಿದ್ದರೆ ಅವರು ಸೂಚನೆಮಾಡಿರುವುದರಲ್ಲಿ ಉಪಾಯಗಳೆಂದರೆ, elimination of the relationship between the land-lords and the tenants ಒಂದುಭಾಗ, ಎರಡನೆ ಭಾಗ ಅಂದರೆ lands to the landless. ಈ ಎರಡು ಭಾಗಗಳಿಂದ ನಾವು ಈ ವಿಷಯವನ್ನು ನೋಡಬೇಕು. ಈ ಎರಡು ಉಪಾಯಗಳಿಂದ ಅಗ್ರಿಕಲ್ಚರಲ್ ಪ್ರೊಡಕ್ಷನ್ ಹೆಚ್ಚಾಗುತ್ತದೆಯೇ ಹೇಗೆ? 1938 ರಿಂದ 1958 ಈ ಇಪತ್ತು ವರ್ಷದ ಕಾಲದಲ್ಲಿ ಏನಾಗಿದೆ, ಟೆನೆನ್ಸಿ ಆಕ್ಟ್ ಲಾಗು ಆಯಿತು. ಲಾಗು ಆದಮೇಲೆ ಅಗ್ರಿಕಲ್ಚರಲ್ ಪ್ರೊಡಕ್ಷನ್ ಹೆಚ್ಚಾಗಿದೆಯೇ ಇಲ್ಲವೇ ಎಂಬುದು ಮುಖ್ಯವಾಗಿ ವಿಚಾರಮಾಡುವಂಥ ಮಾತಾಗಿದೆ. ಜತ್ತಿ ಸಮಿತಿಯವರ ವರದಿ ಬಂದಾಗ ಈ ವಿಷಯದಮೇಲೆ ಏನು ಹೇಳಬೇಕೋ ಅದನ್ನೆಲ್ಲಾ ಹೇಳಿ ನಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾಗಿದೆ. ಪುನಃ ಹೇಳಿದನ್ನೇ ಹೇಳಬೇಕಾಗಿಲ್ಲ. ವಿಷಯವೆಲ್ಲಾ ಚರ್ವಿತಚರ್ವಣವಾಗಿ ಚರ್ಚೆಯಾಗಿದೆ. ಆದ್ದರಿಂದ ಪುನಃ ಪುನಃ ಹೇಳಬೇಕಾದ ಅಗತ್ಯ ಇಲ್ಲವೆಂದು ತಿಳಿದು ಈಗ ಒಂದೆರಡು ವಿಷಯಗಳನ್ನು ಸಂಕ್ಷೇಪವಾಗಿ ಹೇಳುತ್ತೇನೆ. There are two main sources for agricultural production. Agricultural production solve ಆದರೆ food problem solve ಆಗ Industrial production ಸಹ ಹೆಚ್ಚು ಆಗುತ್ತದೆ. ಆದ್ದರಿಂದ ಅಗ್ರಿಕಲ್ಚರಲ್ ಪ್ರೊಡಕ್ಷನ್ increase ಆಗಬೇಕು. Increased production ಆಗ ಬೇಕಾದರೆ there are two main sources for agricultural production ಅವು ಯಾವುವೆಂದರೆ ಒಂದು Extensive Cultivation, ಇನ್ನೊಂದು Intensive Cultivation ಎಕ್ಸ್‌ಟೆನ್ಸೀವ್ ಕಲ್ಟಿವೇಷನ್ ಆಗಬೇಕಾದರೆ ಪ್ರಥಮತಃ ಸರ್ಕಾರದ ವಶದಲ್ಲಿ ಎಷ್ಟು cultivable lands ಇವೆಯೋ ಆ ಎಲ್ಲಾ ಭೂಮಿಯನ್ನೂ ಯಾರಿಗೆ ಭೂಮಿ ಇಲ್ಲ ಎಂದು ಹೇಳುತ್ತಾರೆ ಅವರುಗಳಿಗೆಲ್ಲಾ ಆದಷ್ಟು ಕಡಮೆಬೆಲೆಗೆ ಕೊಡಿರಿ. ಇಲ್ಲಾ, ಪುಕ್ಕಟ್ಟೆಯಾಗಿ ಕೊಡಿರಿ. ಭೂಕಂದಾಯ ಬಿಡಿರಿ ಮತ್ತು ಅದನ್ನು ಸಾಗಮಾಡಲಕ್ಕೆ ಎಲ್ಲಾ ಅನುಕೂಲಮಾಡಿ ಕೊಡಿರಿ. ಯಾರಿಗೆ ಅದರಿಂದ ಪ್ರಯೋಜನವಾಗುತ್ತದೆಯೋ ಅವರು ಹೋಗಿ ಆ ಜಮೀನಿನಲ್ಲಿ ಸಾಗುವಳಿಮಾಡಲಿ. ಒಂದುವೇಳೆ ಅವರು ಹಾಗೆ ಮಾಡಲಿಕ್ಕೆ ತಯಾರಾಗಿಲ್ಲ ಎಂದು ಕಂಡುಬಂದ ಪಕ್ಷದಲ್ಲಿ ಅವರ ದೆಶೆಯಿಂದ ಏನುಮಾಡಬೇಕು ಎಂದರೆ ಪ್ರತಿ ರೂರಲ್ ಏರಿಯಾದೊಳಗಿನ ಒಂದೊಂದು ಕೇಂದ್ರದಲ್ಲಿ ಇಂಡಸ್ಟ್ರಿಯಲ್ ಎಸ್ಟೇಟನ್ನು set-up ಮಾಡಿರಿ. ಇಂಡಸ್ಟ್ರಿಯಲ್ ಎಸ್ಟೇಟ್ set up ಮಾಡಿ ಅದಕ್ಕೆ ಅಲ್ಲಿ ಎಲ್ಲ ತರದ ಅನುಕೂಲತೆ ಮಾಡಿಕೊಟ್ಟು ಭೂಮಿ ಇಲ್ಲದವರಿಗೆ ಭೂಮಿಯನ್ನು ಕೊಟ್ಟು ವ್ಯವಸಾಯ ಉತ್ಪನ್ನ ಮಾಡುವ ಹಾಗೆ ಮಾಡಿರಿ. ಈ ರೀತಿ ಏರ್ಪಾಡುಮಾಡಿ ಎಕ್ಸ್‌ಟೆನ್ಸೀವ್ ಕಲ್ಟಿವೇಷನ್‌ಮಾಡಿ. ಇದು ಒಂದು ರೀತಿ. ಇನ್ನು ಇನ್‌ಟೆನ್ಸೀವ್ ಕಲ್ಟಿವೇಷನ್ ಎಂದರೆ, ವ್ಯವಸಾಯ ಮಾಡುವ ದೆಶೆಯಿಂದ increased production ಆಗಬೇಕಾದರೆ, Extensive cultivationಗೆ ಹೇಗೆ ಮಹತ್ವ ಇದೆಯೋ ಅದೇ ರೀತಿ ಇದಕ್ಕು ಮಹತ್ವ ಇದೆ. ವ್ಯವಸಾಯಗಾರರಿಗೆ ವ್ಯವಸಾಯಕ್ಕೆ ಮೂಲವಾಗಿ ಇರಬೇಕಾದದ್ದು ಎಂದರೆ ಒಂದನೆಯದು ಭೂಮಿ, ಎರಡನೆಯದು ದನ ಕರ. ಇವೆರಡೂ ಮುಖ್ಯ ವಿಷಯ. ಇದು ಇಲ್ಲದ ಹೊರತು ಜಗತ್ತಿನಲ್ಲಿ ಯಾವುದೇ ವ್ಯವಸಾಯಗಾರರು ವ್ಯವಸಾಯ ಮಾಡುವುದಕ್ಕೆ ಶಕ್ಯವಿಲ್ಲ. ಭೂಮಿ, ದನ ಕರ ಇವೆರಡರ ಹೊರತು ಬಾಕಿಯದೆಲ್ಲಾ ಅವಶ್ಯವಿದ್ದರೂ secondary ಎಂದು ಅನಿಸುತ್ತವೆ. ಅಂಥ ಭೂಮಿ ಸಾಗುವಾಡಿರಿ ಮತ್ತು live Stock—ದನ ಕರ ಇವುಗಳ ಅಭಿವೃದ್ಧಿಮಾಡಿರಿ. Slaughter houses ಬಂದ ಮಾಡಿರಿ. ಒಂದೊಂದು ತಾಲ್ಲೂಕು ಅಥವಾ ಡಿಸ್ಟ್ರಿಕ್ಟು ಮಟ್ಟದ ಏರಿಯಾದೊಳಗೆ ಒಂದೊಂದು ಕೇಂದ್ರವನ್ನು ತೆಗೆದು ಅಲ್ಲಲ್ಲಿ shed ಹಾಕಿ ಸರ್ಕಾರದ ಸೇವಕರನ್ನು ಇಟ್ಟು ಎಲ್ಲೆಲ್ಲಿ ನಿರುಪಯೋಗೀ ದನಗಳು ಇವೆಯೋ ಅವನ್ನೆಲ್ಲಾ ಒಂದು ಕಡೆ ಕೂಡಿ ಹಾಕಿ ಜೋಪಾನಮಾಡಿರಿ. ಅದರಿಂದ ಹೊರಡತಕ್ಕ ಗೊಬ್ಬರ ಏನಿದೆ ಅದನ್ನು ವ್ಯವಸಾಯಕ್ಕೆ ಉಪಯೋಗಮಾಡಿರಿ. ಈಗ ಹಾಗೆ ಮಾಡದೇ ಅದಕ್ಕೆ ತದ್‌ವಿರುದ್ಧವಾಗಿ ಏನುಮಾಡುತ್ತಾ ಇದ್ದೀರಿ ಎಂದರೆ ಒಕ್ಕಲಿಗನಿಗೆ ಮೂಲ ಆಧಾರವಾಗಿರತಕ್ಕ ದನಕರ ಸಂಪತ್ತು ಈಗ ಯಾವುವು ಬೇಡವಾಗಿವೆಯೋ ಅವನ್ನೆಲ್ಲಾ ವಧೆ ಮಾಡುತ್ತಿದ್ದೀರಿ. ಇದು ಹಿಂದೂಸ್ಥಾನದ ಹೈರಣ. ಇದನ್ನು ಬಂದುಮಾಡಿರಿ. Cattle manure ಏನಿದೆ ಅದರಿಂದ ಭೂಮಿ ಕಸವು fertile ಹೆಚ್ಚಾಗುವಷ್ಟು ಮತ್ತು ಹೆಚ್ಚುಕಾಲ ತಾಳುವಷ್ಟು ಮತ್ತೆ ಬೇರೆ ಯಾವ ವಿಧವಾದ ಫರ್ಟಿಲೈಸರ್ಸನಿಂದಲೂ ಕೂಡ ಆಗುವುದಿಲ್ಲ. ಆದ್ದರಿಂದ ವ್ಯವಸಾಯಕ್ಕೆ ಮುಖ್ಯವಾಗಿ ಬೇಕಾದ ಈ Live stock ಅನ್ನು ಹೆಚ್ಚುಮಾಡಿರಿ.

5-30 P.M.

Live-stock ಹೆಚ್ಚುಮಾಡುವುದರ ಜೊತೆಗೆ ನೀರಾವರಿ ಸೌಲಭ್ಯವಾಗಲಿ, ವಿದ್ಯುಚ್ಛಕ್ತಿಯಾಗಲಿ,

(ಶ್ರೀ ಬಿ. ಜಿ. ಜೋಶಿ)

implements ಆಗಲಿ, ಫೈನಾನ್ಸ್ ಆಗಲಿ, ಗೊಬ್ಬರನಾಗಲೀ ಬೀಜವಾಗಲಿ, ಕ್ರಿಮಿನಾಶಕಗಳಾಗಲೀ transport ಆಗಲಿ, credit ಆಗಲಿ, ಯಾವುವು ಎಷ್ಟು ಬೇಕೋ ಅಷ್ಟನ್ನುಕೂಡ ಒದಗಿಸಿ ಕೊಡಿರಿ. ವ್ಯವಸಾಯವು ಲಾಭದಾಯಕವಾಗಿದ್ದರೆ ರೈತರು ಅದನ್ನು ಹೆಚ್ಚು ಕೈಗೊಳ್ಳುತ್ತಾರೆ ಅಂತ remunerative ಮಾಡಿಕೊಡಿರಿ ಹೀಗೆ Extensive and intensive cultivation ಎರಡೂ ಹೆಚ್ಚು ಪ್ರೊಡಕ್ಷನ್ ಆಗಲು ಸಹಾಯವಾಗುತ್ತವೆ. Intensive production, increased production is possible only if agriculturists find it more remunerative. ಬೇಕಷ್ಟಿಲ್ಲ ವ್ಯವಸ್ಥೆಮಾಡಿದರೂ ಅವನಿಗೆ remunertive ಆದ ಹೊರತು increased production ಸಾಧ್ಯವಾಗುವುದಿಲ್ಲ. ಈಗ್ಗೆ Live stock production ಆಗುತ್ತದೆ ಎಂದು ತಿಳಿದು ನಾನು ಈ ಪ್ರಕಾರ ಮಾಡಬೇಕೆಂದು ಹೇಳುತ್ತಿದ್ದೇನೆ. Extensive and intensive cultivation ಎರಡೂಮಾಡಿ ಪ್ರೊಡಕ್ಷನ್ ಹೆಚ್ಚುಮಾಡುವ ಮತ್ತು ಒಕ್ಕಲುತನ ಸಮೃದ್ಧಿ ಮಾಡುವ, ಈ ಎರಡೂ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ರೈತರಿಗೆ ಬೇಕಾದ ಈ ಎಲ್ಲಾ ಆವಶ್ಯಕತೆಗಳೇನಿವೆ ಅವನ್ನು ಸಾಕಷ್ಟು ಪ್ರಥಮಮಾಡದೇ ಬಿಟ್ಟು ಭೂಸುಧಾರಣೆಯನ್ನು ಮಾಡಲಿಕ್ಕೆ ಹತ್ತಿ ಈ ಬಿಲ್ಲನ್ನು ತಂದಿದ್ದೀರಿ. ಈ ಸುಧಾರಣೆಯೊಳಗೆ ಮಾಡಬೇಕಾದುದೇನು ? ಭೂಮಿಯು ವಿಕಸಿತವಾಗಬೇಕು. ಉತ್ಪಾದನೆ ಹೆಚ್ಚು ಆಗಬೇಕು, ಮತ್ತು ವ್ಯವಸಾಯಗಾರರು, ಒಕ್ಕಲಿಗರು ಸಮೃದ್ಧರಾಗಬೇಕು. ಭೂಮಿಯು ವಿಕಾಸವಾದ ಹೊರತು ಉತ್ಪತ್ತಿ ಹೆಚ್ಚಾಗುವುದಿಲ್ಲ. ಭೂಮಿಯು ವಿಕಾಸವಾಗಿ ಉತ್ಪತ್ತಿ ಹೆಚ್ಚಾಗಬೇಕಾದರೆ ವ್ಯವಸಾಯಗಾರನು ಸಮೃದ್ಧನಾಗಿರಬೇಕು. ವ್ಯವಸಾಯಗಾರ ಸಮೃದ್ಧನಾಗಬೇಕಾದರೆ ಮೇಲೆ ಹೇಳಿದಂತೆ ಅವನ ಪರಿಸ್ಥಿತಿ ಅನುಕೂಲವಾಗಿರಬೇಕು. ಈ ವಿಷಯವನ್ನು ನಾವು ವಿಚಾರದಲ್ಲಿ ತೆಗೆದುಕೊಳ್ಳದೆ ಭೂಸುಧಾರಣೆಯನ್ನು ಮಾಡುತ್ತೇವೆಂದರೆ ಅದರಿಂದ ಯಾವ ತರದ ಸುಧಾರಣೆ ಆಗುವುದೆಂಬುದು ಬೇರೆ ಹೇಳಬೇಕಾಗಿಲ್ಲ.

[MR. SPEAKER in the Chair]

ಬೊಂಬಾಯಿ ರಾಜ್ಯದಲ್ಲಿ 1938ರಲ್ಲಿ ಟೆನೆನ್ಸಿ ಕಾಯಿದೆಯನ್ನು ಜಾರಿಯಲ್ಲಿ ತಂದು increased production ಮಾಡಬೇಕೆಂದು ತಿಳಿದು forceಮಾಡಿದರೂ ಸಹಿತ ಅದು ಅಯಶಸ್ವಿಯಾಗಿದೆ. ನಾನು ಜನ್ಮದಾರಭ್ಯ ಒಕ್ಕಲಿಗನಾಗಿದ್ದೇನೆ. ನನ್ನ ಅನುಭವಕ್ಕೆ ಅನುಸರಿಸಿ ನಾನು ಹೇಳುತ್ತಿದ್ದೇನೆ. ಎಲ್ಲಿ ಯಾವ ಕಾರ್ಯವಿದೆಯೋ, ಅದಕ್ಕೆ ಯಾವ ಉಪಯುಕ್ತ ಉಪಾಯ ಮಾಡಬಹುದೋ, ಅದನ್ನು ಅಲ್ಲಿ ಮಾಡಬೇಕು. ಹೊಟ್ಟೆಯೊಳಗೆ ರೋಗವಿದ್ದುದ್ದಕ್ಕೆ ಬೆನ್ನೊಳಗೆ ಬರೆ ಕೊಡುವುದಕ್ಕೆ ಷುರುಮಾಡಿದಂತಾಗಿದೆ. ಅದಕ್ಕೆ ಹೊಟ್ಟೆಯೊಳಗೆ ಔಷಧಿ ತೆಗೆದುಕೊಂಡರೆ ರೋಗ ನಿಕಾಲೆಯಾಗುತ್ತದೆಯೇ ಹೊರತು ಬೆನ್ನೊಳಗೆ ಬರೆ ಕೊಟ್ಟರೆ ಹೊಟ್ಟೆಯೊಳಗಿನ ರೋಗ ನಿಕಾಲೆಯಾಗುವುದಿಲ್ಲ. ಆ ಪ್ರಕಾರವೇ ಭೂಮಿಯಲ್ಲಿ intensive cultivation ಮಾಡಬೇಕಾದದ್ದಕ್ಕೆ ಒಂದೇ ಒಂದು ಉಪಾಯ. ನೀವು ಈ ಭೂಸುಧಾರಣೆ ಎಂದು ತೆಗೆದುಕೊಂಡಿದ್ದೀರಿ. ಇದರಿಂದ ಉತ್ಪತ್ತಿ ಹೆಚ್ಚುವುದಿಲ್ಲ. ಇದರಿಂದ ಮತ್ತೆ ವ್ಯವಸಾಯವು ಅಧೋಗತಿಗೆ ಹೋಗುತ್ತದೆಂದು ನನಗೆ ಮನಃಪೂರ್ವಕವಾಗಿ ಅನ್ನಿಸುತ್ತದೆ.

ವ್ಯವಸಾಯದ ಅವಸ್ಥೆ ಇಪ್ಪತ್ತು ವರ್ಷಗಳಿಂದ ಏನಿದೆ, 'ಉಳುವವನೇ ಒಡೆಯ' ಎಂದು ಏನು ಹೇಳುತ್ತೀರಿ, tiller is the owner of the soil ಎಂದು ಏನು ಹೇಳುತ್ತೀರಿ it is a very very wrong conception. ಇದರ ದೆಸೆಯಿಂದ ಹಿಂದೂಸ್ಥಾನದೊಳಗೆ ವ್ಯವಸಾಯವು ಅಧೋಗತಿಗೆ ಹೋಗಹತ್ತಿದೆ. Tiller is the owner ಎಂದು ಹೇಳುವದು ಎಂದರೆ ಏನು ? Lands to the tillers ಎಂದರೆ ಏನು ? Who tills the land ? Does the tiller only tills the land ? Bullocks als till the land. ಟ್ರಾಕ್ಟರು ಮತ್ತು ಬುಲ್‌ಡೋಜರುಗಳು ಸಹ ಇನ್ನೂ ಹೆಚ್ಚು ಕೆಲಸವನ್ನು ಮಾಡುತ್ತವೆ. ಆದ್ದರಿಂದ lands to the bullocks, lands to the tractors, lands to the bulldozers ಎಂದು ಹೇಳಿದ ಹಾಗಾಗುತ್ತದೆ. (ನಗು) ಎಂದರೆ ಈ ವಿಷಯವೇನಿದೆ, ಈ conception ಏನಿದೆ ಅದು ತಪ್ಪಾಗುತ್ತದೆ, ದೋಷಯುಕ್ತವಾಗುತ್ತದೆ ಪ್ಲಾನಿಂಗ್ ಕಮಿಷನ್‌ನಲ್ಲಿ ಯಾರೋ ತಿಳಿಯದೆ ಈ ರೀತಿಯ ಸಲಹೆಯನ್ನು ಮಾಡಿರಬಹುದು. ಈ ಜಗತ್ತಿನಲ್ಲಿ ಪ್ರತಿಯೊಂದು ವಸ್ತುವೂ ತಮ್ಮ ತಮ್ಮ ಲಕ್ಷಣದಿಂದ ಲಕ್ಷಿತವಾಗಿದೆ. ಈ ಲಕ್ಷಣಕ್ಕೆ ಅವ್ಯಾಪ್ತಿ, ಅತಿವ್ಯಾಪ್ತಿ ಮತ್ತು ಅಸಂಭವ ಹೀಗೆ ಮೂರು ದೋಷಗಳಿರುತ್ತವೆ. ಆ ಲಕ್ಷಣಗಳೆಲ್ಲ ಸರಿಯಾಗಿದ್ದು, ಈ ದೋಷಗಳಿಂದ ನಿರ್ದೋಷವಾಗಿದ್ದರೆ ವ್ಯವಹಾರ ಕಾರ್ಯಗಳೆಲ್ಲಾ ಸಹಜ ಸಾಧ್ಯವಾಗುತ್ತದೆ. Tiller is the owner ಎಂದರೆ ಯಾವನು ದುಡಿಯುತ್ತಾನೋ ಅವನೇ ಒಡೆಯ ಎಂದು ಹೇಳುವಾಗ ಕೇವಲ ನಮ್ಮ ಕೈಯಿಂದ ಭೂಮಿಯಲ್ಲಿ ಕೆಲಸಮಾಡುವುದು ಎಂದರೆ ಶ್ರಮಮಾಡುವುದು ಇಷ್ಟೇನೇ ? ಒಡೆತನ ಮತ್ತು ದುಡಿತನ ಇವುಗಳಲ್ಲಿ ಭೇದವಿಲ್ಲವೇ ? ಎಲ್ಲ ಒಡೆಯರು ಪ್ರತ್ಯಕ್ಷ ದುಡಿಯಬಹುದೇ ? ಎಲ್ಲ ದುಡಿಯುವವರು ಒಡೆಯರಾಗಬಹುದೇ ? If only I can physically till the land, is it that you mean that the agricultural production will be increased and the whole nation will at once be happy and prosperous ? At the most one can till two acres. Only one aspect or only one view of the thing cannot help to succeed. There are other considerations also. ಒಂದರಿಂದಲೇ ಕಾರ್ಯವಾಗುವುದಿಲ್ಲ. ಎಲ್ಲಾ ಅನೇಕ ಅವಸ್ಥೆಗಳೂ ಒಂದಕ್ಕೊಂದು ಆಶ್ರಿತವಿವೆ. ಇವೆಲ್ಲ ಕೂಡಿಬಂದಾಗ ಕಾರ್ಯಸಿದ್ಧಿಯಾಗುತ್ತದೆ. ಆದ್ದರಿಂದ 'ಉಳುವವನಿಗೇ ಭೂಮಿ' 'ಉಳುವವನೇ ಒಡೆಯ' ಎಂಬುದು ತಪ್ಪು. ಅದು ಅತಿವ್ಯಾಪ್ತಿದೋಷದಿಂದ ಕೂಡಿದೆ. ಯಾಕೆಂದರೆ agriculturists till, owners also till, tenants also till, hired labourers also till, bullocks and tractors also till. ಎತ್ತುಗಳು ಉಳುತ್ತೇವೆಂದರೆ ಅವಕ್ಕೇ ಭೂಮಿಯ ಒಡೆತನವೇ ? (ನಗು) The builder is the owner of this building. So, 'building to the builders' ಎಂದರೆ ಏನು ಅರ್ಥ ? ಜತ್ತಿ ಸಮಿತಿ ವರದಿಯು ಈ ಸಭೆಯೊಳಗೆ ಚರ್ಚೆಯಾದಾಗ

ನಾನು ಇದೇ ವಿಷಯವಾಗಿ ಮಾತನಾಡಿದ್ದೇನೆ. ಪುನಃ ಚರ್ವಿತ ಚರ್ವಣವಾದರೂ ಅದನ್ನೇ ಹೇಳಬೇಕಾಗಿದೆ. Tiller is the owner of the land ಎನ್ನುವುದರಲ್ಲಿ ದೋಷವಿದೆ. ಏನೂ ಅರ್ಥವಿಲ್ಲಾ. ಬಿಲ್ಲಿನ objectiveಗೆ ಸರಿಹೋಗುವುದಿಲ್ಲಾ. Hindustan is the loser and sufferer. ಏಕೆ? ಈ ಐಡಿಯಾಲಜಿಯ ದೆಸೆಯಿಂದ. ಇದರ ಬದಲಾಗಿ ಒಂದುವೇಳೆ, grower is the owner ಎಂದರೆ ಅದರಿಂದ ಸ್ವಲ್ಪ ಸಮಾಧಾನ (satisfaction) ಎನ್ನಿಸೀತು. Objectiveಗೆ ಸರಿಹೋದೀತು ?

Sri G. VENKATAI GOWDA (Palaiyam).—I want to know—is it not the tiller who grows?

Sri B. G. KHOT.—The tiller may not necessarily grow. One tiller may grow and another may not grow.

Sri G. VENKATAI GOWDA.—If he does not grow, he ceases to be a tiller.

Sri B. G. KHOT.—Tilling is not necessarily growing. If you try to say that the tiller always necessarily grows, then, he cannot be a tiller who cannot grow. But is it not a fact that he tilled the land? Can you ignore it? Throughout the year, he has tilled the land but he did not grow or produce. He has failed to grow.

ಆದ್ದರಿಂದ ಈವ್ಯಾಖ್ಯೆ ಇದೆಯಲ್ಲ ಅದನ್ನು ತಾವು ತೆಗೆದು ಹಾಕಿ. ಅದನ್ನು ತಿದ್ದಿ, ಅದೇ ಪ್ರಕಾರ, Lands to landless ಎನ್ನುವುದೂ ಸಹ ಶುದ್ಧ ತಪ್ಪು. ಅತಿವ್ಯಾಪ್ತಿಯಿಂದ ಕೂಡಿದೆ. Objectiveಗೆ ಸರಿಹೋಗುವದಿಲ್ಲ. Central Government, ಪ್ಲಾನಿಂಗ್ ಕಮಿಷನ್, ವರ್ಕಿಂಗ್ ಕಮಿಟಿ, ಜೊತೆಗೆ ರಾಜ್ಯ ಸರ್ಕಾರ ಇವರೆಲ್ಲ ಇದನ್ನು ತಿಳಿಯಬೇಕಾಗಿತ್ತು. ಈ ಪ್ರಕಾರ ಅವರು ದೋಷಸಂಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡಿರುತ್ತಾರೆ, ಲ್ಯಾಂಡ ಲಾರ್ಡ್ಸ್‌ಗಳಿಗೂ ಮತ್ತು ಟೆನೆಂಟುಗಳಿಗೂ ಅನುಕೂಲವಾಗಬೇಕು ಮತ್ತು porduction ಹೆಚ್ಚು ಮಾಡಬೇಕೆಂದು ಟೆನೆನ್ಸಿ ಆಕ್ಟನ್ನು ಮಾಡಿ ಈಗ ಇಪ್ಪತ್ತು ವರ್ಷಗಳಿಂದಲೂ ಪ್ರಯತ್ನ ಮಾಡಿ ನೋಡುತ್ತಿದ್ದೀರಿ. ಆ ಒಂದು experience ನಮ್ಮೆಲ್ಲರಿಗೂ ಬಂದಿದೆ. You have failed in that experiment. Still you are bent upon pursuing the same experiment. ಈಗ ಟೆನೆಂಟುಗಳನ್ನು ಅವರು ಕಲ್ಟಿವೇಟು ಮಾಡುವ ಜಮೀನಿನ ಓನರಾಗಿ ಮಾಡಬೇಕು ಎಂದು ಮಾಡುವುದಕ್ಕೆ ಹೊರಟ್ಟಿದ್ದೀರಿ. ಅದರಿಂದ ಉತ್ಪನ್ನ ಹೆಚ್ಚಾಗುತ್ತದೆಯೇ? ಇದನ್ನು ತಿಳಿಯಲು ನಿಮ್ಮ ಆತ್ಮ ಸಂಶೋಧನೆಯನ್ನು ಮಾಡಬೇಕು. ನಾವು ಅನುಸರಿಸುವ ಈ ಮಾರ್ಗದಿಂದ ಈ ಬಿಲ್ಲಿನ ಹೇತುಸಿದ್ಧಿಯಾಗುತ್ತದೆಯೇ? ಪ್ಲಾನಿಂಗ್ ಕಮಿಷನ್ನಿನವರು, ಸೆಂಟ್ರಲ್ ಗವರ್ನಮೆಂಟಿನವರು, ಕಾಂಗ್ರೆಸ್ ಪಾರ್ಟಿಯವರು ಹೇಳುತ್ತಿರುವ ಪ್ರಕಾರ ಇದು Agrarian Reforms ಎಂದು ಹೇಳಲಿಕ್ಕೆ ಶಕ್ಯವಿಲ್ಲ. ಇದರಿಂದ Agricultural production ಹೆಚ್ಚಾಗುತ್ತದೆಂದು ಹೇಳಲು ಶಕ್ಯವಿಲ್ಲ. ಯಾವ ಆಧಾರದ ಮೇಲೆ Agricultural Production ಹೆಚ್ಚಾಗುತ್ತದೆ ಎಂದು ಹೇಳುತ್ತಿದ್ದೀರಿ? ಕೇವಲ ಓನರ್‌ಷಿಪ್ಪು ಟ್ರಾನ್ಸಿಫರ್ ಆದರೆ ಪ್ರೊಡಕ್ಷನ್ನು ಹೆಚ್ಚಾಗುತ್ತದೆಯೇ, ಡಿಸ್ಟ್ರಿಬ್ಯೂಷನ್ನಿನಿಂದಲೇ ಪ್ರೊಡಕ್ಷನ್ನು ಹೆಚ್ಚಾಗುತ್ತದೆಯೇ! ಈ ವರೆಗೆ ಅದೇ ಭೂಮಿ ಅವರ possession ನಲ್ಲಿ ಇರಲಿಲ್ಲವೇ? ಇದಲ್ಲದೆ ನೀವು ಈಗ ಕೋ-ಅಪರೇಟೀವ್ ಫಾರ್ಮಿಂಗು ಎನ್ನುವ ಒಂದು ಹೊಸ ಹೆಸರಿನಿಂದ ಒಂದು ಎಕ್ಸ್‌ಪೆರಿಮೆಂಟನ್ನು ಷುರು ಮಾಡಿದ್ದೀರಿ. It is a new scheme that is going to be introduced in this country. It may theoretically appear best. But why don't you accept that same co-operative philosophy between the Land lords and the tenants keeping up their relations healthy?

Sri KADIDAL MANJAPPA.—I don't quite follow the member that there should be co-operation between the tenant and the owner. I would like to know more about this.

Sri B. G. KHOT.—I am later on coming to that.

ಆ ರೀತಿ ಸಹಕಾರವನ್ನು ಲ್ಯಾಂಡುಲಾರ್ಡ್ಸ್ ಮತ್ತು ಟೆನೆಂಟುಗಳಲ್ಲಿಯೂ ಏತಕ್ಕೆ ಉಂಟುಮಾಡಬಾರದು?

You must try to have healthy co-operation among them.

ಈ ರೀತಿ ನೀವು ಸುಧಾರಣೆ ಮಾಡುವುದಕ್ಕೆ ಷುರು ಮಾಡಬೇಕು. ಅವರು ಲ್ಯಾಂಡುಲಾರ್ಡು ಇರಲಿ, ಟೆನೆಂಟು ಇರಲಿ, ಇಬ್ಬರನ್ನೂ ಸಮಾನ ದೃಷ್ಟಿಯಿಂದ ನೋಡಿಕೊಂಡು ಅವರಲ್ಲಿ ಕೋ-ಆಪರೇಷನ್ನು ಮತ್ತು ಕೋ-ಆರ್ಡಿನೇಷನ್ನು ಇರುವಂತೆ ಮಾಡಬೇಕು. ನೀವು ಮುಖ್ಯವಾಗಿ ಟೆನ್ಯೂರು ಮತ್ತು ಫೇರುರೆಂಟು, ಇದರ ವಿಚಾರದಲ್ಲಿ ಒಂದು ಪ್ರಾವಿಷನ್ನು ಮಾಡಬೇಕು. ಐದು ವರ್ಷವೋ, ಏಳು ವರ್ಷವೋ, ಅಥವಾ ಹತ್ತು ವರ್ಷವೋ ಯಾವುದೊ ಒಂದು ಕಾಲಾವಕಾಶವನ್ನು ನಿಗದಿಮಾಡಿ ಅಲ್ಲಿಯತನಕ ಟೆನ್ಯೂರು ನಡೆಯುವ ಹಾಗೆ ಮತ್ತು ಫೇರ್‌ರೆಂಟಿನ ಬಗ್ಗೆ ವಿಧಾಯಕ ಮಾಡಿ. ಇವೇ ಎರಡು ಲ್ಯಾಂಡುಲಾರ್ಡುಗಳ ಮತ್ತು ಟೆನೆಂಟುಗಳಲ್ಲಿನ ಮುಖ್ಯಾಂಶಗಳು. ಆಗ ಲ್ಯಾಂಡು ಲಾರ್ಡುಗಳಲ್ಲಿಯೂ, ಟೆನೆಂಟುಗಳಲ್ಲಿಯೂ cordial relations ಉಳಿಯುತ್ತವೆ. ಇಬ್ಬರಿಗೂ ನ್ಯಾಯ ಕೊಟ್ಟಂತೆ ಆಗುತ್ತದೆ. ಮಾಲೀಕನಿಂದ ಭೂಮಿಯನ್ನು ತೆಗೆದುಕೊಂಡು ಬಿಟ್ಟು ಟೆನೆಂಟಿಗೆ ಓನರಷಿಪ್ಪು ಕೊಟ್ಟರೆ,—ಕಲ್ಲಪ್ಪನದು ತೆಗೆದುಕೊಂಡು ಮಲ್ಲಪ್ಪನಿಗೆ ಕೊಟ್ಟಾಕ್ಷಣಕ್ಕೆ Agricultural production ಹೆಚ್ಚಾಗುತ್ತದೆ ಎಂದು ವಿಚಾರಿಸಿದ್ದರ ಅದು ಒಂದು ಶುದ್ಧಭ್ರಮೆ. ಇಲ್ಲದೇ ಇದ್ದರೆ ತಾವು ಈಗ ಮಾಡುತ್ತಿರುವ ಹಾಗೆ ಕಾಯಿದೆ ಮಾಡಿದರೆ ಇದರಿಂದ ಪುನಃ Class-War ಮತ್ತು ಲಿಟಿಗೇಷನ್ನು ಹೆಚ್ಚಾಗಲು ಅವಕಾಶವಾಗುತ್ತದೆ.

Again, it would be an attempt to set up class against class. Therefore, try to establish healthy relations and harmonious co-operation between the land-lord and the tenant.

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಒಂದು ವಿಷಯ ಅರ್ಥವಾಗಲಿಲ್ಲ. ಲ್ಯಾಂಡುಲಾರ್ಡಿಗೂ ಮತ್ತು ಟೆನೆಂಟಿಗೂ ಕೋ-ಆಪರೇಷನ್ನು ಇರುವ ಸಲುವಾಗಿ Administrative system ಇರಬೇಕೆಂದರೆ ಫ್ಯಾಕ್ಟರಿ ಮ್ಯಾನೇಜುಮೆಂಟಿನಲ್ಲಿರುವಂತೆ, Labour participation ಇರುವಂತೆ, ಇವರಿಬ್ಬರಿಗೂ ಆ ರೀತಿ ವ್ಯವಸ್ಥೆ Farming ಸೊಸೈಟಿಗಳಲ್ಲಿಯೂ ಇರಬೇಕೆಂದು ಹೇಳುತ್ತೀರಾ ?

ಶ್ರೀ ಬಿ. ಜಿ. ಖೋತ್.—ಕೋ-ಆಪರೇಟೀವ್ ಫಾರ್ಮಿಂಗಿನ ವಿಷಯವನ್ನು ಮಾತನಾಡುವಾಗ ಅದರ ವಿಚಾರ ಹೇಳುತ್ತೇನೆ. ಸಾಮಾನ್ಯವಾಗಿ ರಾಜ್ಯದಘಟಕನಾಗಿರುವ ಪ್ರತಿಯೊಬ್ಬ ನಾಗರಿಕನೂ ಜಮೀನು ಹೊಂದುವ ಮತ್ತು ಧಾರಣ ಮಾಡುವ ಮತ್ತು ವಿಲೆವಾಟುಮಾಡುವ ಹಕ್ಕನ್ನು ಸಂವಿಧಾನದ ಆರ್ಟಿಕಲ್ಲು 19ರ ಪ್ರಕಾರ ಪಡೆದಿದ್ದಾನೆ. ಅದರಲ್ಲಿ ಹೀಗಿದೆ :

Article 19 :—

"(*f*) to acquire, hold and dispose of property ;

and

(*g*) to practise any profession, or to carry on any occupation, trade or business."

ಮುಂದುವರಿಯುತ್ತಾ ಅದೇ ಸಂವಿಧಾನದಲ್ಲಿ ಹೇಳಿದ್ದಾರೆ. "No person shall be deprived of his life or personal liberty except according to procedure established by law. No person shall be deprived of his property, save by authority of law and no property shall be compulsorily acquired or requisitioned save for public purpose, etc." Freedom of avocation and right to earned wealth and property are our fundamental rights. ಆದ್ದರಿಂದ, You cannot deprive us from that Freedom and Right.

ಈ ರೀತಿ ಇರುವಾಗ ಯಾವ ರೀತಿಯಾದ ಪ್ರಾವಿಜಿನ್ನನ್ನು ಈ ಭೂಸುಧಾರಣೆಯಲ್ಲಿ ಮಾಡುತ್ತೀರಿ? ಭೂಮಿಯನ್ನು ಅಕ್ವೈರು ಮಾಡುವುದರ, ಹಾಗೂ ಹೋಲ್ಡು ಮಾಡುವುದರ ಫ್ರೀಡಂ ಇದೆ ಮತ್ತು ರೈಟೂ ಇದೆ. ನಾನು ಹೇಳುವುದಿಷ್ಟೇ. ಭೂಮಿಯನ್ನು ಅಕ್ವೈರ್ ಮಾಡುವುದಾಗಲಿ, ಹೋಲ್ಡ್ ಮಾಡುವುದಾಗಲಿ, ಡಿಸ್‌ಪೋಜ್ ಮಾಡುವುದಾಗಲಿ ಇದಕ್ಕೆ ತಾವು ಈ ರೀತಿ ಮಾಡಿದರೆ you will be encroaching upon the fundamental rights of individual.

Sri C. J. MUCKANNAPPA.—Please let us know how by this legislation our fundamental rights are encroached.

ಶ್ರೀ ಬಿ. ಜಿ. ಖೋತ್.—ನಮ್ಮ ಫಂಡಮೆಂಟಲ್ ರೈಟ್ಸ್ ಏನಿವೆಯೋ, you are not authorised to deprive us of our rights. ಎಂದರೆ ನಮ್ಮ ಹಕ್ಕು ಬಾಧ್ಯತೆಗಳೇನಿವೆಯೋ ಅವನ್ನು ತೆಗೆದುಕೊಳ್ಳುವುದಕ್ಕೆ, you are not authorised. ನಮಗೆ ಎಷ್ಟು ಜಮೀನನ್ನು ಅಕ್ವೈರ್ ಮಾಡುವುದಕ್ಕೆ ಶಕ್ತಿ ಇದೆಯೋ, ಎಷ್ಟು ಹೋಲ್ಡ್ ಮಾಡುವುದಕ್ಕೆ ಶಕ್ತಿ ಇದೆಯೋ, ಎಷ್ಟು ಡಿಸ್‌ಪೋಜ್ ಮಾಡುವುದಕ್ಕೆ ಶಕ್ತಿಯಿದೆಯೋ ಅಷ್ಟನ್ನು ಮಾಡುತ್ತೇವೆ. ಇದಕ್ಕಾಗಿ ಗೌರ್ನ್‌ಮೆಂಟ್ ಇಂಟರ್‌ಫಿಯರ್ ಮಾಡಬಾರದು, ಮಾಡುವುದಾದರೆ subject only to reasonable restrictions in the interest of public purposes ಮಾತ್ರ ಎಂಬುದಾಗಿ ಹೇಳಿರುತ್ತಾರೆ. ಈ ಎನ್ಯಾಕ್ಟ್‌ಮೆಂಟ್ ನಮ್ಮ ಕಾನ್‌ಸ್ಟಿಟ್ಯೂಷನ್ನಿನ ಪ್ರಕಾರ ನಮಗಿರತಕ್ಕ ಮೂಲಭೂತ ಹಕ್ಕುಗಳನ್ನು ಅಪಹರಣ ಮಾಡಿದಹಾಗಾಗುತ್ತದೆ. ನಮ್ಮ ಮೇಲೆ ಸೀಲಿಂಗ್ ಇಡುವುದಕ್ಕೆ ಪ್ರಾರಂಭ ಮಾಡಿ ನಮ್ಮ ಮೂಲ ಭೂತ ಹಕ್ಕನ್ನು ಕಂಟ್ರೋಲ್ ಮಾಡಿದ ಹಾಗಾಗುತ್ತದೆ. What rights have you to deprive us of our fundamental rights in dispossessing the proprietors of their private properties and also in fixing ceilings upon holdings ? You may say "in the interest of the public" ಎಂದು. ಎಂದರೆ ಈ interest of public purpose ಇದರಿಂದ ಯಾವ public purpose serve ಆಗುತ್ತದೆ? ಯಾವ ಪ್ರೊಡಕ್ಷನ್ ಹೆಚ್ಚು ಆಗಿದ್ದದೆ ಅಥವಾ ಆಗುತ್ತದೆಂಬುದನ್ನು ಹೇಳಿ. If it is in the interests of the public, if it is for public purpose, or for more production, then you first assure satisfactorily that it is for public purpose or production. Unless that public utility or production is satisfactorily assured, how can you deprive us of our fundamental rights ? ಇದೆಲ್ಲಾ assurance ಸರಿಯಾಗಿ ಮಾಡದೆ ಇದರ ಗುಣಾವಗುಣಗಳು ಹೇಗೆ ಗೊತ್ತಾಗುತ್ತವೆ? ಒಂದು ವೇಳೆ ಈ ಪ್ರಕಾರ ಜಮೀನನ್ನು ಅಪಹರಣ ಮಾಡದೇ ಇದ್ದರೆ ಪ್ರೊಡಕ್ಷನ್ ಹೆಚ್ಚಾಗುತ್ತಿತ್ತು. You cannot at once deprive them of their rights and properties. You cannot at once impose a ceiling unless you can satisfactorily assure that it is for the public purpose. That will be sufficient cause because production is a sufficiently public purpose ಎಂದು ಹೇಳುವುದಿದ್ದರೆ ಯಾವ ತರಹದಲ್ಲೂ ಇಂಥ ಮಾರ್ಗದಿಂದ ಪ್ರೊಡಕ್ಷನ್ನನ್ನು ಹೆಚ್ಚು ಮಾಡಲು ಸರ್ಕಾರದವರು ಶಕ್ತರಿಲ್ಲಾ. ಏಕೆಂದರೆ, We have an experience of past 20 years of the Bombay tenancy Act. In spite of its being in force for 20 years there has been no improvement at all. Therefore, It is quite unjust to deprive and put ceilings ಎಂದು ಹೇಳಬೇಕಾಗುತ್ತದೆ. ಈ ಪ್ರಕಾರ ಅನ್ಯಾಯದಿಂದ ಅಪಹರಣ ಮಾಡಬಾರದು. ಪ್ರೊಡಕ್ಷನ್ ಹೆಚ್ಚು ಎಂದು assure ಮಾಡದ ಹೊರತು ಸೀಲಿಂಗಿನ ಸಂಬಂಧ ಕಾಯಿದೆ ಮಾಡಲಿಕ್ಕೆ ಹೋಗಬಾರದು. Again I ask,—Why should there be any ceiling at all ? Who are you to fix a ceiling ? What authority have you ?

Mr. SPEAKER.—Don't say "you" say "we" ಇದನ್ನೆಲ್ಲಾ ಈ ಸಭೆ ಮಾಡುತ್ತದೆ. ನೀವು, ನಾವು, ಅವರು ಮಾಡುವುದಿಲ್ಲ.

Sri B. G. KHOT.—I am not referring to the Minister as an individual. I am appealing to the whole House excepting myself. ನಮಗಾಗಲಿ, ನಿಮಗಾಗಲಿ ಯಾವ ತರಹ ಹಕ್ಕು ಇದೆ? ಈ ಸೀಲಿಂಗ್ ಇದೆಲ್ಲಾ ಎಲ್ಲಿಂದ ಬಂತು? Who are we? What authority have we to impose a ceiling?

Sri N. RACHIAH (Minister for Agriculture, Excise and Social Welfare).—If the Hon'ble Member will yield, I may say that there is a provision in the Constitution to the effect that wealth and power of the nation should not be allowed to be concentrated in the hands of a few people.

ಶ್ರೀ ಬಿ. ಜಿ. ಖೋತ್.—few people ಅನ್ನುವುದು ಇಲ್ಲಿ apply ಆಗುವುದಿಲ್ಲ. ಡೀಸೆಂಟ್ರಲೈಜ್ ಮಾಡುವುದೆಂದರೆ ನಮ್ಮ ಸ್ವತಃ ಫಂಡಮೆಂಟಲ್ ರೈಟ್ಸ್ ಡಿಪ್ರೈವ್ ಮಾಡಿದ ಹಾಗಾಯಿತೋ ಹೇಗೆ? Earned wealth, and earned propertyಗಳನ್ನು ರಕ್ಷಣೆ ಮಾಡುವುದಕ್ಕೆ ಇದರಲ್ಲಿ ಪ್ರಾವಿಷನ್ ಸಿಕ್ಕುತ್ತದೋ ಇಲ್ಲವೋ ಎಂದು ನಾನು ಕೇಳುತ್ತೇನೆ. You try to curb and control our activities. You try to control our skill and knowledge. You try to control our finance. If you go on trying to control us, how is the nation likely to prosper? How can there be any prosperity? That is a question which all of you should consider. ಏಕೆ ಡೀಸೆಂಟ್ರಲೈಜ್ ಮಾಡುತ್ತೇವೆಂಬುದನ್ನು ಹೇಳುತ್ತೀರಾ? ಡೀಸೆಂಟ್ರಲೈಜ್ ಯಾವ ವಿಷಯದಲ್ಲಿ ಯಾವಾಗ ಮಾಡಲಿಕ್ಕೆ ಬೇಕೋ ಆಗ ನಿಮಗೆ ಪವರ್ಸ್ ಇದ್ದರೆ ಮಾಡಿ. ಇದರೊಳಗೆ ಡೀಸೆಂಟ್ರಲೈಜ್ ಈ ಕಾಲಕ್ಕೆ ಮಾಡುವುದು ಸರಿಯಲ್ಲ. You will be a loser. You will have to repent just as you are repenting for the Tenancy Act. You have a 20 years experience of the Tenancy Act in which you are not successful.

ಅಧ್ಯಕ್ಷರು.—ತಮ್ಮ ಭಾಷಣವನ್ನು ಜಾಗ್ರತೆ ಮುಗಿಸಬೇಕು. ತಮಗೆ ಕೊಟ್ಟ ವೇಳೆ ಮುಗಿಯಿತು.

ಶ್ರೀ ಬಿ ಜಿ. ಖೋತ್.—ನಾನು ಕೋ-ಅಪರೇಟಿವ್ ಫಾರ್ಮಿಂಗ್, ಸೀಲಿಂಗ್, ಟೆನೆಂಟ್ಸ್‌ಗೂ ಮತ್ತು ಲ್ಯಾಂಡ್‌ಲಾರ್ಡ್‌ಗೂ ಇರತಕ್ಕ ರಿಲೇಷನ್‌ಷಿಪ್ ಬಗ್ಗೆ ಮಾತನಾಡಬೇಕಾಗಿದೆ. ಈ ಮೂರು ವಿಷಯಗಳ ವಿಚಾರ ನಾನು ಇನ್ನೂ ಹೇಳಲಿಲ್ಲ.

ಅಧ್ಯಕ್ಷರು.—ನೀವು ಇನ್ನು ನಾಲ್ಕು ದಿವಸ ತೆಗೆದುಕೊಳ್ಳಿ. ನನ್ನ ಅಭ್ಯಂತರವಿಲ್ಲ ಬಹಳ ಜನ ಮಾತನಾಡುವವರಿದ್ದಾರೆ ನೀವೊಬ್ಬರೇ ಇಡೀ ದಿವಸ ತೆಗೆದುಕೊಂಡರೂ ನಾನು ಬೇಡ ಎನ್ನುವುದಿಲ್ಲ. ಆದರೆ ಕಾಲ ನಿಗದಿ ಮಾಡಿರುವುದರಲ್ಲಿ ತಮ್ಮ ಭಾಷಣವನ್ನು ಮುಗಿಸಿದರೆ ಅದು ಒಳ್ಳೆಯದು. ಇತರರಿಗೂ ಆಗ ಮಾತನಾಡಲು ಅವಕಾಶ ಸಿಕ್ಕುತ್ತದೆ.

ಶ್ರೀ ಜಿ. ವೆಂಕಟೇಗೌಡ.—ಅವರು ಲ್ಯಾಂಡ್ಸಿಗೆ ಸೀಲಿಂಗ್ ಬೇಡವೆಂದು ಹೇಳುತ್ತಾರೆ. ಆ ಪ್ರಕಾರ ಮಾತನಾಡುವಾಗ ಟ್ರೈಮಿಗೂ ಸೀಲಿಂಗ್ ಬೇಡ

ಅಧ್ಯಕ್ಷರು.—ಮಾತನಾಡುವಾಗ ಟ್ರೈಮಿಗೆ ಸೀಲಿಂಗ್ ಬೇಡವೆಂದರೆ ನಾನು ಕೇಳುವುದಿಲ್ಲ. ಆದಷ್ಟು ಜಾಗ್ರತೆ ತಮ್ಮ ಭಾಷಣವನ್ನು ಮುಗಿಸಿ.

6 P.M.

ಶ್ರೀ ಬಿ. ಜಿ. ಖೋತ್.—ಹೆಚ್ಚು ಉತ್ಪಾದನ ಸಲುವಾಗಿ ಯಾವ ಪ್ರಕಾರ ವ್ಯವಸ್ಥೆ ಮಾಡಿದರೆ ಒಳ್ಳೆಯದು, ಹೇಗೆ ಮಾಡಿದರೆ ಉತ್ಪತ್ತಿ ಹೆಚ್ಚುತ್ತದೆ ಎಂಬುದರ ಬಗ್ಗೆ ಸೀಲಿಂಗ್ ಹೇಳಿದ್ದಾರೆ. ಎಕ್ಸ್‌ಟೆನ್‌ಸಿವ್ ಕಲ್ಟಿವೇಷನ್ ಮತ್ತು ಇನ್‌ಟೆನ್‌ಸಿವ್ ಕಲ್ಟಿವೇಷನ್ನಿಗೆ, ಉತ್ಪತ್ತಿ ಹೆಚ್ಚುವುದಕ್ಕೆ ಅಡ್ಡಿ ಬರತಕ್ಕಂಥ ಅಥವಾ Landlord ಟೆನೆಂಟ್ ರಿಲೇಷನ್‌ಷಿಪ್ಪಿಗೆ ಆಘಾತ ತರುವಂಥ ಈ ಸೀಲಿಂಗ್ ಕೂಡಿಸಬಾರದು. ಸೀಲಿಂಗ್ ಕೂಡಿಸಿದರೆ ಪ್ರೊಡಕ್ಷನ್ನಿಗೆ ಪ್ರತಿಕೂಲವಾಗುತ್ತದೆ, ನಮ್ಮ ಆಕ್ಟಿವಿಟಿಯ ಮೇಲೆ, ಹಣಕಾಸಿನಮೇಲೆ ಮತ್ತು ವ್ಯಕ್ತಿಯ ಎಲ್ಲ ತೆರದ ಸಾಮರ್ಥ್ಯಗಳಮೇಲೆ ಕಂಟ್ರೋಲ್ ಹಾಕಿದಂತೆ ಆಗುತ್ತದೆ. ಪ್ರಥಮತಃ public interest serve ಆಗುವ ಹಾಗೆ assurance ಆಗುತ್ತದೆಯೋ ಇದು ಹೇಗೆ? Production ಹೆಚ್ಚಾಗುತ್ತದೆಯೋ ಹೇಗೆ? ಇಷ್ಟು ದಿವಸಗಳವರೆಗೆ ಆಗಿರುತ್ತದೆಯೋ ಹೇಗೆ? ಎಲ್ಲರಿಗೂ ಸಾಕಷ್ಟು ಭೂಮಿ ಸಿಗುತ್ತದೆಯೋ ಹೇಗೆ? ಸಿಕ್ಕರೆ, ಅವರಿಂದ ಇತರರಿಗಿಂತಲೂ ಹೆಚ್ಚು ಉತ್ಪಾದನೆ ಮಾಡಲು ಸಾಧ್ಯವೋ ಹೇಗೆ? ಇದನ್ನೆಲ್ಲಾ ವಿಚಾರಿಸಿರಿ. ಇದು ಪ್ರಥಮ, ಮಾರ್ಗ. ಹಾಕುವುದಾದರೆ ಎಲ್ಲ ಸೆಕ್ಟರ್ ಮೇಲೂ ಸೀಲಿಂಗ್ ಕೂಡಿಸುವುದು ಅಗತ್ಯ. ಒಬ್ಬರಿಗೆ ಮಾಡಿ ಇನ್ನೊಬ್ಬರಿಗೆ ಬಿಡುವುದು ಸರಿಯಲ್ಲ. ಇದು ಎರಡನೆಯ ಮಾರ್ಗ. ಮೂರನೆಯ ಮಾರ್ಗವೆಂದರೆ ನಿದಾನ ಪಕ್ಷದಲ್ಲಿ ಪರ್ಸನಲ್ ಕಲ್ಟಿವೇಷನ್‌ಮೇಲೆ ಮತ್ತು ಅಲ್ಲಿಯವರೆಗೆ ಹಾಕಬೇಡಿರಿ. ಎಲ್ಲಿ ಹೆಚ್ಚು ಆದಾಯವಿದೆ ಅಲ್ಲಿಂದ ಇದು ಹಾಕಿರಿ. ವ್ಯವಸಾಯಕ್ಕೆ ಸೀಲಿಂಗ್ ಬೇಡ. This is not a Scientific method. ಸೀಲಿಂಗ್ ಹಾಕುವ Scientific method ಎಂದರೆ ಅದು ಎಲ್ಲಿಂದ ಆದಾಯ ಮತ್ತು ಸಂಪತ್ತು ಹೆಚ್ಚು ಇದೆಯೋ ಅಲ್ಲಿಂದ ಹಾಕಬೇಕು. ಹೀಗಾದರೂ ಮಾಡಿರಿ. ಇದು ನಾಲ್ಕನೆಯ ಮಾರ್ಗ. Ceiling should be imposed from highest levels. ಎಲ್ಲಿ ಆದಾಯ, ಸಂಪತ್ತು ಹೆಚ್ಚಾಗಿದೆ ಅಲ್ಲಿಂದ ಸೀಲಿಂಗ್ ಹಾಕಿ. ವ್ಯವಸಾಯ ಮಾತ್ರ ಎಲ್ಲಕ್ಕಿಂತ ಕೆಳದರ್ಜೆಯಲ್ಲಿದೆ. ಅಂಥಾದ್ದಕ್ಕೆ ಸೀಲಿಂಗ್ ಬೇಡ. ಅದು ಹಾನಿಕರ. ಈ ಪ್ರಕಾರ ಮಾಡಬೇಕು. ಇದಲ್ಲದೆ ಈ ಬಿಲ್ಲಿನಿಂದ efficient farms ವರ್ಗೈರೆ ಒಂದು ಕಡೆ exempt ಮಾಡಿದ್ದೀರಿ ಮತ್ತು ಇನ್ನೊಂದು ಕಡೆಗೆ ಸೀಲಿಂಗ್ ಕೂಡ್ರಿಸುತ್ತೀರಿ. ಕೂಡಿಸಲು ಆಧಾರವಾದರೂ ಏನು? family holding. 1200 ರೂಪಾಯಿಗಳ ಫಾಮಿಲಿ ಹೋಲ್ಡಿಂಗ್ ಠರಾಯಿಸಿದ್ದೀರಿ. ಯಾವ ಬೇಸಿಸ್‌ಮೇಲೆ ಠರಾಯಿಸಿದ್ದೀರಿ ಎಂದು ಕೇಳುತ್ತೇನೆ 1,200 ರೂಪಾಯಿಗಳ ಉತ್ಪನ್ನವನ್ನು ಐದು ಮಂದಿ. ಫ್ಯಾಮಿಲಿಗೆ ಇದನ್ನು ಹಂಚಿದರೆ ತಿಂಗಳಿಗೆ 100 ರೂಪಾಯಿ ಬಿದ್ದರೆ ಪ್ರತಿ ದಿವಸಕ್ಕೆ ಹತ್ತು ಆಣೆ ಪ್ರತಿಯೊಬ್ಬರಿಗೂ ಬಿದ್ದ ಹಾಗಾಯಿತು. ಅವರಿಗೆ ಹೆಚ್ಚು ಶ್ರೀಮಂತಿಕೆ ಬೇಕು ಎಂದು ನಾನು ಹೇಳುವುದಿಲ್ಲ.

(ಶ್ರೀ ಬಿ. ಜಿ. ಖೋತ್)

ಆದರೆ ನಿಲ್ಲಲ್ಲಿಕ್ಕೆ ಮನೆ, ವಸತಿ ಅನ್ನ ಬಟ್ಟೆ ಇತ್ಯಾದಿಗಳಿಗೆ ಪ್ರತಿ ಒಬ್ಬ ಮನುಷ್ಯನಿಗೆ ಪ್ರತಿ ದಿವಸಕ್ಕೆ ಎಷ್ಟು ಖರ್ಚು ಬರಬಹುದು ಅದನ್ನು ಅಂದಾಜು ತೆಗೆಯಿರಿ. ಅನಂತರ ಶಿಕ್ಷಣ ಕೊಡುವುದಕ್ಕೇ ಆಗಲಿ, ವೈದ್ಯಕೀಯಕ್ಕಾಗಲಿ ಮತ್ತು ಇತರ ಎಲ್ಲ ನಿತ್ಯ ನೈಮಿತ್ತಿಕ ಕ್ರಿಯೆಗಳಿಗೆ ಆಗಲಿ ಎಷ್ಟು ಪ್ರೊವೈಡ್ ಮಾಡಬೇಕೋ ಅಷ್ಟನ್ನೇ ಮಾಡಿ. ಹಾಗೆ ಮಾಡಿದರೆ 1200 ರೂಪಾಯಿಗಳು ಸಾಲಬಹುದೋ? ಠರಾಯಿಸಿರುವುದು ಸಾಲದು. ಟೆನೆಂಟ್ಸ್ ಇರಲಿ, ಲ್ಯಾಂಡ್ ಲ್ಯಾರ್ಡ್ಸ್ ಇರಲಿ ಯಾರೇ ಇರಲಿ 1200 ರೂಪಾಯಿ ಠರಾಯಿಸಿದರೆ ಕಷ್ಟವಾಗುತ್ತದೆ. ಮತ್ತು ಸೀಲಿಂಗಿನಿಂದ ಹೆಚ್ಚು ಆದಾಯ ಅಷ್ಟೊಂದು ಸಾಧ್ಯವಿಲ್ಲ? ಈಗ ಒಬ್ಬ ಶಿಪಾಯಿ ಇದ್ದಾನೆ ಅವನಿಗೆ 100 ರೂಪಾಯಿ ಪಗಾರ ಕೊಡುತ್ತಾರೆಂದ ನೀವು ತಿಳಿದುಕೊಳ್ಳಿ, ಇದು minimum ಪಗಾರ ಮತ್ತು 1000 ರೂಪಾಯಿ ಇದ maximum ಪಗಾರ ಈಗ ನಡೆದಿರುತ್ತದೆ. ಈ 1 to 10 ರೇಷಿಯೋ ಏನು ಇದೆ ಅದನ್ನೇ ಫ್ಯಾಮಿಲಿ ಹೋಲ್ಡಿಂಗ್ಸ್‌ಗೂ ತನ್ನಿ. ಅದರಂತೆ ಯಾರೊಬ್ಬರೇ ಇರಲಿ 1 to 10 ಇಲ್ಲಿಯೂ ಠರಬೇಕು. ಫ್ಯಾಮಿಲಿ ಹೋಲ್ಡಿಂಗ್ಸ್ ಮಿನಿಮಮ್ ಇಷ್ಟು ಇರಬೇಕು, ಮ್ಯಾಗ್ಸಿಮಮ್ ಇಷ್ಟು ಇರಬೇಕು ಎಂದು ಮಾಡಿರಿ. ವರ್ಷಕ್ಕೆ 1000 ಮಿನಿವಮ್ ಇದ್ದರೆ ಹೆಚ್ಚು. ಮ್ಯಾಗ್ಸಿಮಮ್ ಹೋಲ್ಡಿಂಗ್ 1 to 10 ಪ್ರಕಾರ ವರ್ಷಕ್ಕೆ 10 ಸಾವಿರ ಆಗುತ್ತದೆ. ಆ ರೀತಿ ಪ್ರೊವೈಡ್ ಮಾಡಿರಿ. 3600 ರೂಪಾಯಿ ಎಂದು ಪ್ರೊವೈಡ್ ಮಾಡಿದರೆ ಯಾವ ತರಹ ಉಪಯೋಗಕ್ಕೂ ಬರುವುದಿಲ್ಲ. ಅದರಿಂದ ಯಾವ ಕೆಲಸವೂ ಸಾಧ್ಯ ಆಗುವುದಿಲ್ಲ. ಅದನ್ನು ಇನ್‌ಕ್ರೀಸ್ ಮಾಡಬೇಕು. It must be liberalised. ಕಡಮೆ ಆದಾಯ ಮೂಲಕ ಅನೀತಿ ಮತ್ತು corruptionಗೆ ಹೆಚ್ಚು ಅವಕಾಶ ಕೊಟ್ಟಂತೆ ಆಗುತ್ತದೆ. ಗುಣಗಳಿಗೆ ಮಹತ್ವವಿಲ್ಲದಂತಾಗುತ್ತದೆ. ಇದು ವ್ಯವಹಾರ ಅನುಭವಸಿದ್ಧ ಮಾತು. ಇಷ್ಟೆಲ್ಲಾ ಮಾಡಿ, ಕಲ್ಲಪ್ಪನದು ತೆಗೆದು ಮಲ್ಲಪ್ಪನಿಗೆ ಕೊಟ್ಟರೂ ಇತರರಿಗಿಂತ ಹೆಚ್ಚು ಪ್ರೊಡಕ್ಷನ್ ಅಶಕ್ಯ ಮತ್ತು Socialistic pattern ನೂ ಅಸಾಧ್ಯ ದೋಷ ಮಾತ್ರ ಪವ ದೇಶಗಳಿಗೆ. ಹೀಗಾಗುತ್ತದೆ. ಹಾಕುವುದಾದರೆ ಇನ್‌ಕಂ (income) ಪ್ರಕಾರ ಸೀಲಿಂಗ್ ಎಕರೆಮೇಲೆ ಹಾಕಬೇಕು.

ಇನ್ನು ಕೋ-ಆಪರೇಟಿವ್ ಫಾರ್ಮಿಂಗ್ ಎರಡನೆಯ ವಿಷಯ. ಕೋ-ಆಪರೇಷನ್ ಎಂಬುದರ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಅನೇಕರಿಗೆ ಅದಿನ್ನೂ ಅರ್ಥವಾಗಿಲ್ಲ ಎಂದು ಕಾಣುತ್ತದೆ. ಅಗ್ರೇರಿಯನ್ ರಿಫಾರಮ್ಸ್ ಮಾಡುವಾಗ ಕೋ-ಆಪರೇಟಿವ್ ಫಾರ್ಮಿಂಗಿಗೆ ಹೆಚ್ಚು ಮಹತ್ವ ಬಂದಿದೆ. ಇದು ಒಂದು ನ್ಯಾಷನಲ್ ಪ್ರಾಬ್ಲಂ ಆಗಿದೆ. ಕಾರಣ, Co-operation ಎಂದರೇನು ಇದನ್ನು ಮುಂಚೆ ತಿಳಿಯಬೇಕು. Co-operation ಈ ಶಬ್ದದಲ್ಲಿ ಆಪರೇಷನ್ ಅಂದರೆ ಕೆಲಸಮಾಡು, to work, to act, to come together for mutual help. Co-operation is ಬೇ ಇಸ್ಮಿ ಎಂದರೆ, between two parties. ಎಂದರೆ ಒಬ್ಬರಿಗೊಬ್ಬರು ಪರಸ್ಪರ ಸಹಾಯಮಾಡುವುದು, ಇದು co-operation. ವ್ಯವಸಾಯದಲ್ಲೇನು ಕೋ-ಆಪರೇಷನ್ ಮಾಡುವುದೆಂದರೆ, ನಮ್ಮಲ್ಲಿ ದನಕರು, ಮಂದಿ ಇದ್ದರೆ ಅವು ನಿಮಗೆ ಬೇಕಾದಾಗ ನಿಮ್ಮಲ್ಲಿ ಕೆಲಸಕ್ಕೆ ಹೋಗುವುದು, ನೀವು ನಮಗೆ ಬೇಕಾದಾಗ ಕೆಲಸಕ್ಕೆ ಬರುವುದು. ಇದೇ co-operation. ಇದೇ ಪರಸ್ಪರ ಸಹಾಯ. ಹೀಗಿಲ್ಲದಿದ್ದರೆ ಅದು co-operationನೇ ಅಲ್ಲ. It is but an union or a collection, an association or a combination of persons. It is co-operation, in which there is mutual help or assistance. Co-operation is not merely an union or a collection or an organisation but ನಮ್ಮಲ್ಲಿ ದನ, ಕರು, ಎತ್ತು ವಗೈರೆ ಇದ್ದರೆ ನಮಗೆ ನೀವು, ನಿಮಗೆ ನಾವು ಅವುಗಳ ಸಹಾಯಮಾಡಬೇಕು. ಈ ಪ್ರಕಾರ ಈ co-operative farmingದಲ್ಲಿ ಇಲ್ಲ. ಎಲ್ಲರ ಕೂಡುವಿಕೆ ಇದ್ದರೂ ಪರಸ್ಪರ ಸಹಾಯದ ಸಂಬಂಧ ಬರುವುದಿಲ್ಲ. ಇದರಲ್ಲಿ ತನ್ನದು ನನ್ನದು ಎನ್ನುವಂಥ ಆಸಕ್ತಿ ಹೆಚ್ಚುಮಾಡುವ ಅಥವ ಸ್ವತಂತ್ರ ಭಾವನೆ ಇಲ್ಲ. ತನ್ನ ದಿನಗೂಲಿ, ತನ್ನ ಪಗಾರ ಸಿಕ್ಕರೆ ಸಾಕು ಎಂದು ಭಾವನೆ ಆಗುತ್ತದೆ. ಇದರಲ್ಲಿ ಓನರ್, ಟೆನೆಂಟ್ ಮತ್ತು ಅಗ್ರಿಕಲ್ಚರಲ್ ಲೇಬರರ್ ಈ ಮೂವರು ಕೂಡಿ ದುಡಿಯುವರು. ಈ ಮೂರೂ ಕೂಡ ಹಾಕಿ ಕೋ-ಆಪರೇಷನ್ ಅಂದರೆ ಕೇವಲ collection ಮಾಡುತ್ತೀರಿ. But, this is a sad combination of owners, tenants and labourers with their different interests and it will harm agriculture and retard the progress of its production and the development of the country. ಕೈಯಿಂದ collection ಮಾಡುತ್ತೀರಿ ಮತ್ತು ಬಾಯಿಂದ co-operation ಬೇಡುತ್ತೀರಿ. ಇದು ಹೇಗೆ ಸಾಧ್ಯ? Collection differs from co-operation. ನನಗೆ ತಿಳಿದಷ್ಟು ಹೇಳುತ್ತೇನೆ. If you can understand what co-operation really is, if you take it in its real sense and object I would be thankful. ಆದರೆ ನನ್ನ ಸಮಜೂತಿ ಪ್ರಕಾರ 50 ವರ್ಷಗಳಲಾಗಾಯಿತು Co-operative Department ಕೆಲಸಮಾಡಿದರೂ ಅದರ ಮೂಲಗ್ರಾಹೀ ರಹಸ್ಯವನ್ನೇ ತಿಳಿದಿಲ್ಲ ಎಂದು ಅನಿಸುತ್ತಾ ಇದೆ. Co-operative farming ಉತ್ತಮ ಅನಿಸಿದರೂ theoretically. ಈಗ ವ್ಯವಹಾರದಲ್ಲಿ ಇಬ್ಬರು ಕೂಡಿ ಒಂದು ಹೊಲಮಾಡಿದರೆ ಅದು 42 ತಿಂಗಳತನಕ ಚಲೋ ನಡೆಯುವುದು ಕಠಿಣ. ಅಂದಮೇಲೆ co-operative farming ಚಲೋ ನಡಿಸುವುದಂತೂ ಒತ್ತಟ್ಟಿಗಿರಲಿ, ಅಗ್ರಿಕಲ್ಚರಲ್ ಕೋ-ಆಪರೇಟಿವ್ ಫಾರ್ಮಿಂಗ್ ಮಾಡುತ್ತೇವೆಂದು ಹೇಳಿ ಒಂದೊಂದು ಹಳ್ಳಿಯಲ್ಲಿ ಒಂದೊಂದು ಫಾರಂ ಮಾಡುವುದಾದರೆ ಈಗಿನ ಸ್ಥಿತಿಯಲ್ಲಿ ಅಷ್ಟೊಂದೂ ಹಿತಕರವಲ್ಲ. ಸದ್ಯಕ್ಕೆ ಇದನ್ನು ಷುರು ಮಾಡಬಾರದು. ಇದನ್ನು ಮಾಡುವುದಕ್ಕೆ ಮುಂಚೆ Co-operative credit, co-operative marketing, co-operative purchasing, ware housing, irrigation, co-operative industries ಇತ್ಯಾದಿ ಜಾರಿಗೆ ತಂದು co-operative philosophy ಜನರಿಗೆ ತಿಳಿಸಿರಿ. ಅದರ ರುಚಿ ಅವರಿಗೆ ಹತ್ತಲಿ. ಇದರ ಸಲುವಾಗಿ concentrate in educating and training them instead of concentrating in ceilings, etc. Let them first of all be accustomed or be habituated to co-operate with each

other and then co-operative farming would succeed. Unless they understand what co-operation or its philosophy or its practice is, co-operative farming would not be successful and it cannot be of any benefit to the agriculturists and to the country. It is only more possible through co-operation such as industries etc. ಈ ಪ್ರಕಾರ ನೀವು ಮಾಡಿರಿ. ಅಲ್ಲದೆ, ಒಂದು ಕಡೆಗೆ co-operative farming ಎನ್ನುವುದು ಮತ್ತೊಂದು ಕಡೆಗೆ tiller is the owner ಎನ್ನುವುದು, ಹೋಲ್ಡಿಂಗ್ ಮೇಲೆ ಸೀಲಿಂಗ್ ಹಾಕುವುದು, ರೈತನಿಗೆ ಮಾಲಕೀ ಒಪ್ಪಿಸೋದು— ಇಂಥ ಅನೇಕ ಪರಸ್ಪರ ವಿರೋಧಿ ಕೆಲಸಮಾಡುತ್ತಾ ಹೋದರೆ ಅದರಿಂದ ಯಾವುದೂ ಯಶಸ್ವಿಯಾಗುವುದು ಸಾಧ್ಯವಿಲ್ಲ. ಯಾಕಂದರೆ co-operative farming ದಲ್ಲಿ tiller owner ಆಗೋದು ಶಕ್ಯ ಇಲ್ಲ. ಹೋಲ್ಡಿಂಗ್‌ಮೇಲೆ ಸೀಲಿಂಗ್ ಹಾಕುವುದು ಕಾರಣ ಇಲ್ಲ. ಆದ್ದರಿಂದ ಅದರ ವಿಚಾರ ಬಿಟ್ಟುಬಿಡಬೇಕು. ಈ ಬಿಲ್ಲಿನ provision ಪ್ರಕಾರ ನೀವು ಮತ್ತೇನು ಮಾಡಿ ದೀರಿ ಅಂದರೆ, co-operative member ಮತ್ತು ಇನ್ನೊಬ್ಬ non-member, co-operative tenant ಮತ್ತು ಇನ್ನೊಬ್ಬ non-co-operator tenant ಇವರೊಳಗೆ ಭೇದಭಾವಮಾಡಿದ್ದೀರಿ. ಇದು ನ್ಯಾಯವಲ್ಲ. ಇದನ್ನು ತೆಗೆದುಹಾಕಿರಿ. ಎಲ್ಲರನ್ನೂ ಸಮಾನ ತಿಳಿಯಿರಿ. ಯಾಕೆಂದರ ಇದು voluntary co-operation ಮತ್ತು ಎಲ್ಲರೂ ಪ್ರಜಾಜನರೇ.

ಇನ್ನು ಕಾಂಪೆನ್‌ಷೇಷನ್ ವಿಚಾರದಲ್ಲಿ ಎರಡು ಮಾತು ಹೇಳಬೇಕಾಗಿದೆ. ಸೀಲಿಂಗ್ ಇಲ್ಲದಲ್ಲಿ compensation ಇಲ್ಲ. ಆದರೂ ಎರಡು ಮಾತು. ನಿಜವಾಗಿಯೂ ನ್ಯಾಯಮಾಡುವುದಾದರೆ ಮಾರ್ಕೆಟ್ ಪ್ರೈಸ್ ಏನಾಗುತ್ತದೆಯೋ ಅಷ್ಟು ಪರಿಹಾರ ಕೊಡ ಬೇಕು. ಐದು ಪಟ್ಟು ಹದಿನೈದು ಪಟ್ಟು ಎಂದು ಹೇಳುವುದು ಸರಿಯಲ್ಲ. ಈ ಭೂಸುಧಾರಣೆಯಿಂದ ಯಾರಿಗೆ ಪ್ರತ್ಯಕ್ಷ ಸಂಬಂಧ ಬರುತ್ತದೆಯೋ ಅಂಥ ವರಿಗೆ ಅದು ಗೊತ್ತು. ಅಂಥ ಸಾವಿರಾರು ಜನರ ಪರಿಸ್ಥಿತಿಯನ್ನು ಲಕ್ಷ್ಯಕ್ಕೆ ತೆಗೆದುಕೊಂಡು ಮಾರ್ಕೆಟ್ ಪ್ರೈಸ್ ಆಗುವುದನ್ನು ಪರಿಹಾರ ಕೊಡಬೇಕು; ಇಂದಿನ ಮಾರ್ಕೆಟ್ ಪ್ರೈಸನ್ನು ಗಮನಕ್ಕೆ ತೆಗೆದುಕೊಳ್ಳ ಬೇಕು. That is the only justice. If we do that, that will satisfy and help, if at all compensation is to be given and ownership to be conferred upon the tenants. I am not in favour of conferring ownerships on the tenants. Why ownership should be conferred at all to the tenants? On the other hand I am of opinion that tenant should be provided with every safeguard and facility such as he should not be evicted for a fixed period and he should be made to give a fair rent. If this is done there would be no need of *conferring* ownership to tenants as the land will be with them and also no difference of opinion between the landlord and the tenant. There would be healthy and cordial relations between the two all along. ಮತ್ತು ಸೋಷಿಯಲಿಸ್ಟಿಕ್ ಪಾಟರ್ನ್ ಆಫ್ ಸೊಸೈಟಿ ಮಾಡುತ್ತೇವೆಂದು ಹೇಳುತ್ತಾ ownership confer ಮಾಡಬೇಕೆಂದು ಏನು ಇಟ್ಟುಕೊಂಡಿದ್ದೀರೋ ಅದೂ ಸಹ ಸರಿಯಾಗಿಲ್ಲ. It does not hold good. It goes contrary. ಏಕೆಂದರೆ ಒಂದು ಗಿರಣಿಯಲ್ಲಿ ಕೆಲಸಮಾಡತಕ್ಕವರು ಕೂಲಿ ಗಾರರು. ಹಾಗಾದರೆ ಗಿರಣಿಯು ಬಡತನ ಕೂಲಿ ಗಾರರಿಗೆ ವರ್ಗಾವಣೆಮಾಡಬೇಕಲ್ಲವೇ? ಗಿರಣಿಯು ಬಡತನ ಕೂಲಿಗಾರರಿಗೆ ಸೇರಿದ್ದೇ? If you are going to confer ownership to tenants it will also be as if transferring the mills to the labourers. In the social pattern of society it cannot be feasible. It does not say so. ಈ ರೀತಿ ಮಾಡುವುದು ಸರಿಯಲ್ಲ. ಆದುದರಿಂದ ಈ ಮಸೂದೆಯ ಪ್ರಕಾರ title, ownership transfer ಮಾಡಬೇಕೆಂದಿರುವ ಪ್ರಶ್ನೆ ಯನ್ನು ತೆಗೆದುಹಾಕಬೇಕು. ಹೀಗೆ ಮಾಡಿದರೆ ರೈತ ಮತ್ತು ಭೂಮಾಲಿಕ ಇಬ್ಬರಿಗೂ ಹಿತವಾಗುತ್ತದೆ. Productionನ್ನು ಹೆಚ್ಚಾಗುತ್ತದೆ. ಹೀಗೆ ಮಾಡಲು ಪ್ರಯತ್ನಮಾಡಬೇಕು. ಹೀಗೆ ಮಾಡಿದರೆ ಈ ಬಿಲ್ಲು ಒಂದು simplified set up ಆಗುತ್ತದೆ. ಈ ಮಸೂದೆಯಲ್ಲಿರುವ ಕ್ಲಿಷ್ಟವಾದ ಅಂಶಗಳೆಲ್ಲಾ ಹೊರಟು ಹೋಗುತ್ತವೆ. ಲಕ್ಷಾಂತರ ರೂಪಾಯಿ ಖರ್ಚು ಸಹ ಆಗುವುದು ನಿಲ್ಲುತ್ತದೆ. ಅವರಿಬ್ಬರ ಸಂಪೂರ್ಣ ಶಕ್ತಿಯಿಂದ, ಅವರಿಬ್ಬರ ಕೋ-ಆಪ ರೇಷನ್ ಆಗುವುದರಿಂದ ಸರಕಾರದಮೇಲೆ ವಿಶೇಷ ಭಾರವೂ ಬೀಳುವುದಿಲ್ಲ. ಮತ್ತು ಆಹಾರ ಉತ್ಪತ್ತಿಯೂ ಹೆಚ್ಚಾಗುತ್ತದೆ. ಈ ಪ್ರಕಾರವಾಡಬೇಕು. Ownership transfer ತೆಗೆದುಹಾಕಬೇಕೆಂದು ಹೇಳುವುದು ಇದೊಂದು conservative idea ಎಂದು ನಿಮಗೆ ಕಾಣಬಹುದು. ಆದರೆ ವಿಚಾರಮಾಡಿ ನೋಡಿದಲ್ಲಿ ದೇಶದ ಮತ್ತು ಜನರ ಹಿತ ದೃಷ್ಟಿಯಿಂದ ಇದೇ ಹಿತಕರ ವಾಗುವ ಮಾತು. ನನಗೆ ತಿಳಿದಮಟ್ಟಿಗೆ ನಮ್ಮ ದೇಶದಲ್ಲಿ ಇಂಥ agrarian reforms ಆಗ ಬೇಕೆಂಬುದು 1938ನೆಯ ಇಸವಿಯಿಂದಲೇ ಪ್ರಯತ್ನ ನಡೆದಿದೆ. 20 ವರ್ಷಗಳಿಂದಲೂ ರಿಫಾರ್ಮ್ ಮಾಡಲು ಪ್ರಯತ್ನಮಾಡುತ್ತಿದ್ದೇವೆ. It is from 1938 and so far as my knowledge goes, it has become worse by such reform than becoming better. ಆದಕಾರಣ ಅನಾದಿ ಕಾಲದಿಂದ ನಿರ್ಬಾಧ ರೀತಿಯಿಂದ ನಡೆದುಕೊಂಡು ಬಂದಿರತಕ್ಕ ಪದ್ಧತಿಯನ್ನು ಬಿಟ್ಟುಬಿಡುವುದು ಬೇಡ. ಘಾತಕವಾದೀತು. ಬೇಕಾದರೆ ರೈತರಿಗೆ ಸಾಕಷ್ಟು Safe guards ಕೊಡಬಹುದು. ಆದರೆ ಅನಾದಿ ಕಾಲದಿಂದ ಈ ಪದ್ಧತಿಯು ಸುಂದರವಾಗಿ ನಡೆದುಕೊಂಡು ಬಂದಿದೆ. ಈ ಪದ್ಧತಿಯಿಂದ ವ್ಯವಸಾಯಕ್ಕೆ ಯಾವ ಧಕ್ಕೆಯೂ ಇನ್ನುವರೆಗೆ ಬಂದಿಲ್ಲ. ಆದ್ದರಿಂದ ಅನಾದಿಕಾಲದಿಂದ ನಡೆದುಕೊಂಡು ಬಂದ ಪದ್ಧತಿಯು ದೇಶದ ಹಿತ ದೃಷ್ಟಿಯಿಂದ ನಾವು ಇದನ್ನು ಮಾಡಬೇಕು. ದೇಶಕ್ಕೆ ಯಾವುದು ಒಳ್ಳೆಯದೋ ಅದನ್ನು ಮಾಡುವುದು ಸರಿಯಾದುದು. ಆದಕಾರಣ ನಾವು ಈ ಭೂಸುಧಾರಣೆ ಮಾಡುವಾಗ್ಗೆ ಭೂಮಾಲಿಕ ಮತ್ತು ರೈತ ಇವರ ನಡುವೆ healthy terms ಇರಬೇಕು. ಆದ್ದರಿಂದ ಅದನ್ನು ಇದ್ದಹಾಗೆ ಕಾಯು

(ಶ್ರೀ ಬಿ. ಜಿ. ಖೋತ್)

ವುದು ಅಗತ್ಯ. ಆದರೆ ಅವನಿಗೆ ಸಾಕಷ್ಟು ಎಲ್ಲ ಆವಶ್ಯಕ ಸುರಕ್ಷಿತತೆ ಕೊಡಬೇಕು. You think for yourself whether you are successful so far or not. If you are unsuccessful, give it up.

Sri KADIDAL MANJAPPA.—Do you say that ryots will be interested if they are given some rights ?

Sri B.G. KHOT.—Yes, why not, if he is given sufficient necessary safe guards and rights? Both he and the nation will be interested. ಸುಧಾರಣೆ, ಎಂದರೆ ಯಾತಕ್ಕೆ ಅನ್ನಬೇಕು ಅದರ ಅರ್ಥವಾದರೂ ಏನು ? ಯಾವುದನ್ನು ಧಾರಣೆ ಮಾಡುವುದರಿಂದ ಗ್ರಹಣ ಮಾಡುವುದರಿಂದ ಹಿತವಾಗುತ್ತದೆಯೋ ಅದು ಸುಧಾರಣೆ. ಅಂಥಾದ್ದನ್ನು ಮಾಡಬೇಕು. ಯಾವ ಧಾರಣೆಯಿಂದ ಸುಖ ಸಮೃದ್ಧಿ ಸಿಕ್ಕುತ್ತದೆಯೋ ಅಂಥ ಭೂಸುಧಾರಣೆ ಮಾಡಬೇಕು. ಆದರೆ ನಾವು ಮಾಡುವುದು ಈಗ ಹೆಸರಿಗೆ ಮಾತ್ರ ಸುಧಾರಣೆ. ಫಲ ಮಾತ್ರ "ಕು". ಭೂಮಾಲಿಕನು ರೈತನಿಗೆ ತ್ರಾಸ ಕೊಡದಹಾಗೆ ಮಾಡಬೇಕು. ರೈತನ ಹಕ್ಕುಗಳನ್ನು ಕಾಪಾಡಿಕೊಂಡು ಅವನಿಗೆ safe guards ಕೊಡಿ. ಇಬ್ಬರಿಗೂ ಅವರವರಿಗನುಸಾರವಾಗಿ ಸಂರಕ್ಷಣೆ ಕೊಡಬೇಕಾದುದು ನ್ಯಾಯ. In what lies the interest of both the parties, we must look into. ಯೋಗ್ಯ ರೀತಿಯಿಂದ ಭೂಮಾಲೀಕ ಮತ್ತು ರೈತ ಈ ಇಬ್ಬರ relations ನಿಶ್ಚಿತಮಾಡಿ ಯೋಗ್ಯ ಸಂರಕ್ಷಣೆ ಕೊಟ್ಟು ಇಬ್ಬರ ಕಡೆಯಿಂದಲೂ ಕೆಲಸ ತೆಗೆದುಕೊಳ್ಳುವುದು ಉತ್ತಮ. ಇದೊಂದು ಮೂಲಭೂತವಾದ ಸದುದ್ದೇಶ. ಇದರಲ್ಲಿಯೇ ರಾಷ್ಟ್ರದ ಹಿತ. ಇನ್ನೊಂದು tenantsಗೆ ಪರಂಪರೆ 'heirship' ಇರಬೇಕೆಂಬ ಒಂದು ವಿಷಯ ಈ ಮಸೂದೆಯಲ್ಲಿದೆ. ಆದರೆ ಅದೇ ಭೂಮಾಲಿಕನು gift, will ಇತ್ಯಾದಿಗಳಿಂದ ಭೂಮಿಯನ್ನು ಸಂಪಾದಿಸುವುದನ್ನು restrict ಮಾಡಿದ್ದಾಗಿದೆ. ಭೂಮಿಯನ್ನು sale ಮಾಡುವ ಹಕ್ಕನ್ನು ಕೂಡ ಪ್ರತಿಬಂಧ ಮಾಡಿದ್ದಾರೆ. ಈ ಕಾನೂನು ಜಾರಿಯಲ್ಲಿ ಬರುವುದರಿಂದ ರೈತನಿಗೆ ಭೂಮಿಯ inherent heirship ಬರುವಹಾಗೆ ಮಾಡಿದ್ದೇವೆ ಅದನ್ನು ಯಾವ ಆಧಾರದಮೇಲೆ ಮಾಡಿದ್ದಾಗಿದೆ? ಇದು ಯಾವ code? ಇದನ್ನು ತೆಗೆದುಹಾಕಬೇಕು. ಇದು ಮೂಲ ಉದ್ದೇಶಕ್ಕೆ ವಿರುದ್ಧ ಹೋಗುತ್ತದೆ. ಇದರಿಂದ ಅನ್ಯಾಯವಾಗುತ್ತದೆ. ಮತ್ತೊಂದು ವಿಷಯ ಓನರ್ ಕಲ್ಟಿವೇಟರ್ಸ್ ಇರಲಿ, ಟೆನೆಂಟ್ ಕಲ್ಟಿವೇಟರ್ಸ್ ಇರಲಿ ಯಾರು ಇದ್ದರೂ ಎಷ್ಟು ಜಮೀನು ಇದೆ ಅದನ್ನೆಲ್ಲಾ ಸಾಗುಮಾಡಬೇಕು. ಹೋಲ್ಡಿಂಗ್ಸ್‌ಗೆ ಅನುಸಾರವಾಗಿ ಭೂಮಿಯಲ್ಲಿ ಒಂದು ಎಕರೆಗೆ ಇಂತಿಷ್ಟು ಮಿನಿಮಮ್ average ಆಯಾ ಪರಿಸ್ಥಿತಿಗೆ ಅನುಸಾರವಾಗಿ ಕ್ರಾಪ್ ತೆಗೆಯಬೇಕು ಎಂದು ನಿರ್ಬಂಧ ಇರಬೇಕು. ಆ ರೀತಿ ಒಂದು ಪ್ರಾವಿಷನ್ ಮಾಡಬೇಕು. ಈ ಬಿಲ್ಲಿನೊಳಗೆ ಇನ್ನೂ ಎಷ್ಟೋ ಮಹತ್ವದ್ದು ಮತ್ತು ವಿಶೇಷದ ವಿಷಯಗಳಿವೆ. ಅವುಗಳ ವಿಷಯದಲ್ಲಿ ಯೋಗ್ಯ ವಿಚಾರವಾಗಬೇಕಾಗಿದೆ ಮತ್ತು ಆ ಪ್ರಕಾರ ಯಾರಿಗೂ ಪಪಾತಕ್ಷ ಇಲ್ಲದೆ ಮಾಡಬೇಕು. ಈ ಪ್ರಕಾರ ಈ ಬಿಲ್ಲು properly amend ಮಾಡಬೇಕು.

Mr. SPEAKER.—Before we adjourn I should like to draw the attention of the Members regarding the number of Members that have already spoken. Eleven Members have spoken and the time taken in this case is very interesting. First Sri Siddanthi took 80 minutes; Sri Srinivas Shetty took 100 minutes; Sri Kenchappa took 115 minutes; Sri J. P. Sarwesh 15 minutes; Sri Y. Veerappa 85 minutes, Sri D. Mookappa 45 minutes, Sri G. Venkatai Gowda 45 minutes, Sri C. J. Muckannappa 91 minutes, Sri Puttaswamy 45 minutes, Srimathi Vasanthalatha Mirjankar 25 Minutes, Sri B. G. Khot more than 65 minutes. The total time taken by each Party is : Congress Members who have taken part are only 4 and they have taken 3 hours 10 minutes; out of P.S.P. three have taken part and they have taken 5 hours; 4 Independent Members have taken 4 hours and 46 minutes.

A MEMBER—The figures are scientifically given.

Mr. SPEAKER.—It may be scientific. But I want to draw the attention of the Hon'ble Members to the fact that it will be difficult for other Members to get the same opporunity.

Sri KADIDAL MANJAPPA.—Tomorrow we may sit till 7 O'clock and the time limit may be prescribed between 15 to 20 minutes for each Member.

Mr. SPEAKER.—The number of Members who take more time has been exhausted. That is my feeling. I have already said that the speeches should not exceed between 15 and 20 minutes.

Sri V. S. PATIL (Belgaum I).—I may take some more time.

Mr. SPEAKER.—I do not think Sri Patil will take more than half an hour. The House will now rise and meet tomorrow at 1 P.M.

The House adjourned at Thirty Minutes past Six of the Clock to meet again at One of the Clock on Wednesday, the 5th August 1959.